ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 28 ಶನಿವಾರ 2024

₹4

45

ಸಂಪುಟ: 45 | ಸಂಚಿಕೆ: 163 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮೈಸೂರು ಮಿತ್ರ ಶನಿವಾರ 28 ಸೆಪ್ಟೆಂಬರ್ 2024

ಸಿಎಂ ಮುಡಾ ಕೇಸ್ ಬೆನ್ನಲ್ಲೇ ಖರ್ಗೆ ಕುಟುಂಬಕ್ಕೆ ಭೂ ಕಬಳಿಕೆ ಕಂಟಕ

ಲೋಕಾಯುಕ್ತದಲ್ಲಿ ದೂರು ದಾಖಲಿಸಿದ ಬಿಬಿಎಂಪಿ ಮಾಜಿ ಸದಸ್ಯ ಎನ್.ಆರ್.ರಮೇಶ್

ಬೆಂಗಳೂರು, ಸೆ.27–ಮುಡಾ ನಿವೇಶನ ಹಂಚಿಕೆ ಕೇಸ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಂಕಷ್ಟಕ್ಕೆ ಸಿಲುಕಿದ ಬೆನ್ನಲ್ಲೇ ಇದೀಗ ಕಾಂಗ್ರೆಸ್‌ಗೆ ಮತ್ತೊಂದು ಭೂ ಕಬಳಿಕ ಉರುಳು ಸುತ್ತಿಕೊಂಡಿದೆ.

ಮುಡಾ ಹಗರಣದಲ್ಲಿ ಸರ್ಕಾರ ಸಂಕಷ್ಟಕ್ಕೆ ಸಿಲುಕಿದ ಸಂದಿಗ್ಧ ಪರಿಸ್ಥಿತಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಅವರ ಕುಟುಂಬಸ್ಥರ ವಿರುದ್ಧ ಲೋಕಾಯುಕ್ತದಲ್ಲಿ ಮತ್ತೊಂದು ದೂರು ದಾಖಲಾಗಿದೆ. ಬಿಬಿಎಂಪಿ ಮಾಜಿ ಕಾರ್ಪೊರೇಟರ್ ಎನ್.ಆರ್.ರಮೇಶ್ ಅವರು ಭೂ ಕಬಳಿಕೆ ಆರೋಪದಡಿ ಇಬ್ಬರು ಸಚಿವರು ಹಾಗೂ ಹಿರಿಯ ಐಎಎಸ್ ಅಧಿಕಾರಿ ವಿರುದ್ಧ ಲೋಕಾಯುಕ್ತದಲ್ಲಿ ಕ್ರಿಮಿನಲ್ ಪ್ರಕರಣ ದಾಖಲು ಮಾಡಿದ್ದಾರೆ. ಮಲ್ಲಿಕಾರ್ಜುನ ಖರ್ಗೆ, ಸಚಿವ ಪ್ರಿಯಾಂಕ ಖರ್ಗೆ, ರಾಹುಲ್ ಖರ್ಗೆ, ರಾಧಾಬಾಯಿ ಖರ್ಗೆ, ರಾಧಾಕೃಷ್ಣ, ಸಚಿವ ಎಂ.ಬಿ.ಪಾಟೀಲ್ ಮತ್ತು ಐಎಎಸ್ ಅಧಿಕಾರಿ ಡಾ.ಎಸ್.ಸೆಲ್ವಕುಮಾರ್ ವಿರುದ್ಧ ಲೋಕಾಯುಕ್ತದಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿದೆ.

ಮಲ್ಲಿಕಾರ್ಜುನ ಖರ್ಗೆ ಕುಟುಂಬಸ್ಥರ 'ಸಿದ್ಧಾರ್ಥ ವಿಹಾರ ಟ್ರಸ್ಟ್' ಸಂಸ್ಥೆ ಹೆಸರಿಗೆ ಒಂದೇ ಉದ್ದೇಶಕ್ಕೆ 2 ಪ್ರತ್ಯೇಕ ಸರ್ಕಾರಿ ಸಂಸ್ಥೆಗಳ ಮೂಲಕ 2 ಬೃಹತ್ ಆಸ್ತಿಗಳ ಹಂಚಿಕೆ ಆರೋಪ ಕೇಳಿಬಂದಿದೆ ಸಿದ್ಧಾರ್ಥ ವಿಹಾರ ಟ್ರಸ್ಟ್‌ನ ಅಧ್ಯಕ್ಷರು ಹಾಗೂ ಟ್ರಸ್ಟಿಗಳಾಗಿರುವ ಮಲ್ಲಿಕಾರ್ಜುನ ಖರ್ಗೆ ಮತ್ತು ಅವರ ಪತ್ನಿ ರಾಧಾಬಾಯಿ ಖರ್ಗೆ, ಮಕ್ಕಳಾದ ಸಚಿವ ಪ್ರಿಯಾಂಕ್ ಖರ್ಗೆ, ರಾಹುಲ್ ಖರ್ಗೆ ಹಾಗೂ ಅಳಿಯ ರಾಧಾಕೃಷ್ಣ ಅವರನ್ನು ಒಳಗೊಂಡಿರುವ ಸಿದ್ಧಾರ್ಥ ವಿಹಾರ ಟ್ರಸ್ಟ್, ಶಿಕ್ಷಣ ವ್ಯವಸ್ಥೆ ಎಂಬ ಹೆಸರಿನಲ್ಲಿ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಸರ್ಕಾರಿ ಸಂಸ್ಥೆಗಳಿಂದ ಕಾನೂನು ಬಾಹಿರವಾಗಿ ಸರ್ಕಾರಿ ಸ್ವತ್ತುಗಳನ್ನು ಅಧಿಕಾರ ಮತ್ತು ರಾಜಕೀಯ ಪ್ರಭಾವವನ್ನು ಬಳಸಿಕೊಂಡು ಮಂಜೂರು ಮಾಡಿಸಿಕೊಂಡಿರುವ ಆರೋಪ ಕೇಳಿ ಬಂದಿರುವ ಹಿನ್ನೆಲೆ ದೂರು ದಾಖಲಾಗಿದೆ.

ಭೂ ಮಂಜುರಾತಿ ಯಾವಾಗ?: ಸಿದ್ಧಾರ್ಥ ವಿಹಾರ ಟ್ರಸ್ಟ್ ಹೆಸರಿಗೆ 2014ರಲ್ಲಿ ಶೈಕ್ಷಣಿಕ ಉದ್ದೇಶಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮೂಲಕ ಬಿಟಿಎಂ 4ನೇ ಹಂತದ 2ನೇ ಬ್ಲಾಕ್‌ನ 8,002 ಚ. ಮೀ. (86,133 ಚ.ಅಡಿ) ವಿಸ್ತೀರ್ಣದ ಸಿಎ ನಿವೇಶನ ಸಂಖ್ಯೆ 5 ಹಂಚಿಕೆಯಾಗಿದೆ. 30 ವರ್ಷಗಳ ಗುತ್ತಿಗೆಗೆ ಪಡೆದಿರುವ ಬಿಟಿಎಂ 4ನೇ ಹಂತದ ಸ್ವತ್ತಿಗೆ 1,99,56,572 ರೂಪಾಯಿಗಳನ್ನು ಬಿಡಿಎಗೆ ಪಾವತಿಸಿದ್ದ ಸಿದ್ಧಾರ್ಥ ವಿಹಾರ ಟ್ರಸ್ಟ್, ಈ ನಿವೇಶನಕ್ಕೆ ಸಿದ್ಧಾರ್ಥ ವಿಹಾರ ಟ್ರಸ್ಟ್‌ನ ಕಾರ್ಯದರ್ಶಿ ಮಾರುತಿರಾವ್ ಡಿ. ಮಾಲೆ ಹೆಸರಿಗೆ ಸ್ವಾಧೀನ ಪತ್ರ ನೀಡಿ, ಬಿಬಿಎಂಪಿಯಿಂದ ಖಾತಾ ಆಗಿದೆ.

ಸಿದ್ಧರಾಮಯ್ಯ ಸಿಎಂ ಆಗಿದ್ದಾಗ F ನಿವೇಶನ ಸಿದ್ಧಾರ್ಥ ವಿಹಾರ ಟ್ರಸ್ಟ್ ಹೆಸರಿಗೆ ಹಂಚಿಕೆಯಾಗಿದ್ದರೂ 2024ರಲ್ಲಿ ಶೈಕ್ಷಣಿಕ ಉದ್ದೇಶಕ್ಕಾಗಿ ಮತ್ತೆ ಸಿದ್ಧಾರ್ಥ ವಿಹಾರ ಟ್ರಸ್ಟ್ ಹೆಸರಿಗೆ ಸಿಎ ನಿವೇಶನ ಹಂಚಿಕೆ ಮಾಡುವಂತೆ ಕೆಐಎಡಿಬಿಗೆ ಟ್ರಸ್ಟಿ ರಾಹುಲ್ ಖರ್ಗೆಯಿಂದ ಅರ್ಜಿ ಸಲ್ಲಿಕೆಯಾಗಿದೆ. ಸಲ್ಲಿಸಿದ ಅರ್ಜಿಗೆ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಅನುಮೋದನೆ ನೀಡಿ ಸಿದ್ಧಾರ್ಥ ವಿಹಾರ ಟ್ರಸ್ಟ್ ಹೆಸರಿಗೆ ಯಲಹಂಕ ಬಳಿಯ ಬಾಗಲೂರಿನಲ್ಲಿ ಕೆಐಎಡಿಬಿ ಅಭಿವೃದ್ಧಿ ಪಡಿಸಿರುವ "Hi-Tech Defence & Aerospace Parkನ Hardware Sectorನ 5 ಎಕರೆ ವಿಸ್ತೀರ್ಣದ ಸಿಎ ನಿವೇಶನವನ್ನು ಸಿದ್ಧಾರ್ಥ ವಿಹಾರ ಟ್ರಸ್ಟ್‌ನ ರಾಹುಲ್ ಖರ್ಗೆ ಅವರ ಹೆಸರಿಗೆ 30/05/2024 ರಂದು ಹಂಚಿಕೆ ಮಾಡಲಾಗಿದೆ.

ಈ ನಿವೇಶನಕ್ಕೆ 14,25,00,000 ರೂ. ನಿಗದಿ ಮಾಡಿ 30 ವರ್ಷಗಳ ಗುತ್ತಿಗೆ ಪಡೆಯಲಾಗಿದೆ. ಪ್ರಸ್ತುತ ಬಾಗಲೂರಿನಲ್ಲಿ ಕೆಐಎಡಿಬಿ ಅಭಿವೃದ್ಧಿ ಪಡಿಸಿರುವ Aerospace Parkನಲ್ಲಿ ಮಾರುಕಟ್ಟೆ ಬೆಲೆ ಪ್ರತಿ ಚ. ಅಡಿಗೆ 5,000 ರೂಪಾಯಿಗಳು. ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ಹಂಚಿಕೆ ಮಾಡಲಾಗಿರುವ 5 ಎಕರೆ ವಿಸ್ತೀರ್ಣದ ಸಿಎ ನಿವೇಶನದ ಪ್ರಸಕ್ತ ಮಾರುಕಟ್ಟೆ ಮೌಲ್ಯ ಕನಿಷ್ಠ 110 ಕೋಟಿ ರೂಪಾಯಿಗಳಿಗೂ ಅಧಿಕವಾಗಿದೆ. ರಾಜಕೀಯ ಪ್ರಭಾವ, ಅಧಿಕಾರ ಬಳಸಿಕೊಂಡು ಶೈಕ್ಷಣಿಕ ಸಂಸ್ಥೆಯ ಹೆಸರಿನಲ್ಲಿ ಭೂಕುಳಿಕೆ ಮಾಡಿರುವ ಗಂಭೀರ ಆರೋಪ ಕೇಳಿಬಂದ ಹಿನ್ನೆಲೆಯಲ್ಲಿ ಲೋಕಾಯುಕ್ತದಲ್ಲಿ ದೂರು ದಾಖಲಿಸಲಾಗಿದೆ. ಇದೀಗ ಮುಡಾ ಕೇಸ್‌ನಲ್ಲಿ ರಾಜ್ಯಾದ್ಯಂತ ಪರ–ವಿರೋಧ ಪ್ರತಿಭಟನೆಗಳು ಕಾವು ಏರುತ್ತಿರುವ ಹೊತ್ತಲ್ಲಿ ಖರ್ಗೆ ಕುಟುಂಬದ ವಿರುದ್ಧ ಕೇಳಿಬಂದಿರುವ ಭೂ ಕಬಳಿಕೆ ದೂರು ದಾಖಲಾಗಿರುವುದು ರಾಜ್ಯ ಸರ್ಕಾರ ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿದಂತಾಗಿದೆ.

ದರ್ಶನ್ ಜಾಮೀನು ಅರ್ಜಿ ವಿಚಾರಣೆ ಸೆ.30ಕ್ಕೆ ಮುಂದೂಡಿಕೆ

ಬೆಂಗಳೂರು, ಸೆ.27– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಕೇಸಿನಲ್ಲಿ ಜೈಲು ಸೇರಿರುವ ನಟ ದರ್ಶನ್ ಅಂಡ್ ಗ್ಯಾಂಗ್‌ನ 7 ಮಂದಿಯ ಜಾಮೀನು ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಂಡ ಕೋರ್ಟ್ ಮುಂದೆ ದರ್ಶನ್ ಪರ ವಕೀಲರು ವಾದ ಮಂಡನೆಗೆ ಸಮಯ ಕೋರಿದ್ದಾರೆ. ಈ ಹಿನ್ನೆಲೆಯಲ್ಲಿ ದರ್ಶನ್ ಅವರ ಜಾಮೀನು ಅರ್ಜಿ ವಿಚಾರಣೆಯನ್ನು ಸೋಮವಾರಕ್ಕೆ (ಸೆ.30ಕ್ಕೆ) ಮುಂದೂಡಿಕೆ ಮಾಡಲಾಗಿದೆ.

ಬೆಂಗಳೂರಿನ 57ನೇ ಸೆಷನ್ಸ್ ಕೋರ್ಟ್‌ನಲ್ಲಿ ವಿಚಾರಣೆ ಆರಂಭವಾದ ತಕ್ಷಣ ರೇಣುಕಾಸ್ವಾಮಿ ಕೊಲೆ ಕೇಸಿನ ಎ1 ಆರೋಪಿ ನಟಿ ಪವಿತ್ರಾ ಗೌಡ ಅವರ ಜಾಮೀನು



ಅರ್ಜಿ ವಿಚಾರಣೆ ನಡೆಯುತ್ತದೆ. ಇದಾದ ನಂತರ ಎ2 ಆರೋಪಿ ನಟ ದರ್ಶನ್ ಅವರ ಜಾಮೀನಿನ ಅರ್ಜಿ ವಿಚಾರಣೆ ಮಾಡಲು ಕೈಗೆತ್ತಿಕೊಂಡಾಗ, ದರ್ಶನ್ ಪರ ವಕೀಲರಾದ ಸುನಿಲ್ ಕುಮಾರ್ ಅವರು ಸೋಮವಾರ ವಾದ ಮಂಡನೆ ಮಾಡುವುದಾಗಿ ಸಮಯ ಕೋರಿದ್ದಾರೆ. ಇದರ ಬೆನ್ನಲ್ಲಿಯೇ ನ್ಯಾಯಮೂರ್ತಿಗಳು ನಟ ದರ್ಶನ್ ಅರ್ಜಿ ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಿಕೆ ಮಾಡಿದ್ದಾರೆ.

ಬಿಜೆಪಿ ಸದಸ್ಯತ್ವ ಅಭಿಯಾನ



ಮೈಸೂರಿನ ಚಾಮರಾಜ ಕ್ಷೇತ್ರದ ವಾರ್ಡ್ ನಂ 40 ದೊಡ್ಡ ಒಕ್ಕಲಗೇರಿಯಲ್ಲಿ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ನೇತೃತ್ವದಲ್ಲಿ ಬಿಜೆಪಿ ಸದಸ್ಯತ್ವದ ಅಭಿಯಾನ ನಡೆಯಿತು. ಚಾಮರಾಜ ಕ್ಷೇತ್ರದ ಅಧ್ಯಕ್ಷ ದಿನೇಶ್ ಗೌಡ, ಸೋಮಶೇಖರ ರಾಜು, ನಗರ ಬಿಜೆಪಿ ಎಸ್‌ಟಿ ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎಸ್. ಅರವಿಂದ, ನಾರಾಯಣಸ್ವಾಮಿ, ಪಂಕಜ್, ನಗರ ಬಿಜೆಪಿ ಓಬಿಸಿ ಕಾರ್ಯದರ್ಶಿ ಚೆಲುವರಾಜ ಕುಮಾರ್, ನಜರ್‌ಬಾದ್ ಬಾಬಣ್ಣ, ಆಶೋಕ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಬಿಜೆಪಿ ಸದಸ್ಯತ್ವ ಅಭಿಯಾನ ಕಾರ್ಯಕ್ರಮದಲ್ಲಿ ಮಾಜಿ ಕೇಂದ್ರ ಸಚಿವ ಭಗವಂತ ಖೂಬಾ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಮಂಡಲ ಅಧ್ಯಕ್ಷ ಪೈ.ಟಿ. ರವಿ ಲಕ್ಷ್ಮೀಪುರ, ಮುಖಂಡರಾದ ಕವೀಶ್‌ಗೌಡ, ಎಸ್.ಆರ್. ಗೋಪಾಲ ರಾವ್, ರಾಜಕುಮಾರ್, ಕ್ಷೇತ್ರ ಪ್ರಧಾನ ಕಾರ್ಯದರ್ಶಿ ಹೇಮಂತ್ ಗೌಡ, ಕ್ಷೇತ್ರ ಉಪಾಧ್ಯಕ್ಷ ಹಿನಕಲ್ ಗಣೇಶ್, ಸುನಿಲ್ ಕುಮಾರ್, ಮರಿಸ್ವಾಮಿ ನಾಯಕ, ಹಿನಕಲ್ ಶ್ರೀನಿವಾಸ್ ಮತ್ತಿತರರು ಹಾಜರಿದ್ದರು.

ಭಾರತೀಯ ಯೂತ್ ಹಾಸ್ಟೆಲ್ಸ್ ಸಂಸ್ಥೆಯ 75ನೇ ವಾರ್ಷಿಕೋತ್ಸವದ ಸಮಾರೋಪ ಸಮಾರಂಭ

ಯೂತ್ ಹಾಸ್ಟೆಲ್ಸ್ ಸಂಸ್ಥಾಪಕ ದಿ.ಆರ್.ಜಿ.ಪದಕಿ ಜನ್ಮಶತಾಬ್ಧಿ ಕಾರ್ಯಕ್ರಮ

ಮೈಸೂರು, ಸೆ. 27 – ಭಾರತೀಯ ಯೂತ್ ಹಾಸ್ಟೆಲ್ ಸಂಸ್ಥೆ ಮೈಸೂರಿನ ಯೂತ್ ಹಾಸ್ಟೆಲ್ಸ್ ಗಂಗೋತ್ರಿ ಘಟಕದ 75ನೆಯ ವಾರ್ಷಿಕೋತ್ಸವದ ಸಮಾರೋಪ ಸಮಾರಂಭ ಮತ್ತು ಯೂತ್ ಹಾಸ್ಟೆಲ್ಸ್ ಸಂಸ್ಥಾಪಕ ದಿವಂಗತ ಆರ್.ಜಿ. ಪದಕಿ ಅವರ ಜನ್ಮ ಶತಾಬ್ದಿ ಕಾರ್ಯಕ್ರಮವನ್ನು ಸೆ.29 ರಂದು ಏರ್ಪಡಿಸಲಾಗಿದೆ.

ಸಮಾರೋಪ ಸಮಾರಂಭವು ಮೈಸೂರು ನಗರ ಜಯನಗರದಲ್ಲಿರುವ ಹೊಸ ಕೋರ್ಟ್ ಕಾಂಪ್ಲೆಕ್ಸ್ ಎದುರಿನ 'ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್'ನ ಸಭಾಂಗಣದಲ್ಲಿ ಬೆಳಗ್ಗೆ 10ರಿಂದ ಆರಂಭಗೊಳ್ಳಲಿದೆ. ಸಭಾ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳೂ ಜರುಗಲಿದೆ.

ಕಾರ್ಯಕ್ರಮದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಡಾ. ಎನ್.ಕೆ. ಲೋಕನಾಥ್, ಸಿಐಟಿಬಿ ಮಾಜಿ ಅಧ್ಯಕ್ಷ ಡಿ. ಮಾದೇಗೌಡ, YHAI ಕರ್ನಾಟಕ ರಾಜ್ಯ ಶಾಖೆಯ ಛೇರ್ಮನ್ ಎನ್.ಎಸ್. ಪ್ರಸನ್ನರವರು, YHAI ರಾಷ್ಟ್ರೀಯ ಉಪಾಧ್ಯಕ್ಷ ಹೆಚ್.ರವಿಕುಮಾರ್ ಮುಖ್ಯ ಅತಿಥಿಗಳಾಗಿರುವರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

28.09.2024 ಶನಿವಾರ, ಮಳೆ ನಕ್ಷತ್ರ: ಹಸ್ತ, 27.09.2024 ರಿಂದ 09.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಆಶ್ಲೇಷ, ರಾಹುಕಾಲ : ಬೆಳಗ್ಗೆ 9 ರಿಂದ 10.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ – ಅನುಶೋಧ, ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು :CSIR, CFTRI, Mysuru, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಗೀತಾ. ವೈ. ಪುಟ್ಟಿ, ಎಂ.ಆರ್.ಸುಧಾ, ವ್ಯಾಖ್ಯಾನ–ಡಾ.ಬಿ.ವಿ. ವಸಂತಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಡಾ. ಎನ್. ಎಸ್. ಲಕ್ಷ್ಮೀನಾರಾಯಣಭಟ್ಟ ಅವರ ರಚನೆಗಳು, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ : ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಸ್ವಾತಿ ತಿರುನಾಳ್ ಅವರ ರಚನೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ: 12.00 ಆಯುಷ್‌ವಾಣಿ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.30 ದೇವರನಾಮ–ಎಂ.ಆರ್. ಉದಯಕುಮಾರ್, 12.45 ಜನಪದ ಸಂಗೀತ, 1.20 ಭಾವಗೀತೆಗಳು–ಕೆ. ಬಿ. ಸುನಿತಾ ಆಚಾರ್ಯ, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ : ಪ್ರತಿಭಾ ಪಲ್ಲವ ಅನಿವಾಸಿ ಭಾರತೀಯ ಭರತನಾಟ್ಯ ಕಲಾವಿದೆ ಸೃಷ್ಟಿ ಬಾಟ್ನಿ ಪರಿಚಯ, ಪ್ರಸ್ತುತಿ : ಎಂ.ಎಸ್.ಭಾರತಿ, 4.00 ಮಕ್ಕಳ ನಾಟಕ : 'ಸೆರೆ ತೆರೆ', ರಚನೆ–ಮೀನಾ ಮೈಸೂರು, ನಿರ್ಮಾಣ–ವಿ. ಮಾ. ಜಗದೀಶ್, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಸಂಗೀತ ಶಾಸ್ತ್ರಜ್ಞೆ ಟಿ. ಎಸ್. ಸತ್ಯವತಿ ಅವರೊಂದಿಗೆ ಸಂದರ್ಶನ, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ : ಕೆ.ಆರ್. ಪೇಟೆ ತಾಲೂಕು ಅಕ್ಕಿ ಹೆಬ್ಬಾಳು ಹೋಬಳಿ ವಡ್ಡರಗುಡಿಯ ಕೃಷಿಕ ದಂಪತಿ ವಿ.ಆರ್. ರಾಮು ಮತ್ತು ಪಿ.ಎಸ್. ಅನುಸೂಯ, ಪ್ರಸ್ತುತಿ : ಎನ್. ಕೇಶವಮೂರ್ತಿ, 8.00 ಯುವವಾಣಿ, 9.30 ಸವಿನೆನಪು–ಹಳೆಯ ಕನ್ನಡ ಚಿತಗೀತೆಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ : ವಿದ್ವಾನ್. ನೆಂದುಂಕುನ್ನಂ ವಾಸುದೇವನ್ – ಹಾಡುಗಾರಿಕೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸಂಧಿವಾತ, ಮಂಡಿ ನೋವು, ಕೀಲು ನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡು ಬರುವ ನೆಗಡಿ, ಕೆಮ್ಮು ಮತ್ತು ಅಸ್ತಮ ಕಾಯಿಲೆಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ಭಾರತೀಯ ವಿಚಾರವಾದಿಗಳ ಒಕ್ಕೂಟ, ನೇಗಿಲಯೋಗಿ ಟ್ರಸ್ಟ್, ಬಾರುಕೋಲು ಪತ್ರಿಕಾ ಬಳಗ, ಅಖಿಲ ಕರ್ನಾಟಕ ವಿಚಾರವಾದಿ ಟ್ರಸ್ಟ್ :** ಭಗತ್ ಸಿಂಗ್ ಜನ್ಮ ದಿನಾಚರಣೆ ಅಂಗವಾಗಿ ನಾನೇಕೆ ನಾಸ್ತಿಕ ಕುರಿತು ವಿಚಾರಗಳ ಮಂಥನ, ಉದ್ಘಾಟನೆ : ಲೇಖಕ ಕುಂ. ವೀರಭದ್ರಪ್ಪ, ಅಧ್ಯಕ್ಷತೆ : ಭಾರತೀಯ ವಿಚಾರವಾದಿಗಳ ಒಕ್ಕೂಟದ ಅಧ್ಯಕ್ಷ ಪ್ರೊ. ನರೇಂದ್ರ ನಾಯಕ್, ಮುಖ್ಯ ಅತಿಥಿಗಳು : ಅಕ್ಕಮಹಾದೇವಿ ಮಹಿಳಾ ವಿವಿ ವಿಶ್ರಾಂತ ಉಪಕುಲಪತಿ ಪ್ರೊ. ಸಬೀಹಾ ಭೂಮಿಗೌಡ, ಪ್ರಾಸ್ತಾವಿಕ ನುಡಿ : ವಕೀಲ ಬಿ.ಆರ್. ರಂಗಸ್ವಾಮಿ, ಸ್ಥಳ: ಆರಾಧ್ಯ ಮಹಾಸಭಾ, ಚಾಮುಂಡಿಪುರಂ, ಬೆಳಗ್ಗೆ 9.30ಕ್ಕೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಕರ್ನಾಟಕ ಅಭಿಜಾತ ಕೇಂದ್ರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ :** ಶಾಸ್ತ್ರೀಯ ಕನ್ನಡ ಅಧ್ಯಯನದ ಅಂತಾರಾಷ್ಟ್ರೀಯ ಶಿಬಿರ, ಸ್ಥಳ: ಸಮಾವೇಶ ಮಂದಿರ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ, ಬೆಳಗ್ಗೆ 10 ರಿಂದ.

■ **ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆ :** ಪದವಿ ಪ್ರದಾನ ಸಮಾರಂಭ, ಉದ್ಘಾಟನೆ : ಆಯುಷ್ ಇಲಾಖೆ ಆಯುಕ್ತ ಡಾ. ಶ್ರೀನಿವಾಸಲು, ಮುಖ್ಯ ಅತಿಥಿಗಳು : ಡಾ. ರಾಘವೇಂದ್ರರಾವ್, ಪದವಿ ಪ್ರಶಸ್ತಿ ಪ್ರದಾನ : ಮಹಾವಿದ್ಯಾಲಯ ಪ್ರಾಂಶುಪಾಲ ಡಾ. ಬಿ.ಸಿ. ಭಗವಾನ್, ಅಧ್ಯಕ್ಷತೆ : ಮಹಾವಿದ್ಯಾಲಯ ಪ್ರಾಚಾರ್ಯ ಡಾ. ಕೆ.ಎಸ್. ರಾಧಾಕೃಷ್ಣ ರಾಮರಾವ್, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 10ಕ್ಕೆ.

■ **ಮರಿಮಲ್ಲಪ್ಪ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು :** ಸಾಂಸ್ಕೃತಿಕ ಮತ್ತು ಕ್ರೀಡಾವೇದಿಕೆ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಸಂಸ್ಥೆ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರಸ್ವಾಮಿ, ಮುಖ್ಯ ಅತಿಥಿಗಳು: ಲೋಕೋಪಯೋಗಿ ಇಲಾಖೆ ಜಂಟಿ ನಿರ್ದೇಶಕರಾದ ಶ್ರೀಮತಿ ಎಂ.ಎಸ್. ಪದ್ಮಿನಿ, ಸ್ಥಳ: ಗ್ಯಾಲರಿ ಹಾಲ್, ಬೆಳಗ್ಗೆ 10.30ಕ್ಕೆ.

■ **ಭಾರತ ಸರಕಾರದ ಜವಳಿ ಮಂತ್ರಾಲಯ, ಗುಜರಾತ್ ರಾಜ್ಯ ಕೈಮಗ್ಗ ಮತ್ತು ಕರಕುಶಲ ಅಭಿವೃದ್ಧಿ ನಿಗಮ :** ಗಾಂಧಿ ಶಿಲ್ಪ ಬಜಾರ್ ಹಾಗೂ ಗರ್ವಿ ಗುರ್ಜರಿ ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ವಲಯ, ಬೆಳಗ್ಗೆ 10 ರಿಂದ.

■ **ಕಲ್ಪವೃಕ್ಷ ಬೋನ್ಸಾಯ್ ಬುಟೀಕ್ :** ಧರಣಿ ಧಾರಿಣಿ, ಭೂಮಿಯ ಸಂಭ್ರಮಾಚರಣೆ, ಸಸ್ಯಗಳು, ಕುಂಡಗಳು ಮತ್ತು ಆಭರಣಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಕಲ್ಪವೃಕ್ಷ ಬೋನ್ಸಾಯ್ ಬುಟೀಕ್, ಬಂಡಿಪಾಳ್ಯ, ಉತ್ತನಹಳ್ಳಿ ಕ್ರಾಸ್, ಬೆಳಗ್ಗೆ 10.30ಕ್ಕೆ

■ **ವ್ಯವಸ್ಥಾಪಕರು :** ಡಿ.ಶ್ರೀನಿವಾಸ ಮಣಗಳ್ಳಿ ಅವರ ಸಂಪಾದಿತ ಕೃತಿ 'ಗ್ಯಾರಂಟಿ ಯೋಜನೆಗಳು ಬಡವರ ಸುರಕ್ಷತೆ ಮತ್ತು ಕಲ್ಯಾಣ' ಬಿಡುಗಡೆ ಮತ್ತು ಸಂವಾದ ಕಾರ್ಯಕ್ರಮ, ಕೃತಿ ಬಿಡುಗಡೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಸಂಸದ ಸುನೀಲ್ ಬೋಸ್, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಕೃತಿ ಕುರಿತು : ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ ನಿರ್ದೇಶಕ ಪ್ರೊ.ಎಂ.ಚಂದ್ರ ಪೂಜಾರಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆ, ನಾಟಕಕಾರ ಕೆ.ವೈ.ನಾರಾಯಣ ಸ್ವಾಮಿ, ವಿಷಯ ಮಂಡನೆ : ವಿಶ್ರಾಂತ ಪ್ರಾಧ್ಯಾಪಕ ಟಿ.ಆರ್.ಚಂದ್ರಶೇಖರ್, ಸಾಮಾಜಿಕ ಕಾರ್ಯಕರ್ತ ಡಾ.ವಾಸು, ಪತ್ರಕರ್ತ ಶಿವಕುಮಾರ್, ಪ್ರೊ.ವಿಜಯಲಕ್ಷ್ಮಿ, ಸಹ ಪ್ರಾಧ್ಯಾಪಕ ಅಪ್ಪಗೆರೆ ಸೋಮಶೇಖರ್, ಸ್ಥಳ: ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮ.ನ. ಲತಾ ಮೋಹನ್ ಅಭಿಮಾನಿಗಳ ಬಳಗ :** ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ಶ್ರೀಮತಿ ಮ.ನ. ಲತಾ ಮೋಹನ್ ಅವರ ಷಷ್ಠ್ಯಬ್ಧಿ ಕಾರ್ಯಕ್ರಮ ಹಾಗೂ ಮ.ನ. ಲತಾ ಮೋಹನ್ ಅವರ ಅಭಿನಂದನಾ ಗ್ರಂಥ 'ಲತಾಮೋಹನ ಯಾನ' ಲೋಕಾರ್ಪಣೆ ಸಮಾರಂಭ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಅಭಿನಂದನಾ ಗ್ರಂಥ ಲೋಕಾರ್ಪಣೆ : ಮಹಾಕವಯಿತ್ರಿ ಡಾ. ಲತಾರಾಜಶೇಖರ್, ನಗರ ಹಾಗೂ ಜಿಲ್ಲಾ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಡಿ.ಟಿ. ಪ್ರಕಾಶ್, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಡಾ. ಬಿ.ಆರ್. ನಟರಾಜ್ ಜೋಯಿಸ್, ಡಾ. ಕೆ. ರಘುರಾಂ ವಾಜಪೇಯಿ, ಡಾ. ಬಿ.ವಿ. ಶೇಷಾದ್ರಿ, ಎನ್.ವಿ. ರಮೇಶ್, ಶ್ರೀಮತಿ ಭಾಗ್ಯ ಮಹದೇವ್, ಸ್ಥಳ: ಹೋಟೆಲ್ ಗೋವರ್ಧನ್, ಶ್ರೀ ಹರ್ಷ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು :** ಪಠ್ಯಪೂರಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಜಿ.ಟಿ.ದೇವೇಗೌಡ, ಮುಖ್ಯ ಅತಿಥಿಗಳು : ಮೈಸೂರು ವಿವಿ ಉಪಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಗಾಯಕ ಎಂ. ಮಹಾಲಿಂಗು, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ಎಂ.ಎಸ್.ಅನಿತಾ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಶೇಷಾದ್ರಿಪುರಂ ಪದವಿ ಕಾಲೇಜು :** ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮ, ಮುಖ್ಯ ಅತಿಥಿಗಳು: ಐಜಿಪಿ ಡಾ.ಬಿ.ಆರ್. ರವಿಕಾಂತೇಗೌಡ, ಅಧ್ಯಕ್ಷತೆ : ಕಾಲೇಜು ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಗೌರವ ಅತಿಥಿಗಳು : ಪ್ರಿನ್ಸಿಪಾಲ್ ಶ್ರೀಮತಿ ಅರ್ಚನಾಸ್ವಾಮಿ, ಸ್ಥಳ: ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** 18ನೇ ಲೋಕಸಭಾ ಚುನಾವಣೆ : ಮುಂಬರುವ ಚುನಾವಣೆಗಳನ್ನು ಎದುರಿಸುತ್ತಿರುವ ರಾಜ್ಯಗಳ ಮೇಲಿನ ಪರಿಣಾಮ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಮಾಜಿ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ್, ದಿಕ್ಸೂಚಿ ಭಾಷಣ : ಹಿರಿಯ ನ್ಯಾಯವಾದಿ ಪ್ರೊ. ರವಿವರ್ಮ ಕುಮಾರ್, ಅಧ್ಯಕ್ಷತೆ : ವಿಶ್ರಾಂತ ನಿರ್ದೇಶಕ ಪ್ರೊ. ವಿ.ಕೆ. ನಟರಾಜ್, ಸ್ಥಳ: ಪ್ರೊ. ಬೆಟ್ರಿಕ್ಸ್ ಡಿಸೋಜ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಕಾಲೇಜು ಶಿಕ್ಷಣ ಇಲಾಖೆ :** ಸಾಂಸ್ಕೃತಿಕ, ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಆರ್.ಎ. ಚೇತನ್ ರಾಮ್, ಅತಿಥಿಗಳು : ಎ.ಬಿ. ನಾಗೇಂದ್ರಪ್ರಸಾದ್, ಅಧ್ಯಕ್ಷತೆ : ಡಾ. ಎನ್. ರಾಗಿಣಿ, ಸ್ಥಳ: ಕಾಲೇಜು ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಗಾರ್ಡನ್ ಟೆನ್ನಿಸ್ ಕ್ಲಬ್ :** ಎಐಟಿಎ ಚಾಂಪಿಯನ್‌ಶಿಪ್ ಸರಣಿ ಟೆನ್ನಿಸ್ ಪಂದ್ಯಾವಳಿ, ಉಪಸ್ಥಿತರು : ಮನೀಶ್ ತಪ್ಲಿಯಾಲ್, ಕರ್ನಾಟಕ ಪೊಲೀಸ್ ಅಕಾಡೆಮಿ ಉಪ ನಿರ್ದೇಶಕ ಎಸ್.ಎಲ್. ಚನ್ನಬಸಣ್ಣ, ಸಹಾಯಕ ಆಯುಕ್ತ ಕೆ.ಆರ್. ರಕ್ಷಿತ್, ಸ್ಥಳ: ಗಾರ್ಡನ್ ಟೆನ್ನಿಸ್ ಕ್ಲಬ್, ಬೆಳಗ್ಗೆ 10ಕ್ಕೆ.

■ **ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ :** ಫ್ರೆಶರ್ಸ್ ಡೇ, ಎಂಡೋಮೆಂಟ್ ಪ್ರಶಸ್ತಿ ಪ್ರದಾನ, ವಿದ್ಯಾರ್ಥಿಗಳ ಸೇರ್ಪಡೆ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಡಾ. ಸಿ.ಹೆಚ್. ಜಾನಕಿ, ಅಧ್ಯಕ್ಷತೆ : ಎನ್‌ಐಇ ಅಧ್ಯಕ್ಷ ಡಾ. ಎಂ.ಎಸ್. ರಂಗನಾಥ್, ಸ್ಥಳ: ಎನ್‌ಐಇ ಡೈಮಂಡ್ ಜ್ಯೂಬಿಲಿ ಇಂಡೋರ್ ಸ್ಪೋರ್ಟ್ಸ್ ಕಾಂಪ್ಲೆಕ್ಸ್, ಮಾನಂದವಾಡಿ ರಸ್ತೆ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಆಸ್ಪತ್ರೆ :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ 109ನೇ ಜಯಂತಿ ಮಹೋತ್ಸವ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಸಂಸ್ಥೆ ಕಾರ್ಯದರ್ಶಿ ಪ್ರೊ. ಎಸ್.ಪಿ. ಮಂಜುನಾಥ್, ಮುಖ್ಯ ಅತಿಥಿಗಳು : ನಿರ್ದೇಶಕ ಎಸ್. ಪುಟ್ಟಸುಬ್ಬಪ್ಪ, ಆದಾಯ ತೆರಿಗೆ ಆಯುಕ್ತರಾದ ಶ್ರೀಮತಿ ಎಚ್.ಎಲ್. ಸೌಮ್ಯ ಆಚಾರ್, ನುಡಿನಮನ : ನಿವೃತ್ತ ಪ್ರಾಧ್ಯಾಪಕ ಪ್ರೊ. ಡಿ.ಎಸ್. ಸದಾಶಿವಮೂರ್ತಿ, ಸ್ಥಳ: ಶ್ರೀರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ.

■ **ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ :** ಬೀದಿ ಬದಿ ವ್ಯಾಪಾರಿಗಳ ವಿಭಾಗದ ನಗರಾಧ್ಯಕ್ಷರಾಗಿ ಆಯ್ಕೆಯಾಗಿರುವ ಎಂ. ರಸೂಲ್ ಪದಗ್ರಹಣ ಸಮಾರಂಭ, ಉಪಸ್ಥಿತರು : ವಿಭಾಗದ ರಾಜ್ಯಾಧ್ಯಕ್ಷ ಡಾ. ಸಿ.ಇ. ರಂಗಸ್ವಾಮಿ, ಮಾಜಿ ಸಚಿವ ತನ್ವೀರ್ ಸೇಠ್, ಶಾಸಕ ಕೆ. ಹರೀಶ್‌ಗೌಡ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಅಧ್ಯಕ್ಷತೆ : ಮೈಸೂರು ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಸ್ಥಳ: ಇಂದಿರಾ ಗಾಂಧಿ ಕಾಂಗ್ರೆಸ್ ಭವನ, ಬೆಳಗ್ಗೆ 11ಕ್ಕೆ.

■ **ತರಳಬಾಳು ಸಮಾಗಮ :** ಶ್ರೀ ತರಳಬಾಳು ಜಗದ್ಗುರು ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ 32ನೇ ಶ್ರದ್ಧಾಂಜಲಿ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ನೀಲಕಂಠಸ್ವಾಮಿ ಮಠದ ಅಧ್ಯಕ್ಷ ವಿದ್ವಾನ್ ಸಿದ್ದಮಲ್ಲಸ್ವಾಮಿ, ನುಡಿನಮನ : ಕನ್ನಡ ಅಧ್ಯಾಪಕ ನಾಗರಾಜ ಸಿರಿಗೆರೆ, ಅಧ್ಯಕ್ಷತೆ : ತರಳಬಾಳು ಸಮಾಗಮ ಅಧ್ಯಕ್ಷ ಡಾ. ಎಸ್.ಬಿ. ವಸಂತಕುಮಾರ್, ವಿದುಷಿ ಎಂ.ಎಸ್. ನವೀನ್ ಅವರಿಂದ ವಚನ ಗಾಯನ, ಸ್ಥಳ: ಶ್ರೀ ತರಳಬಾಳು ಶಿಕ್ಷಣ ಕೇಂದ್ರ, ತೊಣಚಿಕೊಪ್ಪಲು, ಬೆಳಗ್ಗೆ 11ಕ್ಕೆ.

■ **ಶ್ರೀ ನಟರಾಜ ಮಹಿಳಾ ಪದವಿಪೂರ್ವ ಕಾಲೇಜು :** ರಾಷ್ಟ್ರೀಯ ಸೇವಾ ಯೋಜನೆಯ ದೈನಂದಿನ ಚಟುವಟಿಕೆಗಳ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಎನ್‌ಎಸ್‌ಎಸ್ ಮೈಸೂರು ವಿಭಾಗೀಯ ಅಧಿಕಾರಿ ಡಾ. ಟಿ.ಕೆ. ರವಿ, ಮುಖ್ಯ ಅತಿಥಿಗಳು : ನೋಡಲ್ ಅಧಿಕಾರಿ ಎಂ. ಮಹೇಶ್, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಪ್ರಾಚಾರ್ಯರಾದ ಶ್ರೀಮತಿ ವಿ.ಡಿ. ಸುನೀತಾರಾಣಿ, ಕಾರ್ಯಕ್ರಮಾಧಿಕಾರಿ ಶ್ರೀಮತಿ ಕೆ.ಎಸ್. ಪುಷ್ಪ, ಸ್ಥಳ: ನಟರಾಜ ಸಭಾ ಭವನ, ಬೆಳಗ್ಗೆ 11ಕ್ಕೆ.

■ **ಪರಮಹಂಸ ಯೋಗ ಮಹಾವಿದ್ಯಾಲಯ ಇಂಟರ್‌ನ್ಯಾಷನಲ್ ಯೋಗ ಸ್ಕೂಲ್, ಇಂಟರ್‌ನ್ಯಾಷನಲ್ ಯೋಗ ಆರ್ಗನೈಸೇಷನ್ :** ಇಂಟರ್‌ನ್ಯಾಷನಲ್ ಯೋಗ ಟೀಚರ್ ಟ್ರೈನಿಂಗ್ ಕೋರ್ಸ್‌ನ 12ನೇ ತಂಡದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರಗಳ ವಿತರಣೆ, 13ನೇ ತಂಡದ ಉದ್ಘಾಟನಾ ಸಮಾರಂಭ, ಉಪಸ್ಥಿತರು : ಶಾಸಕ ಟಿ.ಎಸ್. ಶ್ರೀವತ್ಸ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ಶಿವಪ್ರಕಾಶ್ ಗುರೂಜಿ, ಕೈಗಾರಿಕೋದ್ಯಮಿ ಹೆಚ್.ಆರ್. ಕೇಶವ್, ಆಕಾಶವಾಣಿ ಉಪನಿರ್ದೇಶಕ ಎಸ್.ಎಸ್. ಉಮೇಶ್, ಯೋಗ ಒಕ್ಕೂಟದ ಗೌರವ ಅಧ್ಯಕ್ಷ ಡಾ. ಎ.ಎಸ್. ಚಂದ್ರಶೇಖರ್, ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ಕೆ.ಜಿ. ದೇವರಾಜ್, ಯೋಗ ಆಚಾರ್ಯ ಎಸ್. ವೀರೇಂದ್ರ, ಮೈಸೂರು ಯೋಗ ಅಸೋಸಿಯೇಷನ್ ಅಧ್ಯಕ್ಷ ಯೋಗ ಪ್ರಕಾಶ್, ಸ್ಥಳ: ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30ಕ್ಕೆ

■ **ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ:** ವತಿಯಿಂದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೀಸಲಾತಿ ನೀಡಿದ 105 ನೇ ಸಂಭ್ರಮಾಚರಣೆ ಹಾಗೂ ಯಶೋಧರಮ್ಮ ದಾಸಪ್ಪ ಜೀವಮಾನ ಸಾಧಕ, ಆದರ್ಶ ಪುರುಷ ಹಾಗೂ ಸಾಧಕಿಯರಿಗೆ ಸೇವಾ ಭೂಷಣ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಎಲ್.ವಿವೇಕಾನಂದ, ಅಧ್ಯಕ್ಷತೆ : ಹೆಚ್.ಕೆ. ರಾಮು, ಉಪಸ್ಥಿತರು: ಸಾಹಿತಿ ನಾರಾಯಣ ತಿರುಮಲಾಪುರ, ಡಾ.ಎಸ್.ಪಿ. ಯೋಗಣ್ಣ, ನಾಗರಾಜ್ ವಿ.ಭೈರಿ, ಡಾ. ವಸಂತಕುಮಾರ್, ಡಾ.ಕೆ.ಎಸ್. ಸಂಜಯರ್, ಡಾ. ಸುಶ್ರೂತ, ಹೆಚ್.ಎ. ವೆಂಕಟೇಶ್, ರೇಣುಕ ಟಿ.ಭಕ್ತರ ಹಳ್ಳಿ, ಕಸಾಪ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ಕಲಾ ಮಂದಿರದ ಕಿರುರಂಗ ಮಂದಿರ, ಮಧ್ಯಾಹ್ನ 2.30ಕ್ಕೆ

■ **ವೈದ್ಯಕೀಯ ಶಿಕ್ಷಣ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ಘಟಕ :** ಶತಮಾನೋತ್ಸವ ಸಮಾರೋಪ ಸಮಾರಂಭ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ಸೇರಿದ ವಿವಿಧ ಕಾಮಗಾರಿಗಳ ಶಂಕುಸ್ಥಾಪನಾ ಮತ್ತು ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತರು : ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್, ಗೌರವ ಉಪಸ್ಥಿತರು : ಶಾಸಕ ಸಿ. ಅನಿಲ್ ಕುಮಾರ್, ಸೆಸ್ಕ್ ಅಧ್ಯಕ್ಷ ಎ.ಬಿ. ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಸಂಸದರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಸ್ಥಳ: ಗ್ರಂಥಾಲಯ ಕಟ್ಟಡ, ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮಧ್ಯಾಹ್ನ 3ಕ್ಕೆ.

■ **ಪದವಿ ಪೂರ್ವ ಕಾಲೇಜು ಕನ್ನಡ ಉಪನ್ಯಾಸಕರ ವೇದಿಕೆ :** ಲೇಖಕ ಡಾ.ಎನ್.ಎನ್.ಚಿಕ್ಕಮಾದು ಅವರ ಬರೆದಿರುವ 'ಪ್ರಜಾಮಾತೆ' ಮತ್ತು 'ಕೃಷ್ಣರಾಜಭೂಪ ಮನೆಮನೆದೀಪ' ಕೃತಿಗಳ ಬಿಡುಗಡೆ ಸಮಾರಂಭ, ಕೃತಿ ಲೋಕಾರ್ಪಣೆ : ಸಾಹಿತಿ ಹಾಗೂ ಸಂಸ್ಕೃತಿ ಚಿಂತಕ ನಾಡೋಜ ಪ್ರೊ.ಬರಗೂರು ರಾಮಚಂದ್ರಪ್ಪ, ಕೃತಿಗಳ ಕುರಿತು : ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕ ಪ್ರೊ.ಎಸ್.ಡಿ.ಶಶಿಕಲಾ, ಸಾಹಿತಿ ಹಾಗೂ ಪತ್ರಕರ್ತ ಬನ್ನೂರು ಕೆ.ರಾಜು, ಉಪಸ್ಥಿತರು : ಲೇಖಕರಾದ ಡಾ.ಎನ್.ಎನ್.ಚಿಕ್ಕಮಾದು, ಕನ್ನಡ ಉಪನ್ಯಾಸಕ ವೇದಿಕೆಯ ಅಧ್ಯಕ್ಷ ಎಂ.ಮಹೇಶ್, ಪ್ರಕಾಶಕರಾದ ಓಂಕಾರಪ್ಪ, ಸ್ಥಳ: ಐಡಿಯಲ್ ಜಾವಾ ರೋಟರಿ ಶಾಲೆ ಸಭಾಂಗಣ, ಜೆಎಲ್‌ಬಿ ರಸ್ತೆ, ಮಧ್ಯಾಹ್ನ 3.30ಕ್ಕೆ.

■ **ಕಲಾಸುರುಚಿ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 847, ಕಥೆ ಹೇಳುವವರು: ಶ್ರೀಮತಿ ಸುಜಾತ ರವೀಶ್, ಭಾರತೀಯ ಜೀವವಿಮಾ ನಿಗಮದ ಉದ್ಯೋಗಿ ಹಾಗೂ ಲೇಖಕರು, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪು ನಗರ, ಸಂಜೆ 4.30ಕ್ಕೆ.

■ **ಸೃಷ್ಟಿ ಪಬ್ಲಿಕೇಷನ್ಸ್, ರಂಗಾಯಣ :** ಎಮಿಲ್ ಜೋಲಾನ ದಿ ಸಾಯಿಲ್ ಫ್ರೆಂಚ್ ಕಾದಂಬರಿ ಅನುವಾದ ಭೂಮಿ ಕೃತಿ ಲೋಕಾರ್ಪಣೆ, ಕೃತಿ ಲೋಕಾರ್ಪಣೆ : ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ : ಕು. ವೀರಭದ್ರಪ್ಪ, ಉಪಸ್ಥಿತರು : ಅಗ್ರಹಾರ ಕೃಷ್ಣಮೂರ್ತಿ, ಸತೀಶ್ ತಿಪಟೂರು, ಬಂಜಗೆರೆ ಜಯಪ್ರಕಾಶ್, ಸ್ಥಳ: ವನರಂಗ, ರಂಗಾಯಣ, ಸಂಜೆ 5ಕ್ಕೆ.

■ **ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘ :** ಡಾ. ಬಿ.ಆರ್. ಅಂಬೇಡ್ಕರ್ 133ನೇ ಜನ್ಮ ದಿನಾಚರಣೆ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಅಧ್ಯಕ್ಷತೆ : ಶಾಸಕ ತನ್ವೀರ್ ಸೇಠ್, ಉಪಸ್ಥಿತರು : ಶಾಸಕ ದರ್ಶನ್ ಧ್ರುವನಾರಾಯಣ್, ಪುರುಷೋತ್ತಮ್, ಕೆ. ದೀಪಕ್, ಸ್ಥಳ: ವಿಶ್ವಮೈತ್ರಿ ಬುದ್ಧ ವಿಹಾರ, ಸಂಜೆ 5ಕ್ಕೆ.

■ **ಆರ್ಟ್ ಆಫ್ ಲಿವಿಂಗ್ :** ಜಾಗತಿಕ ಸಹಜ ಸಮಾಧಿ ಧ್ಯಾನದ ಕಾರ್ಯಕ್ರಮ, ಸ್ಥಳ: ದಿ ಆರ್ಟ್ ಆಫ್ ಲಿವಿಂಗ್ ಸೆಂಟರ್, ವಿಶ್ವಮಾನವ ಜೋಡಿ ರಸ್ತೆ, ಸರಸ್ವತಿಪುರಂ, ಸಂಜೆ 6.30 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಾಮೇಧಾನಂದ ಅವರಿಂದ ಸರ್ವೀಸ್ ಅಂಡ್ ಸಾಲ್ವೇಷನ್ – ಲೆಟರ್ಸ್ ಆಫ್ ಸ್ವಾಮಿ ವಿವೇಕಾನಂದ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಉಷಾಸ್ ಪ್ರೊಡಕ್ಷನ್ ಸಂಸ್ಥೆ :** ವಿ. ದೇವದಾಸ್ ಅವರ ನಿರ್ದೇಶನದಲ್ಲಿ ಮಲೆಯಾಳಂ ಭಾಷೆಯಲ್ಲಿ 'ಏಕಾಂತತೆ' ಎಂಬ ಕಿರುಚಿತ್ರ ಪ್ರದರ್ಶನ, ಸ್ಥಳ: ಕಲ್ಪಕ್ಷೇತ್ರ ಸಭಾಂಗಣ, ವಿಜಯನಗರ 4ನೇ ಹಂತ, ಸಂಜೆ 6ಕ್ಕೆ.

■ **ಶ್ರೀ ಕೃಷ್ಣ ಗಾನಸಭಾ :** ಬಿಡಾರಂ ಕೃಷ್ಣಪ್ಪನವರ ಸ್ಮರಣಾರ್ಥ ಸಂಗೀತ ಕಾರ್ಯಕ್ರಮ, ಉದ್ಘಾಟನೆ : ಡಾ.ಎನ್. ಚಂದ್ರಶೇಖರ್, ವಿದ್ವಾನ್ ಬಳ್ಳಾರಿ ಎಂ. ರಾಘವೇಂದ್ರ–ಗಾಯನ, ವಿದ್ವಾನ್ ಎಚ್.ಎಸ್. ತಾಂಡವಮೂರ್ತಿ–ಪಿಟೀಲು, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ಜಿ.ಎಸ್.ರಾಮಾನುಜಂ–ಘಟಂ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6ಕ್ಕೆ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಡಾ. ಕೆ. ಬಾಲಕೃಷ್ಣ ಅವರಿಂದ ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ. ಭಟ್ ಹಾಲ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ಕೆ.ಆರ್.ನಗರದಲ್ಲಿಂದು

■ **ಶ್ರೀ ಕೆ.ಆರ್. ಲಕ್ಕೇಗೌಡರ ಶಿಷ್ಯ ವೃಂದ ಹಾಗೂ ಹಿತೈಷಿ ಬಳಗ, ಕೃಷ್ಣರಾಜನಗರ :** ಕೆ.ಆರ್. ಲಕ್ಕೇಗೌಡರ ಮೊದಲನೇ ವರ್ಷದ ಪುಣ್ಯಸ್ಮರಣೆ, ಡಾ. ಸಿ.ಎನ್. ಮಂಜುನಾಥ್ ಅವರಿಗೆ ಗೌರವ ಸಮರ್ಪಣೆ, ಉಪಸ್ಥಿತರು : ಸಂಸದ ಡಾ. ಸಿ.ಎನ್. ಮಂಜುನಾಥ್, ಮಾಜಿ ಸಚಿವ ಸಾ.ರಾ. ಮಹೇಶ್, ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್, ನವನಗರ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್. ಬಸಂತ್, ಸ್ಥಳ: ಪಿಎಲ್‌ಡಿ ಬ್ಯಾಂಕ್ ರೈತ ಸಮುದಾಯ ಭವನ, ಕೆ.ಆರ್. ನಗರ, ಬೆಳಗ್ಗೆ 10.30ಕ್ಕೆ

ಹುಣಸೂರಿನಲ್ಲಿಂದು

■ **ಸಾರ್ವಜನಿಕ ಭಕ್ತ ವಿನಾಯಕ ಮಂಡಲಿ :** 57ನೇ ವರ್ಷದ ಗಣೇಶೋತ್ಸವ ಕಾರ್ಯಕ್ರಮದ ಅಂಗವಾಗಿ ಸಂಜೆ 7 ಗಂಟೆಗೆ ನಿರ್ಮಿತಿ ಕೇಂದ್ರ ಇಲಾಖೆ ಸಹಯೋಗದಲ್ಲಿ ಮೈಸೂರಿನ ಬಿ.ವಿ.ಎಸ್ ಕುಮಾರ್‌ರವರ ಕ್ರೇಜಿ ಮ್ಯೂಸಿಕಲ್ ಇವೇಂಟ್ಸ್ ತಂಡದವರಿಂದ ಆರ್ಕೇಸ್ಟ್ರಾ ಕಾರ್ಯಕ್ರಮ ಸ್ಥಳ: ಮುನೇಶ್ವರ ಕಾವಲ್ ಮೈದಾನ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಸೆಪ್ಟೆಂಬರ್ 28 ಶನಿವಾರ 2024

ಸಂಪುಟ: 45 | ಸಂಚಿಕೆ: 163 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮೈಸೂರು ಲೋಕಾಯುಕ್ತದಲ್ಲಿ FIR

ಸಿಎಂ ಪತ್ನಿ ಪಾರ್ವತಿ ಸೇರಿ ಇತರ ನಾಲ್ವರ ವಿರುದ್ಧವೂ ಪ್ರಕರಣ ದಾಖಲು

ಮೈಸೂರು, ಸೆ. 27(ಆರ್‌ಕೆ)–ಶೇ.50:50ರ ಅನುಪಾತದಡಿ ಪತ್ನಿ ಎಂ.ಬಿ. ಪಾರ್ವತಿ ಅವರ ಹೆಸರಿಗೆ 14 ಮುಡಾ ನಿವೇಶನಗಳನ್ನು ಅಕ್ರಮವಾಗಿ ಮಂಜೂರಾತಿ ಮಾಡಿಸಿಕೊಂಡಿರುವ ಆರೋಪದ ಮೇರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರು ಪ್ರವಾಸದಲ್ಲಿರುವಾಗಲೇ ಅವರು ಹಾಗೂ ಅವರ ಪತ್ನಿ ಶ್ರೀಮತಿ ಪಾರ್ವತಿ ಸೇರಿದಂತೆ ಒಟ್ಟು ನಾಲ್ವರು ಹಾಗೂ ಇತರರ ವಿರುದ್ಧ ಮೈಸೂರು ಲೋಕಾಯುಕ್ತ ಪೊಲೀಸರು, ಭಾರತೀಯ ದಂಡ ಸಂಹಿತೆ (ಐಪಿಸಿ)ಯ ವಿವಿಧ ಕಾಯ್ದೆಯಡಿ ಇಂದು ಮಧ್ಯಾಹ್ನ ಎಫ್‌ಐಆರ್ ದಾಖಲಿಸಿದ್ದಾರೆ.

ಮೈಸೂರು ಲೋಕಾಯುಕ್ತ ಠಾಣೆ ಅಪರಾಧ ಸಂಖ್ಯೆ 11/2024ರಂತೆ ಭಾರತೀಯ ದಂಡ ಸಂಹಿತೆ ಕಲಂ 120ಬಿ, 166, 403, 406, 420, 426, 465, 340, 351, ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988ರ ಕಲಂ 9, 13, ಬೇನಾಮಿ ಆಸ್ತಿ ವಹಿವಾಟು ತಡೆ ಕಾಯ್ದೆ 1988ರ ಕಲಂ 3, 53, 54 ಹಾಗೂ ಕರ್ನಾಟಕ ಭೂ ಕಬಳಿಕೆ ನಿಷೇಧ ಕಾಯ್ದೆ 2011ರ ಕಲಂ 3, 4ರಡಿ ಪ್ರಕರಣ ದಾಖಲಿಸಲಾಗಿದೆ.

ಕರ್ನಾಟಕ ರಾಜ್ಯ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶದನ್ವಯ ಇಂದು ಮಧ್ಯಾಹ್ನ 1.15 ಗಂಟೆಗೆ ಎಫ್‌ಐಆರ್ ದಾಖಲಿಸಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ(75) ಎ1, ಅವರ ಪತ್ನಿ ಎಂ.ಬಿ. ಪಾರ್ವತಿ(65) ಎ2, ಟಿ.ಕೆ. ಬಡಾವಣೆಯ 3ನೇ ಮೇನ್ ನಿವಾಸಿ ಮಲ್ಲಿಕಾರ್ಜುನಸ್ವಾಮಿ(68) ಎ3, ಬೆಂಗಳೂರಿನ ಕೆ.ಎಸ್. ಟೌನ್, 1ನೇ ಮೇನ್, 10ನೇ ಕ್ರಾಸ್ ನಿವಾಸಿ ನಿಂಗ ■6ನೇ ಪುಟಕ್ಕೆ

ಪ್ಲೀಸ್ ಅಂಡರ್ ಲೈನ್ ದಿಸ್ ವರ್ಡ್...
ನನ್ನ ರಾಜಕೀಯ ಜೀವನದಲ್ಲಿ ದಾಖಲಾಗಿರುವ ಮೊದಲ ಕೇಸ್ ಇದು
ಸಿದ್ದರಾಮಯ್ಯ ವಿಷಾದ ನುಡಿ

ಮೈಸೂರು, ಸೆ.27(ಬಿಎಲ್‌ಯು)– ನನ್ನ ರಾಜಕೀಯ ಜೀವನದಲ್ಲಿ ದಾಖ ಲಾಗುತ್ತಿರುವ ಮೊದಲ ಕೇಸ್ ಇದು. ಪ್ಲೀಸ್ ಅಂಡರ್ ಲೈನ್ ದಿಸ್ ವರ್ಡ್... ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಿ ಹೇಳಿದರು. ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮುಡಾ ಪ್ರಕರಣ ಸಂಬಂಧ ನನ್ನ ರಾಜಕೀಯ ಜೀವನದಲ್ಲಿ ಮೊದಲ ಕೇಸ್ ದಾಖಲಾಗುತ್ತಿದೆ. ಆದರೆ ಇದಕ್ಕೆ ನಾನು ಹೆದರುವುದಿಲ್ಲ. ನನ್ನ ನೋಡಿದರೆ ನಾನು ಹೆದರಿದಂತೆ ಕಾಣುತ್ತಿದ್ದೇನೆಯೇ ಎಂದು ಪ್ರಶ್ನಿಸಿದರು. ನನ್ನ ಕಂಡರೆ ಭಯ ಇರುವ ಹಿನ್ನೆಲೆಯಲ್ಲಿ ಬಿಜೆಪಿ ಹಾಗೂ ಜೆಡಿಎಸ್‌ನವರು ನನ್ನನ್ನೇ ಟಾರ್ಗೆಟ್ ಮಾಡಿದ್ದಾರೆ. ಆದರೆ ಇದಕ್ಕೆ ನಾನು ಹೆದರುವುದಿಲ್ಲ. ಕಾನೂನಾತ್ಮಕವಾಗಿ ಹೋರಾಟ ಮಾಡುತ್ತೇನೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಆಪರೇಷನ್ ಕಮಲದ ಮೂಲಕ ಸರ್ಕಾರ ಬೀಳಿಸಲು ಯತ್ನಿಸಿದರು. ಆದರೆ ನಾವು 136 ಶಾಸಕರು ಇರುವ ಕಾರಣ ಸಾಧ್ಯವಾಗಲಿಲ್ಲ. ಈಗ ಈ ರೀತಿಯಾಗಿ ನಮ್ಮ ಸರ್ಕಾರವನ್ನು ಅಸ್ಥಿರಗೊಳಿಸಲು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ವಕೀಲರ ಮೂಲಕ ಕಾನೂನಾತ್ಮಕವಾಗಿಯೇ ■6ನೇ ಪುಟಕ್ಕೆ

ಸಿಎಂ ವಿರುದ್ಧ ಸಿಬಿಐ ತನಿಖೆಗೆ ಸ್ನೇಹಮಯಿ ಕೃಷ್ಣ ಹೈಕೋರ್ಟ್ ಮೊರೆ



ಮೈಸೂರು, ಸೆ. 27(ಎಸ್‌ಪಿಎನ್)–ರಾಜ್ಯ ಸರ್ಕಾರದಡಿ ಕಾರ್ಯ ನಿರ್ವಹಿಸುವ ಲೋಕಾಯುಕ್ತ ಸಂಸ್ಥೆಯಿಂದ ನ್ಯಾಯಯುತವಾದ ತನಿಖೆ ಅಸಾಧ್ಯ ಎಂಬ ಕಾರಣದಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡುವಂತೆ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ. ಈ ಅರ್ಜಿ ವಿಚಾರಣೆ ಸೋಮವಾರ ನಡೆಯಲಿದೆ ಎಂದು ಸಾಮಾಜಿಕ ಹೋರಾಟಗಾರ ಸ್ನೇಹಮಯಿ ಕೃಷ್ಣ ತಿಳಿಸಿದರು. ಸಿದ್ದರಾಮಯ್ಯ ವಿರುದ್ಧ ದಾಖಲಾದ ಎಫ್‌ಐಆರ್ ಪ್ರತಿಯನ್ನು ಪಡೆದ ನಂತರ ಮೈಸೂರು ಲೋಕಾಯುಕ್ತ ಕಚೇರಿ ಮುಂಭಾಗ ಸುದ್ದಿಗಾರ ರೊಂದಿಗೆ ಮಾತನಾಡಿದ ಅವರು, ನ್ಯಾಯಾಲಯದ ಆದೇಶವಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಎಫ್‌ಐಆರ್ ದಾಖಲಿಸಲು ಲೋಕಾಯುಕ್ತ ಪೊಲೀಸರು ಹಿಂದು–ಮುಂದು ನೋಡುತ್ತಿದ್ದರು. ■6ನೇ ಪುಟಕ್ಕೆ



ಮುಖ್ಯಮಂತ್ರಿ ಸಿದ್ದರಾಮಯ್ಯ


ಸಿದ್ದರಾಮಯ್ಯ ಎ1, ಪತ್ನಿ ಎಂ.ಬಿ.ಪಾರ್ವತಿ ಎ2, ಮಲ್ಲಿಕಾರ್ಜುಸ್ವಾಮಿ ಎ3, ದೇವರಾಜು ಎ4, ಇತರರು

ಪ್ರಕರಣದಲ್ಲಿ ನಮೂದಿಸಿರುವ ಸೆಕ್ಷನ್‌ಗಳು ಏನು ಹೇಳುತ್ತವೆ?

ಮೈಸೂರು, ಸೆ. 27(ಆರ್‌ಕೆ)– ಮುಡಾ ನಿವೇಶನ ಅಕ್ರಮ ಹಂಚಿಕೆ ಆರೋಪದ ಮೇಲೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ಪತ್ನಿ ಎಂ.ಬಿ. ಪಾರ್ವತಿ ಸೇರಿದಂತೆ ಐವರ ವಿರುದ್ಧ ಭಾರತೀಯ ದಂಡ ಸಂಹಿತೆ (ಐಪಿಸಿ)ಯ ವಿವಿಧ ಸೆಕ್ಷನ್‌ಗಳಡಿ ಮೈಸೂರು ಲೋಕಾಯುಕ್ತ ಎಸ್ಪಿ ಉದೇಶ ಪ್ರಕರಣ ದಾಖಲಿಸಿದ್ದಾರೆ.

ಸೆಕ್ಷನ್ 120ಬಿ:	ಕ್ರಿಮಿನಲ್ ಪಿತೂರಿ ಹಾಗೂ ಒಳಸಂಚು
ಸೆಕ್ಷನ್ 166:	ಸರ್ಕಾರಿ ಸೇವಕನಿಂದ ಒಳಸಂಚು
ಸೆಕ್ಷನ್ 403:	ಅಪ್ರಾಮಾಣಿಕವಾಗಿ ಆಸ್ತಿಯ ದುರ್ಬಳಕೆ
ಸೆಕ್ಷನ್ 406:	ಅಪರಾಧಿಕ ನಂಬಿಕೆ ದ್ರೋಹ
ಸೆಕ್ಷನ್ 420:	ವಂಚನೆ, ಮೋಸದಿಂದ ಲಾಭ ಪಡೆಯುವುದು
ಸೆಕ್ಷನ್ 426:	ಕಿಡಿಗೇಡಿತನ
ಸೆಕ್ಷನ್ 465:	ಫೋರ್ಜರಿ ಮಾಡುವುದು
ಸೆಕ್ಷನ್ 468:	ಫೋರ್ಜರಿ ಮಾಡಿಸಲು ಪ್ರೇರಣೆ
ಸೆಕ್ಷನ್ 340:	ವ್ಯಕ್ತಿಯನ್ನು ನಿರ್ಬಂಧಿಸದಿದ್ದಲ್ಲಿ ಅಥವಾ ಮುಂದುವರಿಸಿದರೆ ದಾಳಿ ಮಾಡುವ ಭಯ ಹುಟ್ಟಿಸುವುದು
ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಸೆಕ್ಷನ್ 9:	ಲಂಚ ಸ್ವೀಕಾರ
ಸೆಕ್ಷನ್ 13:	ಸರ್ಕಾರಿ ನೌಕರನಿಂದ ಅಪರಾಧಿಕ ದುರ್ನಡತೆ

ಸಿಎಂ ಪರಿವಾರಕ್ಕೆ ಸಂಕಷ್ಟ ತಂದೊಡ್ಡಿದ ಮುಡಾದ ಆ 14 ನಿವೇಶನಗಳು...



ಮೈಸೂರು, ಸೆ.27–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಿಂದ ತಮ್ಮ ಪತ್ನಿ ಶ್ರೀಮತಿ ಪಾರ್ವತಿ ಅವರ ಹೆಸರಿಗೆ 50:50 ಅನುಪಾತದಡಿ ಮೈಸೂರಿನ ವಿಜಯನಗರ ಬಡಾವಣೆಯಲ್ಲಿ ಕೋಟ್ಯಾಂತರ ರೂ. ಮೌಲ್ಯದ 14 ನಿವೇಶನಗಳನ್ನು ಅಕ್ರಮವಾಗಿ ಪಡೆಯಲಾಗಿದೆ ಎಂಬ ಆರೋಪದ ಮೇರೆಗೆ ನ್ಯಾಯಾಲಯದ ಆದೇಶದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ನಾಲ್ವರ ವಿರುದ್ಧ ಲೋಕಾಯುಕ್ತ ಪೊಲೀಸರಿಂದ ಎಫ್‌ಐಆರ್ ದಾಖಲಿಸಲಾಗಿದೆ. ತಮ್ಮ ಪತ್ನಿ ನಿವೇಶನ ಪಡೆದಿರುವುದು ಕಾನೂನು ಬದ್ಧವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸುತ್ತಿದ್ದರೂ, ದಾಖಲೆಗಳನ್ನು ಪರಿಶೀಲಿಸಿದಾಗ ಈ ಪ್ರಕರಣಕ್ಕೆ ಸಂಬಂಧಿಸಿದ ಜಮೀನಿಗೆ ಸಂಬಂಧಪಟ್ಟಂತಹ ಹಲವಾರು ವಿಚಾರಗಳು ಗೊಂದಲ ಹಾಗೂ ಅನುಮಾನಗಳಿಗೆ ಆಸ್ಪದ ಮಾಡಿಕೊಟ್ಟಿದ್ದು, ಈ ಹಿನ್ನೆಲೆಯಲ್ಲಿ ನ್ಯಾಯಾಲಯ ತನಿಖೆಗೆ ಆದೇಶ ನೀಡಿದೆ ಎಂದು ಹೇಳಲಾಗಿದೆ.

ಏನದು ಗೊಂದಲ, ಅನುಮಾನ: ಕೆಸರೆ ಸರ್ವೆ ನಂ.464ರಲ್ಲಿನ 3.16 ಎಕರೆ ಭೂಮಿಯನ್ನು ಮುಡಾ ಭೂ ಸ್ವಾಧೀನಪಡಿಸಿಕೊಳ್ಳದೇ ಅಭಿವೃದ್ಧಿಪಡಿಸಿದೆ ಎಂಬ ಕಾರಣಕ್ಕಾಗಿ ಈ ಭೂಮಿಯ ಒಡತಿ, ಸಿದ್ದರಾಮಯ್ಯ ಅವರ ಧರ್ಮಪತ್ನಿ ಶ್ರೀಮತಿ ಪಾರ್ವತಿ ಅವರಿಗೆ 50:50 ಅನುಪಾತದಡಿ ವಿಜಯನಗರ ಬಡಾವಣೆಯಲ್ಲಿ 14 ನಿವೇಶನಗಳನ್ನು ಮುಡಾ ಮಂಜೂರು ಮಾಡಿದೆ ಎಂಬುದು ಪ್ರಕರಣದ ಹೈಲೈಟ್. ಆದರೆ ಈ ಭೂಮಿಯು ನಿಂಗ ಎಂಬುವರ ಮಾಲೀಕತ್ವದ್ದಾಗಿದ್ದು, ಮುಡಾ 1997ರಲ್ಲಿ ದೇವನೂರು ಬಡಾವಣೆ 3ನೇ ಹಂತ ನಿರ್ಮಾಣಕ್ಕಾಗಿ ಈ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿತ್ತು. ಆದರೆ 1998ರಲ್ಲಿ ಸದರಿ ಭೂಮಿಯನ್ನು ಡಿ ನೋಟಿಫೈ ಮಾಡಿದ್ದು, ನಿಂಗ ಅವರ ವಾರಸುದಾರರಲ್ಲಿ ಒಬ್ಬರಾದ ದೇವರಾಜು ಎಂಬುವರಿಂದ ಸಿದ್ದರಾಮಯ್ಯ ಪತ್ನಿ ಶ್ರೀಮತಿ ಪಾರ್ವತಿ ಅವರ ಸಹೋದರ ಮಲ್ಲಿಕಾರ್ಜುನಸ್ವಾಮಿ ಅವರು 2004ರಲ್ಲಿ ಭೂಮಿಯನ್ನು ಖರೀದಿಸಿ, ಅದನ್ನು 2010ರಲ್ಲಿ ತಮ್ಮ ಸಹೋದರಿ ಪಾರ್ವತಿಯವರಿಗೆ ದಾನ ಮಾಡಿದ್ದಾರೆ. ಈ ಮೂಲಕ ಪಾರ್ವತಿಯವರು ಭೂಮಿಯ ಒಡತಿಯಾಗಿದ್ದರು ಎಂಬುದು ಸಿದ್ದರಾಮಯ್ಯ ಅವರ ವಾದಕ್ಕೆ ■6ನೇ ಪುಟಕ್ಕೆ

ಅಭಿವೃದ್ಧಿ ವಿಷಯದಲ್ಲಿ ಬೇಜವಬ್ದಾರಿ ಅಧಿಕಾರಿಗಳ ನಮ್ಮ ಸರ್ಕಾರ ಸಹಿಸಲ್ಲ

- ಪ್ರಗತಿ ಪರಿಶೀಲನಾ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಖಡಕ್ ವಾರ್ನಿಂಗ್
- ಅದ್ದೂರಿ ದಸರಾ ಆಚರಿಸುವ ನೆಪದಲ್ಲಿ ಕಳ್ಳಾಟ ಸಲ್ಲದು; ಚಾಟಿ
- ಹೋರಾಟದ ಮೂಲಕ ಬಂದ ನಾನು ಎಲ್ಲಾ ರೀತಿಯ ಅಧಿಕಾರಿಗಳನ್ನೂ ನೋಡಿದ್ದೇನೆ
- ಕಾನೂನು ಸುವ್ಯವಸ್ಥೆ ಕಾಯ್ದುಕೊಂಡು ಜಾತ್ಯಾತೀತವಾಗಿ ಜನರ ಸೇವೆ ಮಾಡಿ; ತಾಕೀತು

ಮೈಸೂರು, ಸೆ.27(ಎಸ್‌ಬಿಡಿ)– ನೆಪ ಹೇಳುವುದು, ಸುಳ್ಳು ಹೇಳುವುದನ್ನು ಅಧಿಕಾರಿಗಳು ನಿಲ್ಲಿಸಬೇಕು. ಅಭಿವೃದ್ಧಿ ಕಾರ್ಯಗಳ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಿದರೆ ಅಂತಹ ಅಧಿಕಾರಿಗಳನ್ನು ನಮ್ಮ ಸರ್ಕಾರ ಸಹಿಸುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯ್ತಿಯಲ್ಲಿ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯ ಆರಂಭದಲ್ಲೇ ಎಲ್ಲಾ ನ್ಯಾಯಲಯಗಳಿಗಿಂತ ಜನತಾ ನ್ಯಾಯಾಲಯ ಹಾಗೂ ಆತ್ಮಸಾಕ್ಷಿ ಮುಖ್ಯ ಎನ್ನುವ ಮಹಾತ್ಮ ಗಾಂಧಿಯವರ ನುಡಿಯ ಮೂಲಕ ಅಧಿಕಾರಿಗಳಿಗೆ ಮುಖ್ಯಮಂತ್ರಿಗಳು ನೀತಿ ಪಾಠ ಮಾಡಿದರು. ನೆಪ ಹೇಳುವುದು, ಸುಳ್ಳು ಹೇಳುವುದನ್ನು ಅಧಿಕಾರಿಗಳು ನಿಲ್ಲಿಸಬೇಕು. ಒಂದು ಸುಳ್ಳು ಹೇಳಿದರೆ ಅದನ್ನು ಸಮರ್ಥಿಸಲು ಇನ್ನೊಂದು, ಮತ್ತೊಂದು ಸುಳ್ಳುಗಳನ್ನು ಹೇಳುತ್ತಲೇ ಹೋಗಬೇಕಾಗುತ್ತದೆ. ಸುಳ್ಳು ಮತ್ತು ನೆಪ ಹೇಳುವ ಅಧಿಕಾರಿಗಳು ಹೇಗಾದರೂ ಸಿಕ್ಕಿ ಬೀಳುತ್ತಾರೆ. ಅದು ನಿಮ್ಮ ವೃತ್ತಿ ಜೀವನಕ್ಕೆ ಒಳ್ಳೆಯದಲ್ಲ. ನಾನು ಎಲ್ಲಾ ಹಂತದ ಅಧಿಕಾರಿಗಳನ್ನೂ ನೋಡಿದ್ದೇನೆ. ವಿರೋಧ ಪಕ್ಷದ ನಾಯಕನಾಗಿ ಹೋರಾಟ ಮಾಡಿದ್ದೇನೆ. ಅಧಿಕಾರಿಗಳು ಯಾವಾಗಲೂ ಸಮಯ ನಿರ್ವಹಣೆಯಲ್ಲಿ ಜಾಗರೂಕರಾಗಿರಬೇಕು. ಶಿಸ್ತು ಇಲ್ಲದವರು ಕರ್ತವ್ಯ ಲೋಪ ಮಾಡುತ್ತಾರೆ ಎನ್ನುವುದು ನನ್ನ ಅನುಭವ. ಹಾಗಾಗಿ ಅಭಿವೃದ್ಧಿ ಕಾರ್ಯಗಳ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಿದರೆ ಅಂತಹ ಅಧಿಕಾರಿಗಳನ್ನು ನಮ್ಮ ಸರ್ಕಾರ ಸಹಿಸಲ್ಲ. ಜಿಲ್ಲಾ ಮಂತ್ರಿಗಳೂ ಈ ವಿಚಾರದಲ್ಲಿ ಮುಲಾಜು ತೋರಿಸಬಾರದು ಎಂದರು.

ದಸರಾ ನೆಪದಲ್ಲಿ ಕಳ್ಳಾಟವಾಡಬಾರದು: ಮೈಸೂರು ಸಾಂಸ್ಕೃತಿಕವಾಗಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯಾಗಿದೆ. ಪ್ರತಿ ವರ್ಷ ದಸರಾ ಮಹೋತ್ಸವವನ್ನು ಸರ್ಕಾರ ಅತ್ಯಂತ ಅರ್ಥಪೂರ್ಣವಾಗಿ ಆಚರಿಸುತ್ತಿದೆ. ■6ನೇ ಪುಟಕ್ಕೆ



ಮೈಸೂರು ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಶಾಸಕರಾದ ಜಿ.ಟಿ.ದೇವೇಗೌಡರು, ಡಾ.ಡಿ.ತಿಮ್ಮಯ್ಯ, ದರ್ಶನ್ ಧ್ರುವನಾರಾಯಣ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ಎಂ.ರೇವಣ್ಣ ಮತ್ತಿತರರಿದ್ದರು.

ಹಳ್ಳಿ ಹಾಲು ಪಟ್ನಕ್ಕೆ, ಪಟ್ನದ್ ಸರಾಯಿ ಹಳ್ಳಿಗೆ

ಪಶು ಸಂಗೋಪನಾ ಇಲಾಖೆಯ ಪ್ರಗತಿ ಪರಿಶೀಲನೆ ವೇಳೆ ಪಾರ್ಲಿಮೆಂಟಿನಲ್ಲಿ ನಡೆದಿದ್ದ ಚರ್ಚೆಯನ್ನು ಪ್ರಸ್ತಾಪಿಸಿ, ಹಳ್ಳಿ ಜನರು ಉತ್ಪಾದನೆ ಮಾಡುವ ಹಾಲು ಪಟ್ಟಣಗಳಿಗೆ ಹೋಗಿದೆ. ಪಟ್ಟಣದಲ್ಲಿ ತಯಾರಾಗುವ ಸರಾಯಿ ಹಳ್ಳಿಗಳಿಗೆ ಬಂದಿದೆ. ಆದ್ದರಿಂದ ಹಸು ಸಾಕಾಣೆದಾರರು ಮೊದಲು ಹಾಲನ್ನು ತಾವು ಕುಡಿದು, ತಮ್ಮ ಮಕ್ಕಳಿಗೂ ಕುಡಿಸಿ, ನಂತರ ಹೆಚ್ಚುವರಿ ಹಾಲನ್ನು ಮಾರಾಟ ಮಾಡಬೇಕು. ಆಗ ಮಾತ್ರ ಅವರಿಗೂ ಆರೋಗ್ಯಕರ ಹಾಲು ಸಿಗುತ್ತದೆ. ರೈತ ಕುಟುಂಬಗಳಿಗೆ ಹಾಲು ಕುಡಿಯಲು ಜಾಗೃತಿ ಮೂಡಿಸಿ. ಹಾಲಿನ ಉಪ ಉತ್ಪನ್ನಗಳನ್ನು ಹೆಚ್ಚು ಉತ್ಪಾದಿಸಬೇಕು. ಕುರಿ ಮತ್ತು ಕೋಳಿ ಸಾಕಾಣಿಕೆಗೆ ಸಬ್ಸಿಡಿ ಸವಲತ್ತನ್ನು ಹೆಚ್ಚು ಮಂದಿಗೆ ವಿಸ್ತರಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ಪ್ರತಿ ಇಲಾಖೆಯ ಮಾಹಿತಿ ಪಡೆದು ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದ ಸಿಎಂ

ಸರ್ಕಾರದ ಯೋಜನೆಗಳಿರುವುದೇ ಜನರಿಗಾಗಿ ಸೂಕ್ತ ಸಮಯಕ್ಕೆ ತಲುಪಿಸುವ ಕೆಲಸವಾಗಬೇಕು

ಮೈಸೂರು, ಸೆ.27(ಎಸ್‌ಬಿಡಿ)– ಕೃಷಿ ಇಲಾಖೆ ಮೂಲಕವೇ ಪ್ರಗತಿ ಪರಿಶೀಲನಾ ಸಭೆ ಆರಂಭಿಸಿದ ಮುಖ್ಯಮಂತ್ರಿ ಸಿದ್ದರಾಮ್ಯನವರು, ಒಂದೊಂದೇ ಇಲಾಖೆಯ ಬಗ್ಗೆ ಸವಿಸ್ತಾರವಾಗಿ ಮಾಹಿತಿ ಪಡೆದು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಕೃಷಿ ಇಲಾಖೆ: ಮುಂಗಾರು, ಪೂರ್ವ ಮುಂಗಾರು ಕೃಷಿ ಚಟುವಟಿಕೆ ಪ್ರಮಾಣದ ಬಗ್ಗೆ ಮಾಹಿತಿ ಇಲಾಖೆಯ ಜಂಟಿ ನಿರ್ದೇಶಕರಿಂದ ತಾಲೂಕುವಾರು ಮಾಹಿತಿ ಪಡೆದರು. ಕೆಳ ಹಂತದ ಅಧಿಕಾರಿಗಳು ಡೈರಿ ಬರೆಯುವುದನ್ನು, ಜಮೀನುಗಳಿಗೆ ಭೇಟಿ ನೀಡುವುದನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ಖಚಿತ ಪಡಿಸಿಕೊಳ್ಳಬೇಕು. ಕೆಳ ಹಂತದ ಅಧಿಕಾರಿಗಳು ನೀಡುವ ವರದಿ ಆಧರಿಸಿ ಅಗತ್ಯ ಕಂಡ ಕೃಷಿ ಭೂಮಿಗೆ ಭೇಟಿ ನೀಡಿ, ಪರಿಶೀಲಿಸಬೇಕು. ಕೃಷಿ, ತೋಟ ಗಾರಿಕೆ, ಪಶು ಸಂಗೋಪನೆ, ರೇಷ್ಮೆ ಇಲಾಖೆ ಅಧಿಕಾರಿಗಳು ಸದಾ ■6ನೇ ಪುಟಕ್ಕೆ

ಅಂಗನವಾಡಿಗಳಿಗೆ ಉಚಿತ ವಿದ್ಯುತ್ ಬಗ್ಗೆ ಪರಿಶೀಲನೆ

ರಾಜ್ಯ ಸರ್ಕಾರ ಶಾಲೆಗಳಿಗೆ ಉಚಿತ ವಿದ್ಯುತ್ ನೀಡುತ್ತಿದೆ. ಅದೇ ರೀತಿ ಅಂಗನವಾಡಿಗಳಿಗೂ ವಿದ್ಯುತ್ ಉಚಿತವಾಗಿ ನೀಡಬೇಕು ಎಂದು ಗ್ಯಾರಂಟಿ ಅನುಷ್ಠಾನ ಸಮಿತಿಯ ಉಪಾಧ್ಯಕ್ಷೆ ಪುಷ್ಪ ಅಮರನಾಥ್, ಮುಖ್ಯಮಂತ್ರಿಗಳಿಗೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ, ರಾಜ್ಯದಲ್ಲಿ ಎಷ್ಟು ಅಂಗನವಾಡಿಗಳಿವೆ, ಎಷ್ಟು ವೆಚ್ಚ ತಗುಲುತ್ತದೆ ಎನ್ನುವ ಬಗ್ಗೆ ವರದಿ ನೀಡಲು ಅಧಿಕಾರಿಗಳಿಗೆ ಸೂಚಿಸಿದರು. ವರದಿ ಬಳಿಕ ಈ ಬಗ್ಗೆ ಪರಿಶೀಲಿಸಿ, ಕ್ರಮ ವಹಿಸುವುದಾಗಿ ಭರವಸೆ ನೀಡಿದರು.

ಈರುಳ್ಳಿ ಬಜ್ಜಿ ಇಲ್ವಾ, ಇದ್ರೆ ಕೊಡು

ಸುದೀರ್ಘ ಸಭೆ ಮಧ್ಯೆ ಸಂಜೆ 5.30ರ ವೇಳೆಗೆ ಮೆಣಸಿನ ಕಾಯಿ ಬಜ್ಜಿಯನ್ನು ನೀಡಲಾಯಿತು. ತಮಗೆ ಮೆಣಸಿನಕಾಯಿ ಬಜ್ಜಿ ನೀಡಲು ಬಂದವರಿಗೆ ಮುಖ್ಯಮಂತ್ರಿಗಳು, 'ಏಯ್ ಈರುಳ್ಳಿ ಬಜ್ಜಿ ಇಲ್ವಾ ಎಂದು ಕೇಳಿ, ಇದ್ದರೆ ಕೊಡು' ಎಂದರು. ಒಂದು ಮೆಣಸಿನಕಾಯಿ ಬಜ್ಜಿಯನ್ನೂ ಸವಿದರು. ಕಳೆದ ಕೆಡಿಪಿ ಸಭೆಯಲ್ಲೂ ಇದೇ ರೀತಿ ಪ್ರಸಂಗ ನಡೆದಿತ್ತು. ತಾವೇ ಕೇಳಿ ಈರುಳ್ಳಿ ಬಜ್ಜಿ ತರಿಸಿಕೊಂಡಿದ್ದರು.

ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದು

ದಸರಾ ಸಂದರ್ಭದಲ್ಲಿ ಪ್ರವಾಸಿಗರಿಗೆ ತೊಂದರೆ ಆಗದಂತೆ ಬಸ್‌ಗಳ ವ್ಯವಸ್ಥೆ ಕಲ್ಪಿಸಬೇಕು. ಮುಖ್ಯವಾಗಿ ಶಾಲೆಗಳಿಗೆ ಹೋಗುವ ಗ್ರಾಮೀಣ ಭಾಗದ ಮಕ್ಕಳು ಹಾಗೂ ಶಿಕ್ಷಕರಿಗೆ ತೊಂದರೆ ಆಗದಂತೆ ಬಸ್ ಸಂಚಾರ ಕಲ್ಪಿಸಬೇಕು. ಯುವ ನಿಧಿ ಪಡೆಯುತ್ತಿರುವ ಪ್ರತಿಯೊಬ್ಬರಿಗೂ ಕೌಶಲ್ಯ ಅಭಿವೃದ್ಧಿ ಕಾರ್ಯಾಗಾರಗಳಲ್ಲಿ ತೊಡಗಿಸಬೇಕು. ಈ ಬಗ್ಗೆ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ನಿಗಾ ವಹಿಸಬೇಕು ಎಂದು ಸಿಎಂ ಸೂಚಿಸಿದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಪ್ರಪಂಚದಲ್ಲಿ ಮೊದಲು ಸುರಂಗ ತೋಡಿದವರು ಯಾರು?

ವಿದ್ಯಾರ್ಥಿ : ಬಹುಶಃ ಹೆಗ್ಗಣವೇ ಇರಬೇಕು!

ಮೈಸೂರು ಮಿತ್ರ

ಶನಿವಾರ, 28 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಬಳಸಿದಂತೆಲ್ಲಾ ಬೆಳೆಯುವ ಅಕ್ಷಯ ಪಾತ್ರೆ ನಗು

– ಬೀಚೀ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಎಡಗಣ್ಣು ಹೊಡೆದರೆ ನಾರಿಗೆ ಶುಭ.

ನಿಮ್ಮ ಪತ್ರಗಳು

ಸಿದ್ಧರಾಮಯ್ಯ ರಾಜಕೀಯ ಜೀವನದಲ್ಲಿ ಕಪ್ಪುಚುಕ್ಕೆ

ಮಾನ್ಯರೆ,

ಈ ವರ್ಷ ನಾಡಹಬ್ಬ ದಸರಾವನ್ನು ವಿಜೃಂಭಣೆಯಿಂದ ಆಚರಿಸಲು ರಾಜ್ಯ ಸರ್ಕಾರ ನಿರ್ಧರಿಸಿ ರೂ. 40 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ಕಳೆದ 15 ದಿನಗಳ ಹಿಂದೆಯೇ ಮೈಸೂರಿಗೆ ಆನೆಗಳು ಆಗಮಿಸಿ ಪ್ರತಿ ದಿನ ತಾಲೀಮು ನಡೆಸುತ್ತಿವೆ. ಆನೆಗಳ ಆಗಮವಾಯಿತೆಂದರೆ ಅದು ದಸರಾ ಪ್ರಾರಂಭಕ್ಕೆ ಮುನ್ನುಡಿ ಬರೆದಂತೆಯೇ.

ಆದರೆ ನಾಡ ದೊರೆಯೇ ಮುಡಾ ಹಗರಣದಿಂದ ಆರೋಪಿ ಸ್ಥಾನದಲ್ಲಿರುವುದರಿಂದ ನಾಡಹಬ್ಬ ದಸರಾಕ್ಕೆ ಒಂದು ರೀತಿ ಮಸುಕು ಕವಿದಂತಾಗಿದೆ. ಮುಂದಿನ 15 ದಿನಗಳ ರಾಜಕೀಯ ಬೆಳವಣಿಗೆ ಗಳು ಏನಾಗಬಹುದು ಎಂದು ಯಾವ ರಾಜಕೀಯ ಪಂಡಿತರು ಸಹ ಊಹಿಸಲು ಸಾಧ್ಯವೇ ಇಲ್ಲ. ಆದರೆ ಕೆಲವು ಸಂಪುಟದ ಸಚಿವರು ತೋರಿಕೆಗಾಗಿ ಯಾರನ್ನೋ ಮೆಚ್ಚಿಸಲು ಭಂಡ ಧೈರ್ಯ ಪ್ರದರ್ಶನ ಮಾಡುತ್ತಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ 40 ವರ್ಷಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಇಂತಹ ಕಠಿಣ ಪರಿಸ್ಥಿತಿ ಎದುರಿಸಿರಲಿಲ್ಲ. ಮುಖ್ಯವಾಗಿ ಪತ್ನಿ ಪಾರ್ವತಿ ಅವರನ್ನು ಲೋಕಾಯುಕ್ತ ಪೊಲೀಸರ ಮುಂದೆ ನಿಲ್ಲಿಸುವ ಅನಿವಾರ್ಯತೆ ಎದುರಾಗಿರುವುದು ಅವರ ಆತ್ಮಬಲವೇ ಕುಸಿದು ಹೋಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಹಿಂದೆ ಇದ್ದಂತಹ ಲವಲವಿಕೆ ಆಗಲಿ, ಆತ್ಮವಿಶ್ವಾಸವಾಗಲೀ ಕಾಣುತ್ತಿಲ್ಲ. ಏನೇ ಆಗಲಿ ಸಿದ್ದರಾಮಯ್ಯ ಅವರ ರಾಜಕೀಯ ಜೀವನದಲ್ಲಿ ಇದೊಂದು ಕಪ್ಪು ಚುಕ್ಕೆಯಾಗಿ ಉಳಿಯುತ್ತದೆ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ ಮೈಸೂರು

ತಿರುಪತಿ ಆಡಳಿತ ಹಿಂದೂಗಳಿಗೆ ನೀಡಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಹಿಂದೂಗಳ ಮೇಲೆ ಹಿಂದೂ ನಂಬಿಕೆಗಳ ಮೇಲೆ ಆಕ್ರಮಣ ನಡೆಯುತ್ತಿದೆ. ಕೆಲವು ದಿನಗಳ ಬೆಳವಣಿಗೆಯಂತೆ ತಿರುಪತಿ ದೇವಾಲಯದ ಪ್ರಸಾದದ ಲಾಡುಗಳನ್ನು ಕಲಬೆರಕೆ ಮಾಡಿರುವ ವಿಚಾರ ತಿಳಿದು ಎಲ್ಲಾ ಹಿಂದೂಗಳಿಗೂ ಬಹಳ ಬೇಸರವಾಗಿದೆ. ಅನೇಕತೆಯಲ್ಲಿ ಏಕತೆ ಎನ್ನುವಂತೆ ಹಿಂದೂಗಳು ಇತರ ಧರ್ಮದವರ ಮೇಲೆ ದಬ್ಬಾಳಿಕೆ ನಡೆಸುತ್ತಿಲ್ಲ. ತಮ್ಮ ಧರ್ಮ ಆಚರಣೆಗೆ ತೊಂದರೆಯಾದಾಗ ಮಾತ್ರ ಪ್ರತಿಭಟಿಸುತ್ತಾರೆ. ಹೀಗಿರುವಾಗ ತಿರುಪತಿ ದೇವಾಲಯ ಇಡೀ ಪ್ರಪಂಚದಲ್ಲೇ ಹಿಂದೂಗಳಿಗೆ ಪರಮ ಪವಿತ್ರವಾದುದು. ಇದನ್ನು ಹಿಂದೂಯೇತರ ಧರ್ಮದವರು ನಡೆಸು ವುದು ಎಷ್ಟು ಸರಿ. ಅಲ್ಲಿಯ ಆದಾಯವನ್ನು ಸಹ ಅಲ್ಲಿನ ಸರ್ಕಾರ ತನ್ನ ವಶಕ್ಕೆ ಪಡೆಯುತ್ತಿದೆ. ಬೇರೆ ಧರ್ಮದವರ ದೇವಾಲಯ ಹಾಗೂ ಅಲ್ಲಿ ಬರುವ ಆದಾಯಕ್ಕೆ ಹಿಂದೂಗಳಾಗಲೀ, ಸರ್ಕಾರವಾಗಲೀ ಪ್ರವೇಶಿಸುತ್ತಿಲ್ಲ. ಆದುದರಿಂದ ಹಿಂದೂ ಧರ್ಮದ ದೇವಾಲಯಗಳಿಗೆ ಸರ್ಕಾರ ಕೈಹಾಕಬಾರದು. ಹಿಂದೂ ಮಠಾಧೀಶರು ಎಚ್ಚೆತ್ತು ಸರ್ಕಾರಕ್ಕೆ ಮನವಿ ನೀಡಿ ತಿರುಪತಿಯ ಆದಾಯ ಹಾಗೂ ಆಡಳಿತವನ್ನು ಹಿಂದೂಗಳಿಗೆ ನೀಡಬೇಕು. ಎಲ್ಲಾ ಹಿಂದೂಗಳು ಎಚ್ಚೆತ್ತು ಸರ್ಕಾರವನ್ನು ಒತ್ತಾಯಿಸಬೇಕು.

–ರಘುವೀರ ಪುರಾಣಿಕ್, ಮೈಸೂರು.

ಕನ್ನಡ ಕಲಾವಿದರಿಗೆ ಮೊದಲ ಆದ್ಯತೆ ನೀಡಿ

ಮಾನ್ಯರೆ,

ಪ್ರತೀ ವರ್ಷ ಮೈಸೂರಿನಲ್ಲಿ ದಸರಾ ಬಂದರೆ ಒಂದು ಕಳೆ. ಎಲ್ಲಾ ರೀತಿಯ ಕಾರ್ಯ ಚಟುವಟಿಕೆಯಿಂದ ಕೂಡಿರುತ್ತದೆ. ದಸರಾ ಹಬ್ಬದ ಮುನ್ನವೇ ಹಲವಾರು ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿರುತ್ತಾರೆ. ಆದರೆ ಅಲ್ಲಿ ಭಾಗವಹಿಸುವ ಕಲಾವಿದರು ನಮ್ಮ ಕನ್ನಡ ಕಲಾವಿದರಲ್ಲ. ಹಿಂದಿ, ತೆಲುಗು, ತಮಿಳಿನ ಸ್ಟಾರ್ ನಟ ನಟಿಯರನ್ನು ಬರಮಾಡಿಕೊಳ್ಳುತ್ತಿದ್ದಾರೆ. ಆದರೆ ಕನ್ನಡ ಕಲಾವಿದರನ್ನು ಗುರುತಿಸಿ ಪ್ರೋತ್ಸಾಹಿಸಿ. ಈ ಬಾರಿ ನಡೆಯುವ 'ಜಂಬೂ ಸವಾರಿ' ಯಲ್ಲಿ ನಮ್ಮ ಕನ್ನಡದ ಕಲಾವಿದರಿಗೆ ಮೊದಲ ಆದ್ಯತೆ ನೀಡಬೇಕೆಂದು ಮನವಿ.

–ಪೃಥ್ವಿರಾಜ್. ಬಿ., ಮಹಾರಾಜ ಕಾಲೇಜ, ಮೈಸೂರು.

ರೈಲ್ವೆ ಆಸ್ಪತ್ರೆ ಮುಂಭಾಗ ರಸ್ತೆ ಡುಬ್ಬ ನಿರ್ಮಿಸಿ

ಮಾನ್ಯರೆ,

ಮೈಸೂರಿನ ಕೆ.ಆರ್.ಎಸ್. ರಸ್ತೆಯ ಯಾದವಗಿರಿಯಲ್ಲಿರುವ ರೈಲ್ವೆ ಆಸ್ಪತ್ರೆಯ ಮುಂಭಾಗದ ಮುಖ್ಯ ರಸ್ತೆಯು ಯಾವಾಗಲೂ ವಾಹನ ದಟ್ಟಣೆಯಿಂದ ಕೂಡಿದ್ದು, ಅದರಲ್ಲೂ ವಾಹನಗಳು ಮಿತಿ ಮೀರಿದ ವೇಗದಲ್ಲಿ ಸಂಚರಿಸುತ್ತವೆ.

ರೈಲ್ವೆ ಆಸ್ಪತ್ರೆ ಮುಂಭಾಗ ಮೂರು ರಸ್ತೆ ಕೂಡುವ ತಿರುವಿನಲ್ಲಿ ಪ್ರತಿನಿತ್ಯವೂ ಸಣ್ಣಮಟ್ಟ ಅಪಘಾತಗಳು ಸಂಭವಿಸುತ್ತಿದ್ದು, ವಾಹನ ಸವಾರರ ನಡುವೆ ಘರ್ಷಣೆ ನಡೆಯುವುದು ಮಾಮೂಲಾಗಿದೆ. ಈ ರಸ್ತೆಯ ಮೂಲಕವೇ ಜಿಲ್ಲಾಸ್ಪತ್ರೆ ಮತ್ತು ಜಯದೇವ ಆಸ್ಪತ್ರೆಗೆ ತುರ್ತು ಚಿಕಿತ್ಸಾ ವಾಹನಗಳು ಸಂಚರಿಸುತ್ತವೆ. ರೈಲ್ವೆ ಆಸ್ಪತ್ರೆಯ ಪಕ್ಕದಲ್ಲಿ ಭಾರತಿ ಸ್ತ್ರೀ ಸಮಾಜ ಶಾಲೆಯಿರುತ್ತದೆ. ಈ ಸಮಸ್ಯೆ ಕುರಿತು ಪತ್ರಿಕೆಯ ಅಂಕಣದಲ್ಲಿ ಪತ್ರ ಪ್ರಕಟವಾಗಿತ್ತು. ಇನ್ನು ಕೆಲವೇ ದಿನಗಳಲ್ಲಿ ದಸರಾ ಹಬ್ಬ ಆರಂಭ ವಾಗುತ್ತಿದ್ದು, ಬೃಂದಾವನ ಉದ್ಯಾನವನ ಮತ್ತು ಬಲಮುರಿ ಮತ್ತಿತರ ಸ್ಥಳಗಳಿಗೆ ತೆರಳುವ ಪ್ರವಾಸಿಗರು ಈ ರಸ್ತೆಯ ಮೂಲಕವೇ ಸಂಚರಿಸಬೇಕಾಗಿದೆ. ಆದ ಕಾರಣ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಆದಷ್ಟು ಶೀಘ್ರ ಇಲ್ಲಿ ರಸ್ತೆ ಡುಬ್ಬವನ್ನು ನಿರ್ಮಿಸಿ ಹೆಚ್ಚಿನ ಅನಾಹುತಗಳನ್ನು ತಡೆಯಬೇಕೆಂದು ಮನವಿ.

–ಸಾವಿತ್ರಮ್ಮ, ಮೈಸೂರು.

ಕಸದ ಲಾರಿಗಳಿಗೆ ಇರಲಿ ವೇಗಮಿತಿ

ಮಾನ್ಯರೆ,

ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ (ಬಿಬಿಎಂಪಿ) ಕಸದ ಲಾರಿಯು ಇತ್ತೀಚೆಗೆ ಅತಿ ವೇಗದಲ್ಲಿ ಬಂದು ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು, ಇಬ್ಬರು ಸವಾರರ ಅಮೂಲ್ಯ ಜೀವವನ್ನು ಬಲಿ ತೆಗೆದುಕೊಂಡಿರುವ ಸುದ್ದಿ ಕಳವಳ ಮೂಡಿಸಿತು. ಇದೇ ವೇಳೆ, ರಾಜ್ಯದಲ್ಲಿ ವಾಹನಗಳು 130 ಕಿಮೀಗಿಂತ ಹೆಚ್ಚಿನ ವೇಗದಲ್ಲಿ ಸಂಚರಿಸುವುದಕ್ಕೆ ಪೊಲೀಸ್ ಇಲಾಖೆ ಕಡಿವಾಣ ಹಾಕಲು ಮುಂದಾಗಿರುವುದು ಜನಸ್ನೇಹಿ ನಡೆ. ಅದೇ ರೀತಿ, ಕಸದ ಲಾರಿಗಳಿಗೆ ಅನುಮತಿ ಕೊಡುವಾಗಲೇ ವೇಗಮಿತಿಯನ್ನು ಗಂಟೆಗೆ 30 ಕಿಮೀಗೆ ನಿಗದಿ ಮಾಡುವುದು ಒಳ್ಳೆಯದು. ಇದರಿಂದ, ನಗರ ಪ್ರದೇಶಗಳಲ್ಲಿ ಯಮಸದೃಶ ಕಸದ ಲಾರಿಗಳಿಂದ ಒದಗಬಹುದಾದ ಅನಾಹುತಗಳ ನಿಯಂತ್ರಣ ಸಾಧ್ಯವಾಗಬಹುದು.

–ಚೇತನ್ ಎನ್ ಆರ್, ಪದವಿ ವಿದ್ಯಾರ್ಥಿ, ನಗರ್ಲೆ, ನಂಜನಗೂಡು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಕಲಿಸುವವರು ಕಲಿಯಲೂ ಬೇಕಲ್ಲವೇ?



ಕಲಿಸುವವರು ಯಾವಾಗಲೂ ಕಲಿಸುತ್ತಲೇ ಇರುತ್ತೇವೆ ಎಂಬ ಭಾವನೆ ಸಾಮಾನ್ಯ ವಾಗಿರುತ್ತದೆ. ತಾವು ಎಂದೋ ಓದಿದ್ದನ್ನು ಮುಂದಿನ ಮಕ್ಕಳಿಗೆ ವರ್ಗಾಯಿಸುವುದೇ ಅಧ್ಯಾಪಕರ ಕೆಲಸ ಎಂಬಂತೆ ಭಾಸವಾಗುತ್ತಿದೆ. ಆದರೆ ಇಂದು ಪ್ರಪಂಚ ಬದಲಾಗುತ್ತಿದೆ. ನಾವು ಹಿಂದೆ ಕಲಿತು ಸರಿ ಎಂದುಕೊಂಡಿದ್ದು ಸರಿಯಲ್ಲ, ವಿಷಯ ಬೇರೆಯೇ ಇದೆ ಎಂಬುದು ನಂತರದ ದಿನಗಳಲ್ಲಿ ಗೊತ್ತಾಗುತ್ತದೆ. ಆದರೂ ತಾವು ತಿಳಿದುಕೊಂಡಿದ್ದೇ ಸರಿ ಎಂದು ವಾದ ಮಾಡಿದರೆ ಅವರನ್ನು ಜನರು ಔಟ್‌ಡೇಟೆಡ್ ಎಂದು ಭಾವಿಸುತ್ತಾರೆ. ತಾವು ಹಿಂದೆ ಕಲಿತಿದ್ದನ್ನು, ಕೇಳಿದ್ದನ್ನೇ ಗೆಳೆಯರ ಬಳಿ ಹೇಳುತ್ತಾ ಹೋದರೆ ಅವರೂ ಒಳಗೊಳಗೆ ನಗುತ್ತಾ ಕ್ರಮೇಣ ಅಂತಹವರಿಂದ ದೂರವಾಗುತ್ತಾರೆ. ಆದ್ದರಿಂದ ಕಲಿಯುವಿಕೆ ನಿರಂತರವಾಗಬೇಕು. ತಾನು ಕಲಿತಿದ್ದು ಸರಿಯಲ್ಲ ಎಂದು ಗೊತ್ತಾದಾಗ ಅದನ್ನು ತಿದ್ದಿಕೊಳ್ಳಬೇಕು. ಹಾಗಾದಾಗ ನಾಲ್ಕು ಜನರೊಡನೆ ನಾವು ಸಮರ್ಥವಾಗಿ ಬೆರೆಯಲು, ಮಾತನಾಡಲು ಸಾಧ್ಯವಾಗುತ್ತದೆ.

ಇಲ್ಲಿ ಕಲಿಸುವುದು ಎಂದರೆ ಅದು ಕೇವಲ ಶಿಕ್ಷಕರಿಗೆ ಮಾತ್ರ ಅನ್ವಯಿಸುತ್ತದೆ ಎಂದು ಭಾವಿಸಬಾರದು. ಕಲಿಸುವಿಕೆ ಇಂದು ಎಲ್ಲಾ ಕ್ಷೇತ್ರದಲ್ಲೂ ಕಂಡುಬರುತ್ತದೆ. ಒಬ್ಬ ಮನೆ ಕಟ್ಟುವ ಇಂಜಿನಿಯರ್ ತನಗೇ ಎಲ್ಲಾ ಗೊತ್ತು ಎಂದು ಭಾವಿಸುವುದಕ್ಕಿಂತ ಒಬ್ಬ ಆರ್ಕಿಟೆಕ್ಟ್ ಹತ್ತಿರ ಮನೆಯ ಬಗ್ಗೆ ಚರ್ಚಿಸಿದರೆ ಅವನು ಕಟ್ಟುವ ಮನೆ ನವನವೀನ ವಾಗುತ್ತದೆ. ಇದರ ಪ್ರಯೋಜನ ಮನೆಯನ್ನು ಕಟ್ಟಿಸುವಾತನಿಗೆ ಆಗುತ್ತದೆ. ಅಲ್ಲದೆ ಅವನ ಜ್ಞಾನವೂ ಬೆಳೆಯುತ್ತದೆ. ಒಬ್ಬ ವೈದ್ಯ ಮತ್ತೊಬ್ಬ ವೈದ್ಯನೊಡನೆ ಮುಕ್ತವಾಗಿ ಸಂಭಾಷಿಸಿದರೆ ಅದರ ಪ್ರಯೋಜನ ರೋಗಿಗಳಿಗೆ ಆಗುತ್ತದೆ. ಒಬ್ಬ ವ್ಯಾಪಾರಿ ಮತ್ತೊಂದು ಭಾಗದ ವ್ಯಾಪಾರಿಯೊಡನೆ ಮಾತನಾಡಿದರೆ ತನ್ನ ವ್ಯಾಪಾರವನ್ನು ಹೇಗೆ ಸುಸ್ಥಿತಿಗೆ ತರಬಹುದು ಎಂಬುದು ಅರಿವಾಗುತ್ತದೆ.

ಇಂದು ರಾಜಕಾರಣ ಎಲ್ಲಾ ಕ್ಷೇತ್ರಗಳನ್ನು ಆವರಿಸಿಕೊಂಡಿರುವುದು ಒಂದು ರೀತಿ ಆತಂಕಕ್ಕೆ ಕಾರಣವಾಗುತ್ತಿದೆ. ಇತ್ತೀಚೆಗೆ ಒಬ್ಬರು ಒಂದು ಸಭೆಯಲ್ಲಿ ಮಾತನಾಡುತ್ತಾ, 'ನಮ್ಮ ಶಿಕ್ಷಕರು ಪಾಠ ಮಾಡುವುದಕ್ಕಿಂತ ರಾಜಕೀಯದಲ್ಲಿ ಹೆಚ್ಚು ಸಕ್ರಿಯರಾಗಿದ್ದಾರೆ. ಇದರಿಂದಾಗಿ ಇಂದು ಶಿಕ್ಷಕರ ಕ್ಷೇತ್ರ ಹಾಗೂ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ನಡೆಯುವ ಚುನಾವಣಾ ವ್ಯವಸ್ಥೆ ಹಾಳಾಗಿದೆ. ಚುನಾವಣೆಗೆ ನಿಂತ ಅಭ್ಯರ್ಥಿ ಹೆಚ್ಚು ಹಣ ಖರ್ಚು ಮಾಡಬೇಕಾಗುತ್ತಿದೆ. ಉಳಿದೆಲ್ಲಾ ಚುನಾವಣೆಗಿಂತ ಈ ಚುನಾವಣೆಗಳಲ್ಲಿ ಹೆಚ್ಚು ಹಣ ಖರ್ಚಾಗುತ್ತಿದೆ. ಶಿಕ್ಷಕರು ಹಾಗೂ ಪದವೀಧರರು ಎಲ್ಲರಿಗಿಂತ ಬುದ್ಧಿವಂತರು. ಆದರೆ ಅವರು ಚುನಾವಣಾ ಸಮಯದಲ್ಲಿ ಹಣಕ್ಕೆ ಆಸೆಪಡುತ್ತಾರೆ ಎಂದರೆ ನಮ್ಮ ದೇಶ ಯಾವ ಕಡೆ ಹೋಗುತ್ತಿದೆ ಎಂದು ಯೋಚಿಸಲು ಭಯವಾಗುತ್ತಿದೆ' ಎಂದು ಹೇಳಿದ್ದು, ಚಿಂತನೆಗೆ ಒಳಪಡಿಸುತ್ತದೆ.

> “ಕಲಿಸುವಿಕೆ ಇಂದು ಎಲ್ಲಾ ಕ್ಷೇತ್ರದಲ್ಲೂ ಕಂಡುಬರುತ್ತದೆ. ಒಬ್ಬ ಮನೆ ಕಟ್ಟುವ ಇಂಜಿನಿಯರ್ ತನಗೇ ಎಲ್ಲಾ ಗೊತ್ತು ಎಂದು ಭಾವಿಸುವುದಕ್ಕಿಂತ ಒಬ್ಬ ಆರ್ಕಿಟೆಕ್ಟ್ ಹತ್ತಿರ ಮನೆಯ ಬಗ್ಗೆ ಚರ್ಚಿಸಿದರೆ ಅವನು ಕಟ್ಟುವ ಮನೆ ನವನವೀನವಾಗುತ್ತದೆ. ಇದರ ಪ್ರಯೋಜನ ಮನೆಯನ್ನು ಕಟ್ಟಿಸುವಾತನಿಗೆ ಆಗುತ್ತದೆ. ಅಲ್ಲದೆ ಅವನ ಜ್ಞಾನವೂ ಬೆಳೆಯುತ್ತದೆ. ಒಬ್ಬ ವೈದ್ಯ ಮತ್ತೊಬ್ಬ ವೈದ್ಯನೊಡನೆ ಮುಕ್ತವಾಗಿ ಸಂಭಾಷಿಸಿದರೆ ಅದರ ಪ್ರಯೋಜನ ರೋಗಿಗಳಿಗೆ ಆಗುತ್ತದೆ. ಒಬ್ಬ ವ್ಯಾಪಾರಿ ಮತ್ತೊಂದು ಭಾಗದ ವ್ಯಾಪಾರಿಯೊಡನೆ ಮಾತನಾಡಿದರೆ ತನ್ನ ವ್ಯಾಪಾರವನ್ನು ಹೇಗೆ ಸುಸ್ಥಿತಿಗೆ ತರಬಹುದು

ಅದೇ ರೀತಿ ಇಂದು ದೇಶದ ಹಾಗೂ ನಮ್ಮ ರಾಜ್ಯದ ರಾಜಕಾರಣ ಕಂಡಾಗಲೂ ಇದೇ ಬೇಸರದ ನಿಟ್ಟುಸಿರು ಹೊರಹೊಮ್ಮುತ್ತದೆ. ಒಂದು ಪಕ್ಷದವರು ಇನ್ನೊಂದು ಪಕ್ಷದ ತಪ್ಪು ಕಂಡುಹಿಡಿದು, ಹೀಗಳೆದು ಮಾತನಾಡಿದಾಗ, ನಾವು ಹಾಗಲ್ಲಾ, ನಾವು ತಪ್ಪು ಮಾಡಿಲ್ಲ ಎಂದು ಹೇಳುವುದಕ್ಕಿಂತ ನೀನೇನು ಸಾಚಾನಾ? ನೀನೂ ನನಗಿಂತ ಹೆಚ್ಚು ತಪ್ಪು ಮಾಡಿದ್ದೀಯಾ ಎಂದು ಹೇಳಲಾಗುತ್ತಿದೆಯೇ ವಿನಃ, ನಾನು ಮಾಡಿದ್ದು ತಪ್ಪು ಎಂದು ಒಪ್ಪಿಕೊಳ್ಳುವ ಮನಸ್ಥಿತಿ ಇಂದು ಕಾಣೆಯಾಗಿದೆ. ಅಂದರೆ ಇಂದು ರಾಜಕಾರಣ ಮಾಡುತ್ತಿರುವವರೆಲ್ಲಾ ತಪ್ಪನ್ನೇ ಮಾಡುತ್ತಿದ್ದಾರೆ ಎಂದು ಜನರು ಭಾವಿಸುವಂತೆ ಆಗುತ್ತಿದೆ. ವಿಧಾನಸಭೆ, ವಿಧಾನಪರಿಷತ್ತುಗಳಲ್ಲಿ ನಡೆಯುತ್ತಿರುವ ವಿದ್ಯಮಾನಗಳು ಸಮಾಜಕ್ಕೆ ಯಾವ ಸಂದೇಶ ನೀಡುತ್ತಿವೆ ಎಂಬ ಭಾವನೆಯೇ ಇಲ್ಲದೆ ಅಧಿಕಾರ ನಮ್ಮಿಷ್ಟ ಎಂಬಂತೆ ನಡೆದುಕೊಳ್ಳುತ್ತಿರುವುದನ್ನು ಈ ಸಮಾಜ ಮೂಕವಾಗಿ ವೀಕ್ಷಿಸಬೇಕಾಗಿದೆ. ನಾವು ಇರುವುದು ಸಮಾಜವನ್ನು ತಿದ್ದುವುದಕ್ಕೆ. ಸಮಾಜವನ್ನು ತಿದ್ದಬೇಕಾದರೆ ಮೊದಲು ನಾವು ಸರಿಯಿರಬೇಕಲ್ಲವೇ? ಇಲ್ಲದಿದ್ದರೆ ಹೇಳುವುದು ಒಂದು ಮಾಡುವುದು ಮತ್ತೊಂದು ಎಂಬಂತೆ ಆಗಿಬಿಡುತ್ತದೆ ಎಂಬುದು ಅಧಿಕಾರ ಹಿಡಿದವರಿಗೆ ಅರ್ಥವಾಗಬೇಕು. ಜನರು ಯಾರನ್ನು ತಮ್ಮ ನಾಯಕ ಎಂದು ಭಾವಿಸಬೇಕು? ನಾನು ತಪ್ಪು ಮಾಡಿಲ್ಲ ಎನ್ನುವುದಕ್ಕಿಂತ ನನಗಿಂತ ನೀನೇ ಹೆಚ್ಚು ತಪ್ಪು ಮಾಡಿದವನು ಎಂದು ಹೇಳಿ ತನ್ನ ಮೇಲಿನ ಆಪಾದನೆಯನ್ನು ಸಮರ್ಥಿಸಿಕೊಳ್ಳುವ ಮನೋಭಾವ ಬೆಳೆಯುತ್ತಿರುವುದು ಸರಿ ಎನಿಸುವುದಿಲ್ಲ. ಇಂದು ನಾವು ಯೋಚನೆ ಮಾಡಬೇಕಾಗಿರುವುದು ಮುಂದಿನ ಸಮಾಜದ ಬಗ್ಗೆ. ನಾನು ಹೋದ ನಂತರವೂ ನಾನು ಮಾಡಿದ ಕೆಲಸವನ್ನು ಈ ಸಮಾಜ ಗುರುತಿಸುವಂತೆ ಆಗಬೇಕು ಎಂಬ ಭಾವನೆ ದಿನೇದಿನೇ ಕಡಿಮೆಯಾಗುತ್ತಿರುವುದೂ ಆತಂಕಕ್ಕೆ ಕಾರಣವಾಗುತ್ತಿದೆ.

ಇನ್ನು ನಮ್ಮ ಸಾರ್ವಜನಿಕ ಕಚೇರಿಗಳಲ್ಲಿ ತನ್ನ ಮೇಲಧಿಕಾರಿಯೇ ತಪ್ಪು ಮಾಡುತ್ತಾನೆ. ಆತ ಲಂಚಕ್ಕಾಗಿ ಜನರನ್ನು ಪೀಡಿಸುತ್ತಾನೆ ಎಂದು ಕೆಳಹಂತದ ನೌಕರರಿಗೆ ಗೊತ್ತಾದಾಗ ಅವರಿಗೆ ಪ್ರಾಮಾಣಿಕವಾಗಿ ಕೆಲಸ ಮಾಡಲು ಮನಸ್ಸು ಬರುತ್ತದೆಯೇ? ಇತ್ತೀಚೆಗಂತೂ ಕಚೇರಿಯ ಮುಖ್ಯಸ್ಥ ತನಗೆ ಬೇಕಾದಂತೆ ಟಿಪ್ಪಣಿ ಬರೆದು ತಾರದ ನೌಕರರನ್ನು ಎಲ್ಲರ ಮುಂದೆ ಹಿಯ್ಯಾಳಿಸಿ ಮಾತನಾಡುತ್ತಾರೆ ಎಂದರೆ ಆ ನೌಕರ ಹೇಗೆ ಪ್ರಾಮಾಣಿಕವಾಗಿ ಕೆಲಸ ಮಾಡಲು ಸಾಧ್ಯ?

ಇಂದು ಕಲಿಸುವ ಕೆಲಸ ಕೇವಲ ಶಿಕ್ಷಣ ಇಲಾಖೆಯದ್ದು ಎಂದು ಭಾವಿಸುತ್ತಿರುವುದು ಸರಿಯಾದ ನಡೆಯಲ್ಲ. ಶಿಕ್ಷಕ ತನ್ನ ಶಾಲಾ ಮಕ್ಕಳಿಗೆ ತಾನು ಕಲಿತಿದ್ದನ್ನು ಕಲಿಸುತ್ತಾನೆ ಅಷ್ಟೇ. ಆದರೆ ಇಂದು ಶಿಕ್ಷಣ ಕ್ಷೇತ್ರದ ಪಾವಿತ್ರ್ಯತೆ ಹಿಂದಿನಂತೆ ಉಳಿದಿಲ್ಲ. ಇದರಿಂದಾಗಿ ಶಾಲಾ ಮಕ್ಕಳು ತಮ್ಮ ಶಿಕ್ಷಕರಿಗೆ ನೀಡಬೇಕಾದ ಗೌರವ ನೀಡುತ್ತಿಲ್ಲ. ಶಿಕ್ಷಕರು ನಾವು ಕಲಿಸಲು ಮಾತ್ರ ಇರುವವರು ಎಂದು ಭಾವಿಸುತ್ತಾರೆಯೇ ವಿನಃ ತಾವೂ ಕಲಿಯುವವರು ಎಂದು ಭಾವಿಸದಿರುವುದು ವಿಷಾದದ ಸಂಗತಿ. ಒಬ್ಬ ಪ್ರಖ್ಯಾತ ಶಿಕ್ಷಕರು ನಿವೃತ್ತಿಯ ನಂತರ ಹೇಳಿದ ಒಂದು ಮಾತು ಮನನಾರ್ಹ. 'ನನ್ನ ವೃತ್ತಿ ಜೀವನದಲ್ಲಿ ನಾನು ಕಲಿಸಿದ್ದಕ್ಕಿಂತ ಕಲಿತಿದ್ದೇ ಹೆಚ್ಚು'. ಅವರು ಶಿಕ್ಷಕರಾಗಿದ್ದಾಗ ಅತ್ಯಂತ ಜನಪ್ರಿಯ ಶಿಕ್ಷಕ ಎನಿಸಿದ್ದರು. ಆದರೆ ಅವರು ತಾವು ಮಕ್ಕಳಿಗೆ ಕಲಿಸಿದ್ದಕ್ಕಿಂತ ಅವರಿಂದ ಕಲಿತದ್ದೇ ಹೆಚ್ಚು ಎಂದು ಹೇಳುವುದು ದೊಡ್ಡತನ ಎನ್ನಿಸುತ್ತದೆ.

ಇತ್ತೀಚೆಗೆ ಭೇಟಿಯಾದ ಮತ್ತೊಬ್ಬ ಶಿಕ್ಷಕರು ಹೇಳಿದ ಮಾತು ಸಹ ಮನತಟ್ಟುವಂತಿತ್ತು. 'ನಾನು ಕೆಲಸಕ್ಕೆ ಸೇರಿದ ಮೇಲೆ ಬಹಳ ವರ್ಷಗಳ ಕಾಲ ನಗರ ಪ್ರದೇಶಗಳಲ್ಲೇ ಕೆಲಸ ಮಾಡಿದೆ. ನನಗೆ ಒಂದು ರೀತಿಯ ಭ್ರಾಂತಿ ಇತ್ತು. ನಗರದ ಮಕ್ಕಳೇ ಕಲಿಯುವುದರಲ್ಲಿ ಮುಂದು, ಹಳ್ಳಿ ಮಕ್ಕಳು ಕಲಿಕೆಯಲ್ಲಿ ಹಿಂದೆ. ಆದ್ದರಿಂದ ಅಂತಹ ಮಕ್ಕಳಿಗೆ ಕಲಿಸುವುದು ವ್ಯರ್ಥ ಶ್ರಮ ಎಂದು ಭಾವಿಸಿದ್ದೆ. ಆದರೆ ನಾನು ಒಮ್ಮೆ ಅನಿವಾರ್ಯವಾಗಿ ಒಂದು ಗ್ರಾಮಕ್ಕೆ ವರ್ಗಾವಣೆಯಾದಾಗ ಬಹಳ ಬೇಸರದಿಂದಲೇ ಆ ಹಳ್ಳಿಗೆ ಹೋದೆ. ಅಲ್ಲಿಗೆ ಹೋದ ನಂತರ ಅಲ್ಲಿಯವರೆಗೆ ನಾನು ಅಂದುಕೊಂಡಿದ್ದು ತಪ್ಪು ಎಂದು ಗೊತ್ತಾಯಿತು. ಅಲ್ಲಿನ ಮಕ್ಕಳು ಮುಗ್ಧರು, ಆದರೆ ಜಾಣರು. ಹೇಳಿದ್ದನ್ನು ತಕ್ಷಣಕ್ಕೆ ಕಲಿಯುತ್ತಿದ್ದರು. ಮಕ್ಕಳ ಪ್ರಗತಿಗೆ ಶಿಕ್ಷಕರು ಕಾರಣ ಎಂದು ಊರವರು ಭಾವಿಸಿದ್ದರು. ಹಾಗಾಗಿ ಊರವರಿಗೆ ಶಿಕ್ಷಕರೆಂದರೆ ಬಹು ಅಭಿಮಾನ. ರಸ್ತೆಯಲ್ಲಿ ಶಿಕ್ಷಕ ಹೋಗುತ್ತಿದ್ದರೆ ಊರ ಜನ ಗೌರವದಿಂದ ನೋಡುತ್ತಿದ್ದರು. ಅಂತಹ ಅನುಭವ ನನಗೆ ನಗರದ ಕೆಲಸದಲ್ಲಿ ದೊರಕಲೇ ಇಲ್ಲ. ಅದೊಂದು ಯಾಂತ್ರಿಕ ಕೆಲಸವಾಗಿತ್ತು. ಒಂದು ರೀತಿಯಲ್ಲಿ ವೇತನ ಪಡೆಯುವುದಕ್ಕಾಗಿ ಕೆಲಸ ಮಾಡುತ್ತಿದ್ದ ಹಾಗೆ ಆಗುತ್ತಿತ್ತು. ಮಕ್ಕಳಲ್ಲಿ ಅನೇಕ ಶ್ರೀಮಂತ ಮಕ್ಕಳು ಇರುತ್ತಿದ್ದರು. ಅವರಿಗೆ ಬಡ ಶಿಕ್ಷಕರನ್ನು ಕಂಡರೆ ಅಂತಹ ಗೌರವ ಇರುತ್ತಿರಲಿಲ್ಲ. ಆದರೆ ಈ ಹಳ್ಳಿಯ ಕೆಲಸ ನನಗೆ ದೇವರ ಕೆಲಸ ಎನಿಸಿತು. ಹಳ್ಳಿಗೆ ವರ್ಗಾವಣೆಯಾಗದಿದ್ದರೆ ನಾನು ನನ್ನ ಜೀವನದ ಬಹು ಅಮೂಲ್ಯ ಸಮಯವನ್ನು ಕಳೆದುಕೊಳ್ಳುತ್ತಿದ್ದೆ. ನಾನು ಮತ್ತೆ ಅಲ್ಲಿಂದ ವರ್ಗಾವಣೆ ಕೋರಲೇ ಇಲ್ಲ. ಅಲ್ಲೇ ನಿವೃತ್ತನಾದೆ. ಈಗಲೂ ಆ ಹಳ್ಳಿಯ ಸವಿನೆನಪೇ ನನ್ನ ಜೀವನದ ಸವಿಪರ್ವ ಎಂಬಂತೆ ನಾನು ಭಾವಿಸುತ್ತೇನೆ' ಎಂದರು. ಇದು ನಾವು ಕಲಿಸುವವರು ಕಲಿಯಬೇಕಾದ ಪಾಠ. ನನಗೆ ಗೊತ್ತಿದ್ದುದೇ ಸರಿ ಎಂದು ಭಾವಿಸಿದರೆ ಇಂತಹ ಅಪೂರ್ವ ಅವಕಾಶದಿಂದ ನಾವು ವಂಚಿತರಾಗುತ್ತೇವೆ.


ನಾವು ನೆಮ್ಮದಿಯಾಗಿ ಇರಬೇಕೆಂದರೆ ನಾವು ನಿರಂತರವಾಗಿ ಕಲಿಯುವ ಮನಸ್ಸು ಮಾಡಬೇಕು. ನಮಗೆ ಪಾಠ ಮಾಡಲು ಪ್ರಕೃತಿ ಸಿದ್ಧವಿದೆ, ಗಿಡಮರಗಳು ಸಿದ್ಧವಿದೆ, ಪಶುಪಕ್ಷಿಗಳು ಸಿದ್ಧವಿದೆ. ಅವುಗಳಿಂದ ನಾವು ಏನೆಲ್ಲವನ್ನೂ ಕಲಿಯಬಹುದು. ಮೊದಲನೆಯದಾಗಿ ಜೀವನ ಪ್ರೀತಿಯನ್ನು ಪ್ರಕೃತಿ ಕಲಿಸುತ್ತದೆ. ಇತ್ತೀಚೆಗೆ ಹಲವು ಸಾಮಾಜಿಕ ಜಾಲತಾಣಗಳಲ್ಲಿ ಹುಲಿ, ಸಿಂಹದಂತಹ ಕ್ರೂರ ಪ್ರಾಣಿಗಳೂ ತಮ್ಮನ್ನು ಸಾಕಿ ಸಲಹಿದವರನ್ನು ಕಂಡಾಗ ಅದೆಂತಹ ಪ್ರೀತಿ ತೋರುತ್ತವೆ. ನಮ್ಮ ಮನೆಯ ನಾಯಿಯನ್ನು ನಮ್ಮ ಕೆಲಸದ ಒತ್ತಡದಲ್ಲಿ ಬೆಳಗ್ಗೆ ದಂಡಿಸಿ ಹೋದರೂ, ಸಂಜೆ ತಾನು ಮನೆಗೆ ಬಂದಾಗ ಅದು ಬಾಲ ಆಡಿಸುತ್ತಾ ತೋರಿಸುವ ಪ್ರೀತಿಯನ್ನು ಯಾವ ಪಠ್ಯಪುಸ್ತಕ ಕಲಿಸಬಹುದು? ದೀಪಾವಳಿಯ ಸಮಯದಲ್ಲಿ ರಸ್ತೆ ಬದಿಯಲ್ಲಿ ದೀಪದ ಹಣತೆಗಳನ್ನು ಮಾರುವ ಬಡವರನ್ನು ಕಂಡವರು ಅವರ ನೆರವಿಗೆ ಧಾವಿಸಿ ಬಂದಿದ್ದ ಹಲವಾರು ಉದಾಹರಣೆಗಳು ಕಂಡುಬರುತ್ತವೆ. ರಸ್ತೆಯಲ್ಲಿ ಭಿಕ್ಷೆ ಬೇಡುವವರಿಗೆ ಪ್ರೀತಿ ತೋರಿಸಿ, ಅವರನ್ನು ಮನೆಗೆ ಕರೆತಂದು ಉಪಚರಿಸಿದಾಗ, ಅವರು ಜೀವನಪೂರ್ತಿ ನಮ್ಮೊಡನೆ ಇರುತ್ತಾರೆ ಎಂಬ ಬಗ್ಗೆ ಹಲವು ಚಲನಚಿತ್ರಗಳು ಬಂದು ಹೋಗಿವೆ. ಆದರೂ ನಾವು ಇದರಿಂದ ಏಕೆ ಪಾಠವನ್ನು ಕಲಿಯುವುದಿಲ್ಲ ಎನ್ನಿಸುತ್ತದೆ.

ಮನುಷ್ಯನೇ ಬುದ್ಧಿವಂತ ಎಂದು ಬೀಗುವುದು ಎಷ್ಟು ಸರಿ? ಮೊನ್ನೆಮೊನ್ನೆ ಕೇರಳದಲ್ಲಿ ಸಂಭವಿಸಿದ ಜಲ ಪ್ರಳಯದಲ್ಲಿ ಮನುಷ್ಯ ಸತ್ತಿದ್ದೇ ಹೆಚ್ಚು, ಪ್ರಾಣಿಗಳು ಸತ್ತಿದ್ದು ಕಡಿಮೆ. ಅವುಗಳಿಗೆ ಮುಂಚಿತವಾಗಿಯೇ ಮುಂದೆ ಆಗಬಹುದಾದ ದುರಂತವನ್ನು ಕಂಡುಕೊಳ್ಳುವ ಶಕ್ತಿ ಇರುವುದರಿಂದ ಅವುಗಳು ಮೊದಲೇ ಸುರಕ್ಷಿತ ಸ್ಥಳಗಳಿಗೆ ಹೋಗಿ ತಮ್ಮ ಪ್ರಾಣ ಉಳಿಸಿಕೊಂಡವು. ಆದರೆ ಬುದ್ಧಿವಂತ ಎನಿಸಿಕೊಳ್ಳುವ ಮನುಷ್ಯನಿಗೆ ಅಂತಹ ಯಾವುದೇ ಶಕ್ತಿ ಇಲ್ಲ. ಆದರೂ ಮನುಷ್ಯ ತಾನು ಬುದ್ಧಿವಂತ ಎಂದು ಭಾವಿಸುವುದು ಎಷ್ಟರ ಮಟ್ಟಿಗೆ ಸರಿ? ಹಿಂದಿನ ಜನರಿಗೆ ಇಂತಹ ಅರಿವಿನ ಶಕ್ತಿ ಇತ್ತು. ಯಾವಾಗ, ಎಷ್ಟು ಮಳೆ ಬರುತ್ತದೆ ಎಂಬುದನ್ನು ಅವರು ನಿಖರವಾಗಿ ಹೇಳಬಲ್ಲವರಾಗಿದ್ದರು. ಹಾಗಾಗಿ ಅಂತಹ ದುರಂತಗಳು ನಡೆದಾಗ ಮನುಷ್ಯರು ಸತ್ತಿದ್ದು ಕಡಿಮೆಯೇ ಇರುತ್ತಿತ್ತು. ಇಂದು ನಾವು ತಂತ್ರಜ್ಞಾನದಲ್ಲಿ ಮುಂದುವರೆದಿದ್ದೇವೆ. ಅನೇಕ ಬಾಹ್ಯಾಕಾಶ ನೌಕೆಗಳನ್ನು ನಮ್ಮ ಉಪಯೋಗಕ್ಕಾಗಿ ಉಡಾಯಿಸಿದ್ದೇವೆ. ಆದರೂ ಇಂತಹ ದುರಂತಗಳು ನಡೆಯುತ್ತಲೇ ಇವೆ. ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸಿದಾಗ ನಾವು ಕಲಿತವರು, ನಾವಿನ್ನು ಕಲಿಯುವ ಅವಶ್ಯಕತೆ ಇಲ್ಲ ಎಂದು ಭಾವಿಸುತ್ತಿರುವುದೇ ಕಾರಣ ಎನ್ನಿಸುತ್ತದೆ. ನನಗಿಂತ ತಿಳಿದವರು ಬಹಳಷ್ಟಿದ್ದಾರೆ ಎಂದು ಭಾವಿಸಿದಾಗ, ನನ್ನ ತಿಳುವಳಿಕೆ ಅತ್ಯಲ್ಪ ಎಂದು ಭಾವಿಸಿದಾಗ, ನನಗಿಂತ ಕಿರಿಯರು ನನಗಿಂತಲೂ ಬುದ್ಧಿವಂತರಿರಬಹುದು, ಅವರಿಂದಲೂ ಕಲಿಯುವುದರಲ್ಲಿ ತಪ್ಪಿಲ್ಲ ಎಂದು ಭಾವಿಸಿದಾಗ ಮಾತ್ರ ನಾವು ಇಂತಹ ಸಂದಿಗ್ಧ ಪರಿಸ್ಥಿತಿಗಳಿಂದ ಪಾರಾಗಬಹುದು. ಕಲಿಯುವಿಕೆ ನಿರಂತರ ಎನ್ನುವುದನ್ನು ಮರೆಯಬಾರದು.

ಮೈಸೂರು ದಸರಾ ವಸ್ತುಪ್ರದರ್ಶನ ರೂಪುಗೊಳ್ಳುತ್ತಿದೆ

ಮೈಸೂರು ಅರಸರ ಮರದ ಅರಮನೆ ಗತವೈಭವ

- ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನರ ಮತ್ತೊಂದು ಅದ್ಭುತ ಪ್ರಯತ್ನ
- ಈ ಅರಮನೆಯಲ್ಲೇ ಮೈಸೂರು ಪರಂಪರೆ ಸಾರುವ ಪದಾರ್ಥಗಳ ಮಾರಾಟ ನಿರ್ಧಾರ



ಮೈಸೂರು ದಸರಾ ವಸ್ತು ಪ್ರದರ್ಶನದಲ್ಲಿ ಮೈಸೂರು ಅರಸರ ಮರದ ಅರಮನೆ ಪ್ರತಿರೂಪ ತಲೆಎತ್ತಿದೆ.

ಮೈಸೂರು, ಸೆ.27(ಜಿಎ)– ಮೈಸೂರು ಅರಮನೆ ನಗರಿ. ಅರಮನೆಯ ಸೌಂದರ್ಯ ಎಲ್ಲರನ್ನು ಆಕರ್ಷಿಸುವುದರೊಂದಿಗೆ ಜಗದ್ವಿಖ್ಯಾತವಾಗಿದೆ. ಈ ಹಿಂದೆ ಮೈಸೂರು ಮಹಾರಾಜರು ಮರದ ಅರಮನೆಯಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಇದೀಗ ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಮರದ ಅರಮನೆಯ ಪ್ರತಿರೂಪ ಸಿದ್ಧವಾಗುತ್ತಿದೆ. ಇದಕ್ಕಾಗಿ ಬರೋಬ್ಬರಿ ಕೋಟಿ ರೂ. ವೆಚ್ಚ ಮಾಡಲಾಗುತ್ತಿದ್ದು, ಆಕರ್ಷಕವಾಗಿ ಮೂಡಿ ಬರುತ್ತಿದೆ.



ಮೈಸೂರಿನ ಇತಿಹಾಸ ಪುಟ ಮತ್ತು ಛಾಯಾಚಿತ್ರದಲ್ಲಿ ಮಾತ್ರ ಕಾಣಸಿಗುವ ಮರದ ಅರಮನೆಯನ್ನು ದಸರಾ ಉದ್ಘಾಟನೆ ನಂತರ ವಸ್ತು ಪ್ರದರ್ಶನ ಆವರಣದಲ್ಲಿ ನೋಡಬಹುದಾಗಿದೆ. ಅದರ ಒಳಭಾಗದಲ್ಲಿ ಮೈಸೂರಿನ ಹೆಸರುವಾಸಿ ತಿನಿಸು ಮತ್ತು ಪದಾರ್ಥಗಳನ್ನು ಕಾಣಬಹುದಾಗಿದೆ.

ಬ್ರಾಂಡ್ ಮೈಸೂರಿನ ಪರಿಕಲ್ಪನೆಯಲ್ಲಿ ನಿರ್ಮಾಣಗೊಂಡಿರುವ ಈ ಅರಮನೆಯಲ್ಲಿ ಮೈಸೂರುಪಾಕ್, ಶ್ರೀಗಂಧ, ಗಂಧದ ಎಣ್ಣೆ, ವಿಳ್ಳೆದೆಲೆ ಸೇರಿದಂತೆ ಪ್ರಮುಖ ಪದಾರ್ಥಗಳ ಮಾರಾಟ ಮತ್ತು ಪ್ರದರ್ಶನವಿರುತ್ತದೆ. ವಿಶೇಷವಾಗಿ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಅವರು ಅರಣ್ಯ ಇಲಾಖೆಗೆ ಮನವಿ ಸಲ್ಲಿಸಿ, ಶ್ರೀಗಂಧ ಮತ್ತು ಗಂಧದ ಎಣ್ಣೆಯನ್ನು ಪ್ರದರ್ಶನ ಮತ್ತು ಮಾರಾಟಕ್ಕೆ ಇಡಲು ನಿರ್ಧರಿಸಿದ್ದಾರೆ.

ಚಲನಚಿತ್ರಗಳಿಗೆ ಕಲಾ ನಿರ್ದೇಶನ ಮಾಡುವ ಕಲಾವಿದರಿಂದ ಈ ಅರಮನೆ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಕಳೆದ 20 ದಿನಗಳಿಂದ ಕಲಾವಿದರು ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದಾರೆ. ಮರದ ಅರಮನೆಯ ಛಾಯಾಚಿತ್ರಗಳನ್ನು ಇಟ್ಟುಕೊಂಡು ನಿರ್ಮಾಣ ಭರದಿಂದ ಸಾಗಿದ್ದು, ಅರಮನೆ ನಿರ್ಮಾಣ ಮತ್ತು ಅದರೊಳಗೆ ಇಡುವ ವಸ್ತುಗಳು ಸೇರಿದಂತೆ ಕೋಟಿ ರೂ. ವೆಚ್ಚದಲ್ಲಿ ಆಕರ್ಷಕ ಅರಮನೆ ರೂಪಿಸಲಾಗುತ್ತಿದೆ.

ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ ಶುಕ್ರವಾರ ಭೇಟಿ ನೀಡಿದ ಇತಿಹಾಸ ತಜ್ಞ ಪ್ರೊ.ನಂಜರಾಜ ಅರಸ್ ಅವರು ಮರದ ಅರಮನೆ ಕಾಮಗಾರಿ ಪರಿಶೀಲಿಸಿ, ಪ್ರಾಧಿಕಾರ ಅಧ್ಯಕ್ಷರ ಕಾರ್ಯವನ್ನು ಶ್ಲಾಘಿಸಿ, ಮೈಸೂರಿನ ಪರಂಪರೆಯನ್ನು ಉಳಿಸಬೇಕೆಂದು ಕೇವಲ ಬಾಯಿ ಮಾತಿನಲ್ಲಿ ಹೇಳುತ್ತಾರೆ. ಆದರೆ, ಅಯೂಬ್ ಖಾನ್ ಅದನ್ನು ಮಾಡುತ್ತಿದ್ದಾರೆ. ಮೈಸೂರಿನ ಪರಂಪರೆ, ಸಂಸ್ಕೃತಿಯನ್ನು ಸಾರುವ ಕೆಲಸ ಮಾಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಈ ವೇಳೆ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಪ್ರೊ.ನಂಜರಾಜ ಅರಸ್ ಅವರಿಂದ ಮರದ ಅರಮನೆ ಹೇಗೆ ನಿರ್ಮಾಣವಾಯಿತು. ಯಾರು ನಿರ್ಮಿಸಿದ್ದರೂ ಹಾಗೂ ತಾವು ನಿರ್ಮಾಣ ಮಾಡುತ್ತಿರುವ ಪ್ರತಿ ರೂಪದ ಬಗ್ಗೆ ಸಲಹೆ ಪಡೆದುಕೊಂಡರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ವಿಮಾನ ನಿಲ್ದಾಣದಲ್ಲಿ ಗದ್ದಲ–ಗಡಿಬಿಡಿ; ಹೈಡ್ರಾಮಾ

ಕಾಂಗ್ರೆಸ್ಸಿಗರಲ್ಲೇ ಕಿತ್ತಾಟ–ಕಚ್ಚಾಟ; ನೂಕುನುಗ್ಗಲಲ್ಲಿ ಮಹಿಳೆಯರು ಹೈರಾಣ; ಏರ್‌ಪೋರ್ಟ್‌ನಲ್ಲಿ ಜನಜಾತ್ರೆ; ನಾನು ಸಿದ್ದರಾಮಯ್ಯ ಪರ







ಮೈಸೂರು, ಸೆ.27(ಬಿಎಲ್‌ಯು)– ಕಾಂಗ್ರೆಸ್ ಕಾರ್ಯಕರ್ತರಲ್ಲೇ ಕಚ್ಚಾಟ..., ಪೊಲೀಸರ ವಿರುದ್ಧವೇ ಸಿಡಿದೆದ್ದ ಕೈ ನಾಯಕರು..., ನಿಮ್ಮೊಂದಿಗೆ ನಾವಿದ್ದೇವೆ..., ನಾವು ನಿಮ್ಮೊಂದಿಗೆ..., ಸಿದ್ದರಾಮಯ್ಯ ಹೋರಾಟಕ್ಕೆ ನೈತಿಕ ಬೆಂಬಲ..., ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಹೈರಾಣ..., ಜಾನಪದ ಕಲಾ ತಂಡಗೊಂದಿಗೆ ಸಿದ್ದರಾಮಯ್ಯಗೆ ಸ್ವಾಗತ..., ತಮ್ಮ ವಿರುದ್ಧದ ಎಲ್ಲಾ ಆರೋಪಗಳಿಗೆ ಇತ್ತ ಹೋರಾಟ ಘೋಷಿಸಿದ ಸಿದ್ದರಾಮಯ್ಯ..., ಏರ್‌ಪೋರ್ಟ್‌ನಲ್ಲಿ ಜನ ಜಾತ್ರೆ...

ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ ವೇಳೆ ನಡೆದ ಭಾರೀ ಹೈಡ್ರಾಮಾವಿದು. ಕ್ಷಣ ಕ್ಷಣಕ್ಕೂ ಗದ್ದಲ–ಗಡಿಬಿಡಿ, ಏನು ನಡೆಯುತ್ತಿದೆ ಎಂಬ ಗೊಂದಲವೋ ಗೊಂದಲ.

ಕಾಂಗ್ರೆಸ್ಸಿಗರಲ್ಲೇ ಕಚ್ಚಾಟ– ಸಿದ್ದರಾಮಯ್ಯ ಸ್ವಾಗತಿಸಲು ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ವಿಮಾನ ನಿಲ್ದಾಣದ ಪ್ರವೇಶ ದ್ವಾರದಲ್ಲಿ ನಿಂತಿದ್ದರು. ಆ ವೇಳೆ ಅಲ್ಲಿಗೆ ಬಂದ ಕಾಂಗ್ರೆಸ್ ಮುಖಂಡ ಅಶೋಕ್, ಇವರನ್ನೆಲ್ಲಾ ಇಲ್ಲಿಂದ ಹೊರಗೆ ಕಳುಹಿಸಿ ಎಂದು ಪೊಲೀಸರಿಗೆ ಸಲಹೆ ನೀಡಿದರು.

ಇದರಿಂದ ಕೋಪೋದ್ರಿಕ್ತರಾದ ಕೆಲ ಮುಖಂಡರು ಹಾಗೂ ಕಾರ್ಯಕರ್ತರು, ಆತನ ಮೇಲೆ ಮುಗಿ ಬಿದ್ದರು. ನಾವೆಲ್ಲಾ ಕಷ್ಟಪಟ್ಟು ಜನರನ್ನು ಸೇರಿಸಿದ್ದೇವೆ, ನಮ್ಮನ್ನೇಕೆ ಇಲ್ಲಿಂದ ಕಳುಹಿಸಲು ಪೊಲೀಸರಿಗೆ ಹೇಳುತ್ತೀಯಾ ಎಂದು ಹರಿಹಾಯ್ದರು. ಮಾತಿನ ಚಕಮಕಿಗಿಳಿದಾಗ ಪರಿಸ್ಥಿತಿ ಕೈ ಕೈ ಮಿಲಾಯಿಸುವ ಹಂತ ತಲುಪಿತು. ತರುವಾಯ ಮಧ್ಯ ಪ್ರವೇಶಿಸಿದ ಪೊಲೀಸರು ಹಲ್ಲೆಗೆ ಮುಂದಾಗಿದ್ದವರನ್ನು ದೂರ ಸರಿಸಿದರು.

ಪೊಲೀಸರ ವಿರುದ್ಧವೇ ಸಿಡಿಮಿಡಿ– ಗಲಾಟೆ ಬಿಡಿಸಿ ಪರಿಸ್ಥಿತಿ ತಿಳಿಗೊಳಿಸಲು ಬಂದ ಪೊಲೀಸರ ವಿರುದ್ಧವೇ ಕಾರ್ಯಕರ್ತರು ತಿರುಗಿಬಿದ್ದರು. ಪೊಲೀಸರನ್ನೆ ತಳ್ಳಿದಾಗ ಖಾಕಿ ಪಡೆ ಆಕ್ರೋಶಗೊಂಡಿತು. ಸ್ಥಳದಲ್ಲಿ ಜಮಾಯಿಸಿದ ಮತ್ತಷ್ಟು ಪೊಲೀಸ್ ಸಿಬ್ಬಂದಿ ಎಲ್ಲಾ ಕಾರ್ಯಕರ್ತರನ್ನು ಪ್ರವೇಶ ದ್ವಾರದಿಂದ ಹೊರಗೆ ದಬ್ಬಿದರು. ಈ ವೇಳೆ ಕೆಲವು ಕಾರ್ಯಕರ್ತರು ಕೆಳಗೆ ಬಿದ್ದರು.

ನಾನು ಸಿದ್ದರಾಮಯ್ಯ ಪರ– ಮುಡಾ ಹಗರಣದಲ್ಲಿ ಸಿಲುಕಿರುವ ಸಿದ್ದರಾಮಯ್ಯ ಬೆನ್ನಿಗೆ ಅವರ ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ನಿಂತರು. ನಿಮ್ಮೊಂದಿಗೆ ನಾವಿದ್ದೇವೆ, ನಾವು ನಿಮ್ಮೊಂದಿಗೆ ಎಂಬ ಘೋಷಣಾ ಫಲಕ ಹಿಡಿದು ಸಿದ್ದರಾಮಯ್ಯಗೆ ಜೈಕಾರ ಹಾಕುತ್ತಲೇ ಇದ್ದರು. ಕೆಲವರು ತಮ್ಮ ಕಾರಿನ ಹಿಂಭಾಗದ ಗಾಜಿನ ಮೇಲೆ ನಾನು ಸಿದ್ದರಾಮಯ್ಯ ಪರ ಎಂದು ಸಿಕ್ಕರ್‌ಗಳನ್ನು ಅಂಟಿಸಿಕೊಂಡಿದ್ದರು.

ಸಿದ್ದರಾಮಯ್ಯಗೆ ನೈತಿಕ ಬೆಂಬಲ– ತಮ್ಮ 40 ವರ್ಷದ ರಾಜಕೀಯ ಜೀವನದಲ್ಲಿ ಎಫ್‌ಐಆರ್ ದಾಖಲಾಗಿ ಸಂಕಷ್ಟಕ್ಕೆ ಒಳಗಾಗಿರುವ ಸಿದ್ದರಾಮಯ್ಯಗೆ ನೂರಾರು ಬೆಂಬಲಿಗರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ನೈತಿಕ ಬೆಂಬಲ ಸೂಚಿಸಿದರು. ಸಿದ್ದರಾಮಯ್ಯ ಅವರ ಹೋರಾಟಕ್ಕೆ ನಾವು ಜೊತೆಯಾಗಿರುತ್ತೇವೆ ಎಂದು ಘೋಷಿಸಿದರು.

ಮಹಿಳೆಯರು ಹೈರಾಣು– ಸಿದ್ದರಾಮಯ್ಯ ವಿಮಾನ ನಿಲ್ದಾಣಕ್ಕೆ ಆಗಮಿಸಿದಾಗ ನೂರಾರು ಅಭಿಮಾನಿಗಳು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಜೈಕಾರದ ಘೋಷಣೆಗಳನ್ನು ಕೂಗಿದರು. ನಾವು ನಿಮ್ಮೊಂದಿಗಿದ್ದೇವೆ ಎಂದು ಕೂಗಿ ಕೂಗಿ ಹೇಳಿದರು.

ಕಾರಿನ ಫುಟ್‌ಬೋರ್ಡ್‌ನಲ್ಲಿ ನಿಂತು ಸಿದ್ದರಾಮಯ್ಯ ಕೈ ಬೀಸುತ್ತಾ ಸಾಗಿದಾಗ ಅವರ ಬಳಿ ಹೋಗಲು ನೂರಾರು ಮಂದಿ ಮುಗಿಬಿದ್ದರು. ಆದರೆ ಗನ್ ವ್ಯಾನ್ ಹಾಗೂ ಪೊಲೀಸರು ಸಿದ್ದರಾಮಯ್ಯ ಬಳಿ ಹೋಗಲು ಬಿಡದೆ ದಬ್ಬಿದಾಗ ಹಲವರು ಕೆಳಗೆ ಬಿದ್ದರು.

ಅದರಲ್ಲೂ ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಕೆಳಗೆ ಬಿದ್ದರು. ಆ ವೇಳೆ ಕೆಲವರು ಮಹಿಳೆಯರನ್ನೇ ತುಳಿದುಕೊಂಡು ಮುಂದೆ ಸಾಗಿದರು. ಈ ಸಂದರ್ಭದಲ್ಲಿ ಮಹಿಳೆಯೊಬ್ಬರು ನಿತ್ರಾಣರಾದರು. ಅವರಿಗೆ ನೀರು ಕುಡಿಸಿ ಸಮಾಧಾನ ಮಾಡಲಾಯಿತು.

ಅದ್ದೂರಿ ಸ್ವಾಗತ– ಸಿದ್ದರಾಮಯ್ಯ ಕಾರಿನಲ್ಲಿ ಸಾಗುವ ವೇಳೆ ಜಾನಪದ ಕಲಾ ತಂಡಗಳೊಂದಿಗೆ ಅದ್ದೂರಿ ಸ್ವಾಗತ ಕೋರಲಾಯಿತು. ನಗಾರಿ, ಡೊಳ್ಳು ಕುಣಿತ ಸೇರಿದಂತೆ ಇತರೆ ಜಾನಪದ ಕಲಾ ತಂಡಗಳು ಸಿದ್ದರಾಮಯ್ಯ ಅವರನ್ನು ಸ್ವಾಗತಿಸಿದವು.

ಹೋರಾಟದ ಘೋಷಣೆ– ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ವಿರುದ್ಧ ಅತ್ತ ಲೋಕಾಯುಕ್ತ ಕಚೇರಿಯಲ್ಲಿ ಎಫ್‌ಐಆರ್ ದಾಖಲಿಸಲು ಸಿದ್ಧತೆ ನಡೆಯುತ್ತಿತ್ತು ಇತ್ತ ವಿಮಾನ ನಿಲ್ದಾಣದಲ್ಲಿ ಇದಕ್ಕೆಲ್ಲಾ ನಾನು ಬಗ್ಗುವುದಿಲ್ಲ, ಜಗ್ಗುವುದಿಲ್ಲ, ರಾಜಕೀಯ ಹಾಗೂ ಕಾನೂನಾತ್ಮಕವಾಗಿ ಹೋರಾಟ ಮಾಡುತ್ತೇನೆ ಎಂದು ಸಿದ್ದರಾಮಯ್ಯ ಘೋಷಣೆ ಮಾಡಿದರು.

ಏರ್‌ಪೋರ್ಟ್‌ನಲ್ಲಿ ಜನ ಜಾತ್ರೆ– ಯಾರೇ ರಾಜಕಾರಣಿ ಬಂದರೂ ಏರ್‌ಪೋರ್ಟ್ ಒಳಗೆ ಸೀಮಿತ ಪ್ರವೇಶವಿತ್ತು. ವಿಮಾನ ನಿಲ್ದಾಣದ ಒಳಗೆ ಹೋಗುವ ಪ್ರತಿಯೊಂದು ವಾಹನದ ಸಂಖ್ಯೆ ನಮೂದಿಸಿ ಒಳಗೆ ಬಿಡಲಾಗುತ್ತಿತ್ತು ಆದರೆ ಇಂದು ಪೊಲೀಸರು ಈ ನಿಯಮವನ್ನು ಗಾಳಿಗೆ ತೂರಿದ್ದರು. ಸಾವಿರ ಸಾವಿರ ಸಂಖ್ಯೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸೇರಿದ್ದು ಏರ್‌ಪೋರ್ಟ್‌ನಲ್ಲಿ ಜನ ಜಾತ್ರೆಯೇ ನೆರೆದಿತ್ತು.

ಮುಡಾ ಅಧ್ಯಕ್ಷ ಮರೀಗೌಡರ ಅಟ್ಟಾಡಿಸಿದ ಸ್ವಪಕ್ಷೀಯರು!

ಸಿದ್ದರಾಮಯ್ಯರ ಈ ಪರಿಸ್ಥಿತಿಗೆ ನೀವೇ ಕಾರಣ; ಘೇರಾವ್ ಮಾಡಿ ಆಕ್ರೋಶ



ಮೈಸೂರು, ಸೆ.27(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಿಗರು ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಮುಡಾ ಅಧ್ಯಕ್ಷ ಮರೀಗೌಡರ ಅಟ್ಟಾಡಿಸಿದ ಘಟನೆ ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ನಡೆಯಿತು.

ಸಿದ್ದರಾಮಯ್ಯ ಅವರನ್ನು ಸ್ವಾಗತಿಸಲು ಮರೀಗೌಡರು ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದರು. ಪ್ರವೇಶ ದ್ವಾರದಲ್ಲಿ ಬೆಂಬಲಿಗರೊಡನೆ ಮಾತನಾಡುತ್ತಾ ನಿಂತಿದ್ದ ಮರೀಗೌಡರನ್ನು ಸ್ವಪಕ್ಷಿಯರೇ ದಿಢೀರ್ ಸುತ್ತುವರೆದು, ಸಿದ್ದರಾಮಯ್ಯ ಮುಡಾ ಹಗರಣದ ಸುಳಿಗೆ ಸಿಲುಕಿ, ಅವರ ವಿರುದ್ಧ ಎಫ್‌ಐಆರ್ ದಾಖಲಾಗುವ ಇವತ್ತಿನ ಈ ಪರಿಸ್ಥಿತಿಗೆ ನೀವೇ ಕಾರಣ ಎಂದು ತರಾಟೆಗೆ ತೆಗೆದುಕೊಂಡರು. ನಿಮಗೆ ಅಧಿಕಾರ ಕೊಟ್ಟ ಸಿದ್ದರಾಮಯ್ಯ ವಿರುದ್ಧ ಪಿತೂರಿ ನಡೆಸಿರುವ ನೀವು ಇಂದೇ ರಾಜೀನಾಮೆ ನೀಡಬೇಕು ಎಂದು ಘೇರಾವ್ ಮಾಡಿ ಧಿಕ್ಕಾರದ ಘೋಷಣೆಗಳನ್ನು ಕೂಗಿದರು.

ಏಕಾಏಕಿ ತಮ್ಮನ್ನು ಸುತ್ತುವರೆದು ಆಕ್ರೋಶ ವ್ಯಕ್ತಪಡಿಸಿದ ಸ್ವಪಕ್ಷಿಯರ ವರ್ತನೆಯಿಂದ ಮರೀಗೌಡ ದಿಗ್ಭ್ರಾಂತರಾದರು. ಅವರ ವಿರುದ್ಧದ ಆಕ್ರೋಶ ಗಂಭೀರವಾಗುತ್ತಿದ್ದಂತೆ ಪೊಲೀಸರು ಮರೀಗೌಡರ ರಕ್ಷಣೆಗೆ ಮುಂದಾದರು.

ಮರೀಗೌಡರನ್ನು ಸುತ್ತುವರೆದ ಪೊಲೀಸರು ವಿಮಾನ ನಿಲ್ದಾಣದ ಪ್ರವೇಶ ದ್ವಾರದಿಂದ ಹೊರಗೆ ಕರೆ ತಂದರು. ಈ ಮೂಲಕ ಮರೀಗೌಡರ ಮೇಲೆ ಹಲ್ಲೆಗೂ ಮುಂದಾದ ಕಾರ್ಯಕರ್ತರ ಪ್ರಯತ್ನವನ್ನು ತಡೆದರು.

ಅದೇ ಸಮಯಕ್ಕೆ ಏರ್‌ಪೋರ್ಟ್ ಆವರಣದ ರಸ್ತೆಯಲ್ಲಿ ಹೋಗುತ್ತಿದ್ದ ಕಾರೊಂದನ್ನು ತಡೆದ ಪೊಲೀಸರು ಮರೀಗೌಡರನ್ನು ಅದರಲ್ಲಿ ಕೂರಿಸಿದರು. ಆದರೆ ಕಾಂಗ್ರೆಸ್ ಕಾರ್ಯಕರ್ತರು ಕಾರು ತಡೆದು, ಬಾನೆಟ್‌ಗೆ ಗುದ್ದಿ ಆಕ್ರೋಶ ವ್ಯಕ್ತಪಡಿಸಿದರು.

ಮರೀಗೌಡರನ್ನು ಕಾರಿನಿಂದ ಹೊರಗೆ ಎಳೆದುಕೊಳ್ಳಲು ಪ್ರಯತ್ನಿಸಿದರು. ತರುವಾಯ ಪೊಲೀಸರು ಕಾರು ಮುಂದೆ ಸಾಗಲು ಅನುವು ಮಾಡಿಕೊಟ್ಟರು. ನಂತರ ಮರಿಗೌಡರಿದ್ದ ಕಾರು ವೇಗವಾಗಿ ವಿಮಾನ ನಿಲ್ದಾಣದ ಆವರಣದಿಂದ ಹೊರಗೆ ಹೋಯಿತು. ಪೊಲೀಸರ ಸಮಯ ಪ್ರಜ್ಞೆಯಿಂದ ಮರೀಗೌಡರ ಮೇಲೆ ನಡೆಯಬಹುದಾಗಿದ್ದ ಹಲ್ಲೆ ಪ್ರಯತ್ನ ವಿಫಲವಾಯಿತು. ಇದಾದ ಸ್ವಲ್ಪ ಹೊತ್ತಿನಲ್ಲಿ ಸಿದ್ದರಾಮಯ್ಯ ಆಗಮಿಸಿದರು. ಪರಿಸ್ಥಿತಿ ವಿಕೋಪಕ್ಕೆ ಹೋಗಬಹುದೆಂದು ಮರಿಗೌಡ, ಸಿದ್ದರಾಮಯ್ಯ ಭಾಗಿಯಾಗಿದ್ದ ಯಾವುದೇ ಕಾರ್ಯಕ್ರಮಕ್ಕೂ ಆಗಮಿಸಲಿಲ್ಲ.

ದರ್ಬಾರ್ ಹಾಲ್‌ನಲ್ಲಿ 'ರತ್ನಖಚಿತ ಸಿಂಹಾಸನ'; ಕನ್ನಡಿತೊಟ್ಟಿಯಲ್ಲಿ 'ಬೆಳ್ಳಿ ಭದ್ರಾಸನ' ಜೋಡಣೆ

ವಿವಿಧ ಪೂಜಾ ಕೈಂಕರ್ಯ ನೆರವೇರಿದ ಬಳಿಕ ಬಿಗಿ ಭದ್ರತೆಯಲ್ಲಿ ಸ್ಟ್ರಾಂಗ್ ರೂಮ್ ತೆರೆದು ಬಿಡಿಭಾಗ ಜೋಡಣೆಗೆ ರವಾನೆ



ದರ್ಬಾರ್ ಹಾಲ್‌ನಲ್ಲಿ ಜೋಡಣೆ ಮಾಡಿರುವ ರತ್ನಖಚಿತ ಸಿಂಹಾಸನ.

ಮೈಸೂರು, ಸೆ.27(ಎಂಟಿವೈ)– ದಸರಾ ಮಹೋತ್ಸವ ವೇಳೆ ಅರಮನೆಯಲ್ಲಿ ರಾಜವಂಶಸ್ಥರು ನಡೆಸುವ ಪ್ರಮುಖ ಧಾರ್ಮಿಕ ಆಚರಣೆಯಾದ ಖಾಸಗಿ ದರ್ಬಾರ್‌ಗಾಗಿ ಶುಕ್ರವಾರ ಬಿಗಿ ಭದ್ರತೆಯಲ್ಲಿ ಅರಮನೆಯ ದರ್ಬಾರ್ ಹಾಲ್‌ನಲ್ಲಿ ಚಿನ್ನದ ಸಿಂಹಾಸನ ಹಾಗೂ ಕನ್ನಡಿ ತೊಟ್ಟಿಯಲ್ಲಿ ಬೆಳ್ಳಿಯ ಭದ್ರಾಸನ ಜೋಡಣೆ ಮಾಡಲಾಯಿತು.

ದಸರಾ ಮಹೋತ್ಸವದ ವೇಳೆ ಅರಮನೆಯಲ್ಲಿ ರಾಜವಂಶಸ್ಥರು ಅ.3ರಿಂದ 12ರವರೆಗೆ ಖಾಸಗಿ ದರ್ಬಾರ್ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯದಲ್ಲಿ ಭಾಗಿಯಾಗಲಿದ್ದು, ಅದಕ್ಕಾಗಿ ಅರಮನೆ ಒಳಾಂಗಣ ಸಜ್ಜಾಗುತ್ತಿದೆ. ಖಾಸಗಿ ದರ್ಬಾರ್ ರಾಜವಂಶಸ್ಥನದ ಪ್ರಮುಖ ಧಾರ್ಮಿಕ ಕಾರ್ಯವಾಗಿದ್ದು, ಅದಕ್ಕಾಗಿ ದರ್ಬಾರ್ ಹಾಲ್‌ನಲ್ಲಿ ರತ್ನ ಖಚಿತ ಸಿಂಹಾಸನ, ಕನ್ನಡಿತೊಟ್ಟಿಯಲ್ಲಿ ಬೆಳ್ಳಿಯ ಭದ್ರಾಸನ ಜೋಡಣೆ ಮಾಡಲಾಯಿತು. ಆ ಮೂಲಕ ನವರಾತ್ರಿ ಹಬ್ಬದ ಸಂಭ್ರಮಕ್ಕೆ ಅರಮನೆಯಲ್ಲಿ ಮೆರಗು ನೀಡಿದಂತಾಗಿದೆ.

ಪೂಜಾ ಕಾರ್ಯ: ಸಿಂಹಾಸನ ಹಾಗೂ ಭದ್ರಾಸನ ಜೋಡಣೆ ಹಿನ್ನೆಲೆಯಲ್ಲಿ ಅರಮನೆಯಲ್ಲಿ ಇಂದು ಮುಂಜಾನೆಯಿಂದಲೇ ವಿವಿಧ ಪೂಜಾ ಕೈಂಕರ್ಯ ಜರುಗಿದವು. ಅರಮನೆ ಪುರೋಹಿತರು ಬೆಳಗ್ಗೆ 7.35ರಿಂದ ಅರಮನೆಯಲ್ಲಿ ನವಗ್ರಹ ಹೋಮ, ಗಣಪತಿ ಹೋಮ, ಶ್ರೀ ಚಾಮುಂಡಿ ಪೂಜೆ ನೆರವೇರಿಸಿದರು. ಅಂತಿಮವಾಗಿ ಶಾಂತಿ ಪೂಜೆಯೂ ಆಯಿತು. ಅರಮನೆ ಅಂಗಳದಲ್ಲಿ ವೇದ ಘೋಷಗಳು ಮೊಳಗಿದವು. ಅಲ್ಲದೆ ಪಟ್ಟದ ಆನೆ, ಕುದುರೆ ಹಾಗೂ ಹಸುವನ್ನು ಬರಮಾಡಿಕೊಳ್ಳಲಾಯಿತು.

ಸ್ಟ್ರಾಂಗ್ ರೂಮ್‌ನಿಂದ: ಶಾಂತಿ ಪೂಜೆ ಬಳಿಕ ಬೆಳಗ್ಗೆ 9.55ಕ್ಕೆ ಅರಮನೆಯ ನೆಲ ಮಾಳಿಗೆಯಲ್ಲಿರುವ 'ಸ್ಟ್ರಾಂಗ್ ರೂಮ್' ಬಾಗಿಲು ತೆರೆಯಲಾಯಿತು. ಬೆಳಗ್ಗೆ 10.25ರೊಳಗೆ ಸಿಂಹಾಸನದ ಜೋಡಣಾ ಕಾರ್ಯ ಆರಂಭಿಸಬೇಕಾದ ಹಿನ್ನೆಲೆಯಲ್ಲಿ ಸಿಂಹಾಸನ ಹಾಗೂ ಭದ್ರಾಸನದ ಬಿಡಿ ಭಾಗಗಳನ್ನು ಪ್ರತ್ಯೇಕಿಸಲಾಯಿತು. ಶಸ್ತ್ರಸಜ್ಜಿತ ಪೊಲೀಸರ ಕಣ್ಗಾವಲಿನಲ್ಲಿ ಒಂದೊಂದೇ ಬಿಡಿ ಭಾಗವನ್ನು ದರ್ಬಾರ್ ಹಾಲ್‌ಗೆ ತರಲಾಯಿತು. ಸುಮಾರು 8 ಬಿಡಿ ಭಾಗಗಳಾಗಿದ್ದ ಸಿಂಹಾಸನವನ್ನು ಜೋಡಿಸಿ, ಪರದೆ ಬಿಡಲಾಯಿತು. ಬಳಿಕ ದರ್ಬಾರ್ ಹಾಲ್ ಸಮೀಪದ ಕನ್ನಡಿ ತೊಟ್ಟಿಯಲ್ಲಿ ಭದ್ರಾಸನವನ್ನು ಜೋಡಿಸಲಾಯಿತು.

ಸಿಸಿ ಕ್ಯಾಮರಾಗೆ ಪರದೆ: ಸಿಂಹಾಸನ ಜೋಡಣೆ ಕಾರ್ಯದ ವೇಳೆ ಸ್ಟ್ರಾಂಗ್ ರೂಮ್‌ನಿಂದ ದರ್ಬಾರ್ ಹಾಲ್ ಹಾಗೂ ಕನ್ನಡಿ ತೊಟ್ಟಿಗೆ ಬರುವ ಮಾರ್ಗದಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾಗಳನ್ನು ಪರದೆಯಿಂದ ಮುಚ್ಚಲಾಗಿತ್ತು. ಸಿಂಹಾಸನ ಜೋಡಣೆಯಲ್ಲಿ ಪಾಲ್ಗೊಂಡಿದ್ದ ಅರಮನೆಯ 15ಕ್ಕೂ ಮಂದಿ ಹೆಚ್ಚು ಸಿಬ್ಬಂದಿಯ ಮೊಬೈಲ್ ಫೋನ್‌ಗಳನ್ನು ಲಾಕರ್‌ನಲ್ಲಿಡಲಾಗಿತ್ತು. ಮಧ್ಯಾಹ್ನ 12.30ರೊಳಗೆ ಸಿಂಹಾಸನ ಜೋಡಣೆ ಪೂರ್ಣಗೊಂಡಿತು.

ಕಟ್ಟುನಿಟ್ಟಿನ ಕ್ರಮ: ಸಿಂಹಾಸನ ಜೋಡಣಾ ಕಾರ್ಯದ ಹಿನ್ನೆಲೆಯಲ್ಲಿ ಇಂದು ಬೆಳಗಿನಿಂದ ಮಧ್ಯಾಹ್ನ 1 ಗಂಟೆವರೆಗೆ ಅರಮನೆಗೆ ಪ್ರವಾಸಿಗರ ಪ್ರವೇಶ ನಿರ್ಬಂಧಿಸಲಾಗಿತ್ತು.

ಅ.3ರಂದು 'ಸಿಂಹ' ಜೋಡಣೆ: ನವರಾತ್ರಿ ಮೊದಲ ದಿನವಾದ ಅ.3ರಂದು ಮುಂಜಾನೆ 5.45ರಿಂದ 6.10ರೊಳಗೆ ದರ್ಬಾರ್ ಹಾಲ್‌ನಲ್ಲಿ ಜೋಡಿಸಲಾಗಿರುವ ಸಿಂಹಾಸನಕ್ಕೆ 'ಸಿಂಹ' ಜೋಡಣಾ ಕಾರ್ಯ ನಡೆಯಲಿದೆ. ಆ ಬಳಿಕ ಖಾಸಗಿ ದರ್ಬಾರ್ ಜರುಗಲಿದೆ.

ವಿಸರ್ಜನೆ: ನವರಾತ್ರಿ ಉತ್ಸವ ಮುಗಿದ ನಂತರ ಅ.26ರವರೆಗೂ ಸಿಂಹಾಸನ ಹಾಗೂ ಭದ್ರಾಸನ ಜೋಡಣೆಯಾದ ಸ್ಥಳದಲ್ಲಿಯೇ ಇರಲಿವೆ. ಅ.27ರಂದು ಸಿಂಹಾಸನ ಹಾಗೂ ಭ್ರದಾಸನ ವಿಸರ್ಜನಾ ಕಾರ್ಯ ಜರುಗಲಿದ್ದು, ಅಂದು ಬೆಳಗ್ಗೆ 10.10ರಿಂದ 10.45ರೊಳಗೆ ಅವುಗಳನ್ನು ಬಿಡಿ ಭಾಗಗಳಾಗಿ ವಿಂಗಡಿಸಲಾಗುತ್ತದೆ. ಬಳಿಕ ಬಿಗಿ ಭದ್ರತೆಯಲ್ಲಿ ಸ್ಟ್ರಾಂಗ್ ರೂಮ್‌ಗೆ ಕೊಂಡೊಯ್ದು ಸುರಕ್ಷಿತವಾಗಿಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ಅಂದು ಬೆಳಿಗ್ಗೆ 8ರಿಂದ ಮಧ್ಯಾಹ್ನ 1ಗಂಟೆವರೆಗೆ ಪ್ರವಾಸಿಗರು, ಸಾರ್ವಜನಿಕರಿಗೆ ಅರಮನೆ ಪ್ರವೇಶ ನಿಷೇಧಿಸಲಾಗುತ್ತದೆ.

ರಾಜವಂಶಸ್ಥರ ಸಮ್ಮುಖದಲ್ಲಿ ಜೋಡಣೆ: ಇಂದು ನಡೆದ ಸಿಂಹಾಸನಾ ಜೋಡಣಾ ಕಾರ್ಯಕ್ರಮದಲ್ಲಿ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಹಾಜರಿದ್ದು, ಸಿಂಹಾಸನಾ ಜೋಡಣಾ ಕಾರ್ಯದಲ್ಲಿ ತೊಡಗಿದ್ದ ಸಿಬ್ಬಂದಿಗೆ ಮಾರ್ಗದರ್ಶನ, ಸಲಹೆ ನೀಡಿದರು. ಈ ವೇಳೆ ಅರಮನೆಯ ಕಾರ್ಯದರ್ಶಿ ಎಂ.ಲಕ್ಷ್ಮೀನಾರಾಯಣ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಸಿದ್ದರಾಮಯ್ಯ ಇವತ್ತು ಸಿಎಂ ಆಗಿರ್ತಾರೆ; ನಾಳೆ ಇರಲ್ಲ: ಪಕ್ಷ ಮಾತ್ರ ಮುಂದುವರೆಯುತ್ತದೆ

ಹತ್ತು ಹಲವು ಅರ್ಥಕ್ಕೆ ಎಡೆಮಾಡಿಕೊಟ್ಟ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಯವರ ಈ ಹೇಳಿಕೆ



ಬೆಂಗಳೂರು, ಸೆ.27– ಸಿದ್ದರಾಮಯ್ಯ ವಿರುದ್ಧ ವೈಯಕ್ತಿಕವಾಗಿ ಆರೋಪ ಬಂದರೂ ಬಿಜೆಪಿಯವರು ಕಾಂಗ್ರೆಸ್ ಪಕ್ಷಕ್ಕೆ ಡ್ಯಾಮೇಜ್ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಇವತ್ತು ಮುಖ್ಯ ಮಂತ್ರಿ ಆಗಿರ್ತಾರೆ, ನಾಳೆ ಇರಲ್ಲ, ಪಕ್ಷ ಮಾತ್ರ ಮುಂದುವರಿಯುತ್ತದೆ. ಪಕ್ಷದ ಮುಂದೆ ಯಾರೂ ದೊಡ್ಡವರಲ್ಲ ಎಂಬ ಮಾತಿನ ಮೂಲಕ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಸುಳಿವು ನೀಡಿದ್ದಾರೆಯೇ ಎಂಬ ಅನುಮಾನ ವ್ಯಕ್ತವಾಗುತ್ತಿದೆ.

ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಗೋಧ್ರಾ ಘಟನೆ ನಡೆದಾಗ ಮೋದಿ ರಾಜೀನಾಮೆ ಕೊಟ್ಟರಾ. ಆ ಕಾಲದಲ್ಲಿ ಮೋದಿ, ಅಮಿತ್ ಶಾ ವಿರುದ್ಧ ಸಾಕಷ್ಟು ಕೇಸ್ ದಾಖಲಾಗಿದ್ದವು. ವೈಯಕ್ತಿಕವಾಗಿ ಯಾರನ್ನೂ ಟಾರ್ಗೆಟ್ ಮಾಡಬಾರದು. ಅವರ ಇಮೇಜ್ ಡ್ಯಾಮೇಜ್ ಮಾಡೋಯತ್ನ ಮಾಡಬಾರದು. ಅವರ ಜೊತೆ ಪಕ್ಷಕ್ಕೂ ಡ್ಯಾಮೇಜ್ ಆಗುತ್ತದೆ. ನಿಮ್ಮ ಇಂಟ್ರಸ್ಟ್ ಇರೋದು ಕಾಂಗ್ರೆಸ್ ಪಕ್ಷಕ್ಕೆ ಡ್ಯಾಮೇಜ್ ಮಾಡೋದು, ಸಿದ್ದರಾಮಯ್ಯ ಸಿಎಂ ಆಗಿ ಇವತ್ತು ಇರ್ತಾರೆ, ನಾಳೆ ಇರಲ್ಲ, ಪಕ್ಷ ಮಾತ್ರ ಮುಂದುವರಿಯುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ಪಕ್ಷವನ್ನು ಮುಗಿಸುವ ಹಾಗೂ ಪಕ್ಷದ ಮತಗಳನ್ನು ಕಸಿಯುವ ಕೆಲಸವನ್ನು ಬಿಜೆಪಿಯವರು ಮಾಡುತ್ತಿದ್ದಾರೆ. ಪ್ರತಿ ದಿನ ಮುಡಾ..., ಮುಡಾ... ಅಂತ ಕೇಳ್ತಾನೆ ಇದೀವಿ. ವಿಪಕ್ಷಗಳ ನಾಯಕರು ಸಣ್ಣ ವಿಚಾರವನ್ನು ಮುಂದಿಟ್ಟುಕೊಂಡು ದೊಡ್ಡ ಸಮಸ್ಯೆ ಎಂಬಂತೆ ಇಶ್ಯು ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ಸಿದ್ದರಾಮಯ್ಯ ಮೇಲೆ ಎಫ್‌ಐಆರ್ ದಾಖಲಾದ ಮೇಲೆ ಹೈಕಮಾಂಡ್ ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆಗೆ ನಿಲ್ಲುತ್ತಾ ಅನ್ನೋದು ಹೈಪೊಥಿಟಿಕಲ್ ಪ್ರಶ್ನೆ, ನಾವು ಅವರ ಜೊತೆ ನಿಂತಿದ್ದೇವೆ, ಅವರಿಗೆ ಬೆಂಬಲ ಕೊಟ್ಟಿದ್ದೇವೆ. ಯಾಕೆಂದರೆ ಅವರು ಪಕ್ಷವನ್ನು ಪ್ರತಿನಿಧಿಸುತ್ತಾರೆ. ಅವರು ವೈಯುಕ್ತಿಕ ಅಲ್ಲ. ಪ್ರಧಾನಿ ಮೋದಿ, ದಲಿತ ನಾಯಕ ಹಾಗೂ ದಲಿತ ಫಂಡ್ ಬಗ್ಗೆ ಹರಿಯಾಣದಲ್ಲಿ ಮಾತನಾಡಿದ್ದಕ್ಕೆ ಹರಿಯಾಣದಲ್ಲೇ ಉತ್ತರ ಕೊಡುತ್ತೇವೆ. ಇನ್ನು ಸಿಬಿಐಗೆ ಮುಕ್ತ ತನಿಖೆ ಅವಕಾಶ ವಾಪಸ್ ಪಡೆದಿದ್ದು ಇದೇ ಮೊದಲಲ್ಲ. ದೇವರಾಜ್ ಅರಸು ಕಾಲದಲ್ಲೂ ಹೀಗೆ ಮಾಡಲಾಗಿತ್ತು ಎಂದು ಸಮಜಾಯಿಷಿ ನೀಡಿದರು. ನಾನೇ ಗೃಹ ಸಚಿವನಾಗಿದ್ದಾಗ ವೀರಪ್ಪನ್ ಪ್ರಕರಣ, ನಕಲಿ ಛಾಪಾ ಕಾಗದ ತೆಲಗಿ ಹಾಗೂ ಕೋಲಾರದ ಒಂದು ಪ್ರಕರಣ ಸೇರಿದಂತೆ ಒಟ್ಟು ಮೂರು ಪ್ರಕರಣಗಳನ್ನು ಸಿಬಿಐ ತನಿಖೆಗೆ ಶಿಫಾರಸ್ಸು ಮಾಡಿದೆವು. ಆದರೆ, ಅವರು ತನಿಖೆ ಮಾಡಲಿಲ್ಲ. ವೀರಪ್ಪನ್ ನೂರಾರು ಜನರನ್ನು ಕೊಂದನು. ತೆಲಗಿ ನಕಲಿ ಛಾಪಾ ಕಾಗದದಲ್ಲಿ ಸಾವಿರಾರು ಕೋಟಿ ರೂ. ಸರ್ಕಾರದ ಹಣ ಬಳಸಿಕೊಂಡನು. ಆಗ ಸಿಬಿಐ ಅದನ್ನು ತನಿಖೆ ಮಾಡಲಿಲ್ಲ. ಇನ್ನು ರಾಜಭವನ ಹಾಗೂ ರಾಜ್ಯ ಸರ್ಕಾರದ ನಡುವಿನ ಜಟಾಪಟಿ ಬಗ್ಗೆ ನಾನು ಮಾತನಾಡಲ್ಲ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಹಸಿರು ನಮ್ಮ ಉಸಿರು

ರಿಂಗ್ ರಸ್ತೆಯ ದೀಪಗಳ ಸಮಸ್ಯೆ ತಕ್ಷಣ ಪರಿಹರಿಸಿ

ಅಧಿಕಾರಿಗಳಿಗೆ ಸಿಎಂ ತಾಕೀತು

ಮೈಸೂರು, ಸೆ.27–ಮೈಸೂರು ರಿಂಗ್ ರಸ್ತೆಯಲ್ಲಿನ ಬೀದಿ ದೀಪಗಳ ಸಮಸ್ಯೆಯನ್ನು ತಕ್ಷಣ ಪರಿಹರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ರಿಂಗ್ ರಸ್ತೆಯನ್ನು ಸರಿಯಾದ ರೀತಿಯಲ್ಲಿ ದುರಸ್ತಿ ಪಡಿಸಿ. ಬೀದಿ ದೀಪ ಸಮಸ್ಯೆಯನ್ನು ಕೂಡಲೇ ಪರಿಹರಿಸಿ ಎಂದು ಸೂಚನೆ ನೀಡಿದರಲ್ಲದೆ, ಸರ್ವೀಸ್ ರಸ್ತೆ ಪೂರ್ಣಗೊಳಿಸದ್ದಕ್ಕೆ ಗರಂ ಆದರು. ಈವರೆಗೂ ಸರ್ವೀಸ್ ರಸ್ತೆ ಏಕೆ ಮಾಡಿಲ್ಲ ಎಂದು ಖಾರವಾಗಿ ಪ್ರಶ್ನಿಸಿದರು. ಈ ವೇಳೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಎಕ್ಸಿಕ್ಯೂಟೀವ್ ಎಂಜಿನಿಯರ್, ಸರ್ವೀಸ್ ರಸ್ತೆ ನಿರ್ಮಿಸಲು ಲಿಟಿಗೇಷನ್(ವ್ಯಾಜ್ಯ) ಇದೆ ಎಂದರು. ಇದಕ್ಕೆ ಗರಂ ಆದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಯಾವ ಲಿಟಿಗೇಷನ್ ಕೂಡ ಇಲ್ಲ. ನಾನು ಲೋಕೋಪಯೋಗಿ ಸಚಿವನಾಗಿದ್ದಾಗಲೇ ಎಲ್ಲವನ್ನೂ ಬಗೆ ಹರಿಸಲಾಗಿದೆ. ಮೊದಲು ಕೆಲಸ ಪ್ರಾರಂಭಿಸಿ ಎಂದು ತಾಕೀತು ಮಾಡಿದರು.

ಜಿಲ್ಲೆಯಲ್ಲಿ ಅರೆಬರೆ ಕಾಮಗಾರಿಗಳು, ಕೆರೆಗಳನ್ನು ತುಂಬಿಸುವ ಯೋಜನೆಗಳು, ನೀರಾವರಿ ಯೋಜನೆಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಿ. ನಾಲ್ಕೈದು ದಿನದಲ್ಲಿ ರಸ್ತೆ ಗುಂಡಿಗಳನ್ನು ಮೊದಲು ಸಮರ್ಪಕವಾಗಿ ಮುಚ್ಚಿ, ಮಳೆ ನಿಲ್ಲುತ್ತಿದ್ದಂತೆ ಹೊಸ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬೇಕು. 212 ಮಂದಿ ಯುಜಿಡಿ ಪೌರಕಾರ್ಮಿಕರಿಗೆ ಸಮಾನ ಕೆಲಸ–ಸಮಾನ ವೇತನ ವ್ಯವಸ್ಥೆಯಡಿ ತರುವ ನಿಟ್ಟಿನಲ್ಲಿ ಕ್ರಮ ವಹಿಸೋಣ ಎಂದು ಇದೇ ವೇಳೆ ಸಿಎಂ ಹೇಳಿದರು.



ಸಭೆಯ ಕೊನೆಯಲ್ಲಿ ಅಧಿಕಾರಿಗಳಿಗೆ ಸಿಎಂ ಎಚ್ಚರಿಕೆ

ಜನ ಸಣ್ಣ-ಪುಟ್ಟ ಸಮಸ್ಯೆಗಳಿಗೂ ನನ್ನ ಬಳಿ ಬರದಂತೆ ಅಧಿಕಾರಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸಬೇಕು. ಆಸ್ಪತ್ರೆ, ಹಾಸ್ಟೆಲ್, ಬಾರ್ ಇನ್ನಿತರೆ ಸ್ಥಳಗಳಿಗೆ ದಿಢೀರ್ ಭೇಟಿ ನೀಡಿ, ಪರಿಶೀಲನೆ ನಡೆಸಿ, ಕಾನೂನು ಬಾಹಿರ ಚಟುವಟಿಕೆಗಳಿಗೆ ಬ್ರೇಕ್ ಹಾಕಬೇಕು. ಮೈಸೂರು ನನ್ನ ಜಿಲ್ಲೆ. ಇವು ಉಳಿದ ಜಿಲ್ಲೆಗಳಿಗೆ ಮಾದರಿ ಆಗಬೇಕು. ಈ ಜವಾಬ್ದಾರಿಯನ್ನು ಜಿಲ್ಲಾ ಮಟ್ಟದ ಅಧಿಕಾರಿಗಳು ತೆಗೆದುಕೊಳ್ಳಬೇಕು. ತುಂಬಾ ವರ್ಷಗಳಿಂದ ಬಾಕಿ ಇರುವ ಕಡತಗಳನ್ನು ಇತ್ಯರ್ಥಗೊಳಿಸಬೇಕು. ಕಚೇರಿಗೆ ಬರುವ ರೈತರನ್ನು ಲಘುವಾಗಿ ನೋಡಬಾರದು. ಅಧಿಕಾರಿಗಳು ಕಚೇರಿಯಲ್ಲಿ ಸಿಗಬೇಕು. ವೈದ್ಯರು ಕರ್ತವ್ಯದ ಸ್ಥಳದಲ್ಲಿ ನೆಲೆಸಬೇಕು. ನಿಮ್ಮ ಹಂತದಲ್ಲೇ ಸಮಸ್ಯೆ ಬಗೆಹರಿಸಬೇಕು.

ಮ್ಯೂಸಿಯಂ ಆಗಲಿದೆ ಹಳೇ ಡಿಸಿ ಕಚೇರಿ

ಮೈಸೂರಿನ ಜಿಲ್ಲಾಧಿಕಾರಿಗಳ ಕಚೇರಿ ಕಾರ್ಯ ನಿರ್ವಹಿಸುತ್ತಿದ್ದ ಪಾರಂಪರಿಕ ಕಟ್ಟಡ(ಹಳೇ ಡಿಸಿ ಆಫೀಸ್)ವನ್ನು ಮೈಸೂರಿನ ಚರಿತ್ರೆ ಮತ್ತು ಪರಂಪರೆ ಸಾರುವ ಮ್ಯೂಸಿಯಂ ಆಗಿ ಮಾರ್ಪಡಿಸಿ, ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಸಭೆಯಲ್ಲಿ ಮಾಹಿತಿ ನೀಡಿದರು.


ಎಂಟೂವರೆ ಗಂಟೆ ಸಿಎಂ ಸುದೀರ್ಘ ಸಭೆ; ಬಸವಳಿದ ಅಧಿಕಾರಿಗಳು

ಮುಡಾ ನಿವೇಶನ ಹಂಚಿಕೆ ಹಗರಣ ಆರೋಪದಡಿ ಲೋಕಾಯುಕ್ತದಲ್ಲಿ ತಮ್ಮ ವಿರುದ್ಧ ಎಫ್‌ಐಆರ್ ದಾಖಲಾಗಿದ್ದರೂ ಮುಖ್ಯಮಂತ್ರಿ ಸಿದ್ದರಾಮಯ್ಯನವರು, ಸುದೀರ್ಘ 8 ಗಂಟೆಗೂ ಹೆಚ್ಚು ಕಾಲ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಮಧ್ಯಾಹ್ನ 1ರ ಸುಮಾರಿಗೆ ಸಭೆ ಆರಂಭಿಸಿದ ಅವರು, ಒಂದೊಂದೇ ಇಲಾಖೆಯ ಪ್ರಗತಿ ಪರಿಶೀಲಿಸಿ, ಅಧಿಕಾರಿಗಳಿಂದ ಮಾಹಿತಿ ಪಡೆದರು. ಅಸಮರ್ಪಕ ಮಾಹಿತಿ ನೀಡಿದ ಅಧಿಕಾರಿಗಳ ತರಾಟೆ ತೆಗೆದುಕೊಂಡರು. ಮಧ್ಯಾಹ್ನ 3.15ರಿಂದ 3.45ರವರೆಗೆ ಊಟದ ಬ್ರೇಕ್ ನೀಡಿ, ಸಭೆ ಮುಂದುವರೆಸಿದರು. ಸಂಜೆ 5ಕ್ಕೆ ಮುಗಿಯಬಹುದು, ಸಂಜೆ 6ರವರೆಗೆ ನಡೆಸಬಹುದೆಂಬ ಲೆಕ್ಕಾಚಾರದಲ್ಲಿದ್ದ ಅಧಿಕಾರಿಗಳಿಗೆ ರಾತ್ರಿ 9.40ರವರೆಗೂ ಬೆಂಡೆತ್ತಿದ್ದರು.

ತಡಬಡಾಯಿಸಿದ ಡಿಡಿಪಿಐ

ಸಿಬಿಎಸ್‌ಇ, ಐಸಿಎಸ್‌ಇ ಶಾಲೆಗಳಲ್ಲಿ ಕನ್ನಡ ಕಲಿಸುತ್ತಿದ್ದಾರೆಯೇ ಎಂದು ಸಿಎಂ ಕೇಳಿದ ಪ್ರಶ್ನೆಗೆ ಡಿಡಿಪಿಐ ಜವರೇಗೌಡ, 'ಹೂಂ ಸಾರ್–ಇಲ್ಲ ಸಾರ್' ಎಂದರು. ನಿಮ್ಮ ಮಾತನ್ನು ಖಾಸಗಿ ಶಾಲೆಯವರು ಕೇಳುತ್ತಾರಾ? ಎಂದಾಗ 'ಇಲ್ಲ ಸಾರ್' ಎಂದರು. ಯಾವುದಾದರೂ ಶಾಲೆಗಳಿಗೆ ಭೇಟಿ ನೀಡಿ, ಪರಿಶೀಲಿಸಿದ್ದೀರಾ ಎಂದಿದ್ದಕ್ಕೆ ಉತ್ತರಿಸಲು ತಡಬಡಾಯಿಸಿದರು. ಆಗ ಸಭೆ ನಗೆ ಗಡಲಲ್ಲಿ ತೇಲಿತು. ಕೊನೆಗೆ ಒಂದು ವಾರದಲ್ಲಿ ಎಲ್ಲಾ ಶಾಲೆಗಳಿಗೆ ಭೇಟಿ ನೀಡಿ ವರದಿ ನೀಡಬೇಕು. ಗ್ರೇಸ್ ಮಾರ್ಕ್ಸ್ ಇಲ್ಲದೆ ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಫಲಿತಾಂಶ ತರುವ ದಿಕ್ಕಿನಲ್ಲಿ ಎಲ್ಲಾ ಬಿಇಓಗಳ ಜೊತೆ ಸಭೆ ನಡೆಸಬೇಕು. ಸ್ಪೆಷಲ್ ಕೋಚಿಂಗ್ ಕೊಟ್ಟು ಹಿಂದುಳಿದಿರುವ ಮಕ್ಕಳ ಸಾಮರ್ಥ್ಯವನ್ನು ಹೆಚ್ಚಿಸಬೇಕು. ಸರಣಿ ಪರೀಕ್ಷೆಗಳು ಸೇರಿದಂತೆ ಹಲವು ರೀತಿಯ ಶೈಕ್ಷಣಿಕ ಕಾರ್ಯಕ್ರಮಗಳ ಮೂಲಕ ಫಲಿತಾಂಶದ ಪ್ರಮಾಣ ಹೆಚ್ಚಿಸಬೇಕು ಎಂದು ಸಿಎಂ ಸೂಚಿಸಿದರು.

ಹುಟ್ಟುಹಬ್ಬದ ಅಭಿನಂದನೆ...





ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಚೇತನ್ ವಿಷಕಂಠೇಗೌಡ ಅವರನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್‌ಗೌಡ ಹಾಗೂ ಹುಣಸೂರು ಶಾಸಕ ಜಿ.ಡಿ. ಹರೀಶ್‌ಗೌಡ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಪ್ರಸನ್ನ, ಅನಿಲ್‌ಕುಮಾರ್, ಶ್ರೇಯಸ್‌ಗೌಡ, ರಮೇಶ್, ವಿಕ್ರಾಂತ್ ಇತರರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಬೇಜವಬ್ದಾರಿ ಅಧಿಕಾರಿಗಳ ನಮ್ಮ ಸರ್ಕಾರ ಸಹಿಸಲ್ಲ

ಈ ವರ್ಷ ವಾಡಿಕೆಗಿಂತ ಹೆಚ್ಚು ಮಳೆ ಆಗಿದ್ದು, ಎಲ್ಲಾ ಜಲಾಶಯಗಳೂ ತುಂಬಿವೆ. ಹೀಗಾಗಿ ಅದ್ದೂರಿಯಾಗಿ, ಅರ್ಥಪೂರ್ಣವಾಗಿ ದಸರಾ ಆಚರಿಸಲಾಗುತ್ತಿದೆ. ವೈಭವ ಮತ್ತು ಸಂಭ್ರಮಕ್ಕೆ ಯಾವುದೇ ಕೊರತೆ ಆಗಬಾರದು. ನಮ್ಮ ಪರಂಪರೆ, ಇತಿಹಾಸದ ವೈಭವ ಮೆರೆಸಬೇಕು. ಅದು ಜನರಿಗೆ ತಿಳಿಯುವಂತಿರಬೇಕು. ದಸರಾ ಜನರ ಉತ್ಸವ, ಇದು ಸರ್ಕಾರದ ಉತ್ಸವ ಅಲ್ಲ. ಆದರೆ ಇದರ ಹೊಣೆ ಜಿಲ್ಲಾಡಳಿತದ್ದು. ದಸರಾ ನೆಪದಲ್ಲಿ ಅಭಿವೃದ್ಧಿ ಕಾರ್ಯಗಳು ಕುಂಠಿತ ಆಗಬಾರದು. ದಸರಾ ಜವಾಬ್ದಾರಿ ಇದ್ದವರನ್ನು ಹೊರತುಪಡಿಸಿ ಉಳಿದವರು ದಸರಾ ನೆಪದಲ್ಲಿ ಕಳ್ಳಾಟ ಆಡಬಾರದು ಎಂದು ಖಡಕ್ ಸೂಚನೆ ನೀಡಿದರು.

ಕಾನೂನು–ಸುವ್ಯವಸ್ಥೆ ಮುಖ್ಯ: ಕಾನೂನು ಸುವ್ಯವಸ್ಥೆ ಸರಿ ಇಲ್ಲದಿದ್ದರೆ ರಾಜ್ಯದ ಅಭಿವೃದ್ಧಿ ಮತ್ತು ಆರ್ಥಿಕತೆಯ ಪ್ರಗತಿ ಸಾಧ್ಯವಿಲ್ಲ. ಪೊಲೀಸ್ ಇಲಾಖೆಯ ಬೇಜವಾಬ್ದಾರಿಯಿಂದ ಅಪರಾಧಗಳು ನಡೆಯುತ್ತವೆ. ರಾಜ್ಯದ ಬಂಡವಾಳ ಹೂಡಿಕೆ ಹಾಗೂ ಕಾನೂನು–ಸುವ್ಯವಸ್ಥೆಗೆ ನೇರ ಸಂಬಂಧವಿದೆ. ಈ ಬಗ್ಗೆ ಪೊಲೀಸ್ ಅಧಿಕಾರಿಗಳು ಕಟ್ಟೆಚ್ಚರ ವಹಿಸಬೇಕು. ಆರೋಗ್ಯ, ಶಿಕ್ಷಣ, ಆಹಾರ, ನೀರು, ವಿದ್ಯುತ್, ರಸ್ತೆ ಸುರಕ್ಷತೆ ನನ್ನ ಪ್ರಥಮ ಆದ್ಯತೆ. ಅಧಿಕಾರಿಗಳಿಗೆ ಯಾವುದೇ ಕಾರಣಕ್ಕೂ ಜಾತಿ ಸೋಂಕು ಇರಬಾರದು. ಸಂವಿಧಾನ ಮತ್ತು ಜಾತ್ಯತೀತವಾಗಿ ಜನರ ಸೇವೆ ಮಾಡಬೇಕು ಎಂದು ಸಲಹೆ ನೀಡಿದರು.

ಗ್ಯಾರಂಟಿ ತಲುಪಿಸಿ: ನಾವು ಜಾರಿ ಮಾಡಿರುವ ಐದು ಗ್ಯಾರಂಟಿ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸುವುದನ್ನು ಅಧಿಕಾರಿಗಳು ಮೊದಲ ಆದ್ಯತೆಯನ್ನಾಗಿ ಪರಿಗಣಿಸಬೇಕು. ಮಧ್ಯವರ್ತಿಗಳಿಗೆ ಅವಕಾಶವಿಲ್ಲದಂತೆ ನೇರವಾಗಿ ಫಲಾನುಭವಿಗಳಿಗೆ ಸೇರುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಈ ವಿಚಾರದಲ್ಲಿ ಅಸಡ್ಡೆ ಮತ್ತು ಉದಾಸೀನ ಮಾಡಿದರೆ ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಸರ್ಕಾರ ಅಗತ್ಯವಿದ್ದಷ್ಟು ಹಣವನ್ನು ನೀಡುತ್ತಿದೆ. ಈ ಹಣ ಫಲಾನುವಿಗಳಿಗೆ ತಲುಪದಿದ್ದರೆ ಸಂಬಂಧಪಟ್ಟ ಅಧಿಕಾರಿಗಳನ್ನು ಹೊಣೆ ಮಾಡಲಾಗುವುದು.

ಚುರುಕಾಗಿ ಕೆಲಸ ಮಾಡಿ: ಅಭಿವೃದ್ಧಿ ಕೆಲಸಗಳಿಗೂ ಅನುದಾನ ಹೇರಳವಾಗಿ ಬಿಡುಗಡೆ ಆಗುತ್ತಿದೆ. ಆಯ–ವ್ಯಯದಲ್ಲಿ ಘೋಷಣೆ ಆಗಿರುವ ಕಾರ್ಯಕ್ರಮಗಳಿಗೂ ಹಣ ಬಿಡುಗಡೆ ಆಗುತ್ತಿದೆ. ನಾವು ಅನುದಾನ ನೀಡಿದಾಗ ಕ್ರಿಯಾ ಯೋಜನೆ ಸಿದ್ಧವಾಗಬೇಕು. ಈ ಆರ್ಥಿಕ ವರ್ಷಕ್ಕೆ ಆರು ತಿಂಗಳು ಮಾತ್ರ ಉಳಿದಿದೆ. ಕ್ರಮ ವಹಿಸದ ಅಧಿಕಾರಿಗಳ ವಿರುದ್ಧ ಮುಲಾಜಿಲ್ಲದೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಕಳೆದ ವರ್ಷ ಬರಗಾಲ ಅಗತ್ಯದಷ್ಟು ವಿದ್ಯುತ್ ಉತ್ಪಾದನೆ ಮಾಡಿದ್ದೇವೆ. ಇದಕ್ಕಾಗಿ ಇಂಧನ ಇಲಾಖೆಗೆ ಅಭಿನಂದನೆ ಸಲ್ಲಿಸುತ್ತೇನೆ. ಸುಮಾರು ಇಪ್ಪತ್ತು ಸಾವಿರ ಕೋಟಿ ಸರ್ಕಾರದ ಮೇಲೆ ಹೊರೆಯಾದರೂ ಏಳನೇ ವೇತನ ಆಯೋಗ ಜಾರಿ ಮಾಡಿ, ವೇತನ ಹೆಚ್ಚಿಸಿದ್ದೇವೆ. ನಮ್ಮ ಗ್ರಾಮೀಣ ಬದುಕು, ಗ್ರಾಮೀಣ ಸಮಾಜವನ್ನು ಮೇಲ್ದರ್ಜೆಗೇರಿಸಬೇಕು ಎನ್ನುವುದು ನನ್ನ ಗುರಿ. ನನ್ನ ಗುರಿಗೆ ತಕ್ಕಂತೆ ನೀವುಗಳೂ ಕೈ ಜೋಡಿಸಿ ಕೆಲಸ ಮಾಡಬೇಕು. ಏಕೆಂದರೆ ಶೇ90 ರಷ್ಟು ಅಧಿಕಾರಿ ಮತ್ತು ಸಿಬ್ಬಂದಿ ಕೂಡ ಗ್ರಾಮೀಣ ಭಾಗದಿಂದ ಬಂದವರು. ಅಧಿಕಾರಿಗಳಿಗೆ ಸಾಮಾಜಿಕ ಪ್ರಜ್ಞೆ ಇರಬೇಕು ಎಂದು ಕಿವಿಮಾತು ಹೇಳಿದರು.

ಕೆಡಿಪಿ ಸಭೆಗೆ ಯದುವೀರ್, ತನ್ವೀರ್, ಶ್ರೀವತ್ಸ ಗೈರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆ ಯಲ್ಲಿ ಇಂದು ನಡೆದ ಕೆಡಿಪಿ ಸಭೆಗೆ ಸಂಸದ ಯದುವೀರ್, ಶಾಸಕರಾದ ತನ್ವೀರ್ ಸೇಠ್ ಹಾಗೂ ಟಿ.ಎಸ್. ಶ್ರೀವತ್ಸ ಗೈರು ಹಾಜರಾಗಿದ್ದರು. ರಾಜಕೀಯ ಭಿನ್ನಾಭಿಪ್ರಾಯ ಮಾತ್ರವಲ್ಲದೆ ಮೈಸೂರು ಅರಮನೆಗೆ ಸಂಬಂಧಿಸಿದ ವ್ಯಾಜ್ಯಗಳ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಭಾಗಿಯಾಗಿದ್ದ ಕೆಡಿಪಿ ಸಭೆಗೆ ಯದುವೀರ್ ಗೈರು ಹಾಜರಾಗಿದ್ದಾರೆ ಎಂಬ ಮಾತುಗಳು ಕೇಳಿ ಬಂದಿತು. ಸ್ವಪಕ್ಷದ ಶಾಸಕ ತನ್ವೀರ್ ಸೇಠ್ ಗೈರು ಹಾಜರಾಗಿರುವುದು ಸಹಜ ವಾಗಿಯೇ ಕುತೂಹಲ ಮೂಡಿಸಿದೆ. ಕೆಡಿಪಿ ಸಭೆಯಲ್ಲಿ ಜೆಡಿಎಸ್ ಶಾಸಕರು ಭಾಗವಹಿಸಿದ್ದರೂ ಕಾಂಗ್ರೆಸ್ ಶಾಸಕ ತನ್ವೀರ್ ಸೇಠ್ ಏಕೆ ಗೈರು ಹಾಜರಾಗಿದ್ದರು ಎಂಬ ಪ್ರಶ್ನೆ ಎದುರಾಯಿತು. ಇನ್ನು ಮುಡಾ ಹಗರಣದಲ್ಲಿ ಮುಂಚೂಣಿಯಲ್ಲಿ ಹೋರಾಟ ಮಾಡುತ್ತಿರುವ ಶ್ರೀವತ್ಸ ಇಂದಿನ ಕೆಡಿಪಿ ಸಭೆಗೆ ಆಗಮಿಸಲಿಲ್ಲ.

ಅಧಿಕಾರಿಗಳಿಗೆ ಬಿಸಿ ಮುಟ್ಟಿಸಿದ ಸಿಎಂ

ಜನಸಂಪರ್ಕದಲ್ಲಿರಬೇಕು. ಜನರ ಮಧ್ಯೆ ಇದ್ದು ಕೆಲಸ ಮಾಡಲೇಬೇಕು. ಆಗ ಮಾತ್ರ ಪರಿಣಾಮಕಾರಿಯಾಗಿ ಕೆಲಸ ಸಾಧ್ಯವಾಗುತ್ತದೆ. ಜನಸಂಪರ್ಕ ಸಭೆ ನಡೆಸದೆ ಕೇವಲ ಸಭೆಗಳಲ್ಲಿ ಬಂದು ನೀವು ಹೇಳಿದ್ದನ್ನೆಲ್ಲಾ ಕೇಳಿಕೊಂಡು ನಾವು ಸುಮ್ಮನೆ ಹೋಗುತ್ತೇವೆಂದು ಭಾವಿಸಬೇಡಿ ಎಂದು ಸಿಎಂ ಎಚ್ಚರಿಕೆ ನೀಡಿದರು.

ಇದೇ ವೇಳೆ ಅಧಿಕಾರಿಯೊಬ್ಬರ ಡೈರಿ ಹಾಗೂ ಕ್ಷೇತ್ರ ಭೇಟಿಯ ಫೋಟೋ ಕೇಳಿದರು. ಈ ವೇಳೆ ಕೃಷಿ ಅಧಿಕಾರಿಯೊಬ್ಬರು ತಾವು ಗ್ರಾಮ ಭೇಟಿ ನೀಡಿದ್ದ ಡೈರಿಯನ್ನು ಸಿಎಂಗೆ ನೀಡಿದರು. ಅದನ್ನು ಪರಿಶೀಲಿಸಿದರಾದರೂ ಸಮಾಧಾನವಾಗದೆ ನೀವು ಭೇಟಿ ನೀಡಿದ್ದ ಫೋಟೋಗಳನ್ನು ತೋರಿಸಿ ಎಂದರು. ಅಧಿಕಾರಿಗಳು ಫೋಟೋಗಳನ್ನು ಪ್ರದರ್ಶಿಸಿದರೂ, ರೈತರ ಜಮೀನುಗಳಿಗೆ ಭೇಟಿ ನೀಡಿದಾಗ ಕೃಷಿ ಬಗ್ಗೆ ರೈತರಿಗೆ ಹೆಚ್ಚು ತಿಳಿವಳಿಕೆ ಇದೆಯಾ ಅಥವಾ ನಿಮಗೆ ಹೆಚ್ಚು ತಿಳಿವಳಿಕೆ ಇದೆಯಾ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅಧಿಕಾರಿಗಳು, ಪ್ರಾಯೋಗಿಕವಾಗಿ ರೈತರು ಬುದ್ಧಿವಂತರಿರುತ್ತಾರೆ. ನಾವು ಅವರಿಂದ ಕಲಿಯುತೀವಿ ಎಂದರು.

ಯಾರೂ ರೇಷ್ಮೆ ಬೆಳೆಯುತ್ತಿಲ್ಲಾ ಏಕೆ?: ಒಂದು ಕಾಲದಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ರೇಷ್ಮೆ ಹೆಚ್ಚು ಬೆಳೆಯುತ್ತಿದ್ದರು. ಬಹಳಷ್ಟು ರೈತರು ಇದರ ಮೇಲೆ ಅವಲಂಭಿತರಾಗಿದ್ದರು. ಈಗ ನಮ್ಮ ಸಿದ್ದರಾಮನಹುಂಡಿಯಲ್ಲಿ ಯಾರೂ ರೇಷ್ಮೆ ಬೆಳೆಯುತ್ತಿಲ್ಲ ಏಕೆ? ಎಂದು ಸಿಎಂ ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅಧಿಕಾರಿಗಳು ಹೌದು ಸಾರ್, ಸಿದ್ದರಾಮನಹುಂಡಿಯಲ್ಲಿ ಕೇವಲ ಇಬ್ಬರು ಮಾತ್ರ ರೇಷ್ಮೆ ಬೆಳೆಯುತ್ತಿದ್ದಾರೆ. ಇರುವ ಸಿಬ್ಬಂದಿಯಲ್ಲೇ 10 ಹಳ್ಳಿ ಆಯ್ಕೆ ಮಾಡಿಕೊಂಡು ಜಿಲ್ಲೆಯಲ್ಲಿ ರೇಷ್ಮೆ ವಿಸ್ತರಣೆಗೆ ಕೆಲಸ ಮಾಡುತ್ತಿದ್ದೇವೆ. ನಾವೇ ಗೂಡುಗಳನ್ನು ಕೊಟ್ಟು, ಪ್ರೋತ್ಸಾಹ ನೀಡುತ್ತಿದ್ದೇವೆ ಎಂದು ವಿವರಿಸಿದರು.

ಮೀನುಗಾರಿಕೆ ಅವಲಂಬಿತರೆಷ್ಟು?: ರಾಜ್ಯದಲ್ಲಿ ಎಷ್ಟು ಮಂದಿ ಹಾಗೂ ಎಷ್ಟು ಕುಟುಂಬಗಳು ಮೀನುಗಾರಿಕೆಯನ್ನೇ ನಂಬಿ ಬದುಕುತ್ತಿವೆ ಎನ್ನುವ ಮಾಹಿತಿ ಇದೆಯೇ?. ಅವರೆಲ್ಲರಿಗೂ ಸರ್ಕಾರದ ಕಾರ್ಯಕ್ರಮಗಳು ಗೊತ್ತಿದೆಯಾ? ಅವು ಎಲ್ಲರಿಗೂ ತಲುಪುತ್ತಿದೆಯಾ ಎಂದು ಸಿಎಂ ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅಧಿಕಾರಿಗಳು 25,988 ಮಂದಿ ಹಾಗೂ 11,314 ಕುಟುಂಬಗಳು ಮೀನುಗಾರಿಕೆಯನ್ನೇ ಅವಲಂಭಿಸಿದ್ದಾರೆ. ಎಲ್ಲರಿಗೂ ಸರ್ಕಾರದ ಸವಲತ್ತುಗಳ ಬಗ್ಗೆ ಅರಿವು ಮೂಡಿಸಿ, ತಲುಪಿಸಲಾಗುತ್ತಿದೆ ಎಂದರು.

ಅಕ್ಕಿ ಬೇಕೋ ಇಲ್ಲಾ ಹಣವೋ?: ಅನ್ನಭಾಗ್ಯ ಯೋಜನೆ ಎಷ್ಟು ಪರಿಣಾಮಕಾರಿಯಾಗಿ ಜನರಿಗೆ ತಲುಪುತ್ತಿದೆ, ಬಿಪಿಎಲ್ ಪಡಿತರ ಚೀಟಿಗಳು, ನಕಲಿ ಪಡಿತರ ಚೀಟಿಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದ ಸಿಎಂ, ನೀವು ಜನರ ಬಳಿಗೆ ಹೋದಾಗ ಜನ ಅಕ್ಕಿ ಬೇಕು ಎನ್ನುತ್ತಿದ್ದಾರೋ ಇಲ್ಲಾ ಹಣ ಬೇಕು ಅಂತಿದ್ದಾರೋ ಎಂದು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಅಧಿಕಾರಿಗಳು, ಡಿಬಿಟಿ ಮೂಲಕ ನೇರವಾಗಿ ಅವರ ಖಾತೆಗೆ ಹಣ ಹೋಗುವುದನ್ನು ಹೆಚ್ಚಿನ ಜನರು ಬಯಸುತ್ತಿದ್ದಾರೆ. ಇದರಿಂದ ಕಾಳ ಸಂತೆಯನ್ನು ಅಕ್ಕಿ ಮಾರಾಟಕ್ಕೂ ಬ್ರೇಕ್ ಬೀಳುತ್ತದೆ. ಹಣ ಸಿಕ್ಕರೆ ಇತರೆ ಪದಾರ್ಥ, ಔಷಧಿಗೆ ಬಳಸಿಕೊಳ್ಳಬಹುದು ಎನ್ನುವ ಅಭಿಪ್ರಾಯ ಹೆಚ್ಚಾಗಿದೆ ಎಂದರು.

ಅರ್ಹರಿಗೆ ಅನುಕೂಲವಾಗಲೆಂದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗಿದೆ. ಆದ್ದರಿಂದ ನಕಲಿ ದಾಖಲೆಗಳನ್ನು ಸೃಷ್ಟಿಸಿ ಅನರ್ಹರು ಯೋಜನೆಯ ದುರುಪಯೋಗ ಪಡೆಯದಂತೆ ಎಚ್ಚರಿಕೆ ವಹಿಸಬೇಕು ಎಂದು ಖಡಕ್ಕಾಗಿ ಸೂಚನೆ ನೀಡಿದರು.

> ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ 17 ಎ ಪ್ರಕಾರ ತನಿಖೆ ನಡೆಸಿ, ಮೂರು ತಿಂಗಳಲ್ಲಿ ವರದಿ ನೀಡಲು ಆದೇಶಿಸಿರುವ ಹಿನ್ನೆಲೆಯಲ್ಲಿ ಲೋಕಾಯುಕ್ತದವರು ಎಫ್‌ಐಆರ್ ದಾಖಲು ಮಾಡಿಕೊಂಡು ತನಿಖೆ ನಡೆಸುತ್ತಾರೆ. ಚುನಾವಣಾ ಬಾಂಡ್ ದುರ್ಬಳಕೆ ಆರೋಪದಡಿ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ವಿರುದ್ಧ ಇಂದು ಎಫ್‌ಐಆರ್ ಆಗಿದೆ. ಅವರೂ ರಾಜೀನಾಮೆ ಕೊಡಬೇಕಲ್ವಾ. ಈ ಆರೋಪದಡಿ ಪ್ರಧಾನಿ ಮೋದಿಯವರೂ ರಾಜೀನಾಮೆ ಕೊಡಬೇಕಾಗುತ್ತದೆ. ಜಾಮೀನಿನ ಮೇಲಿರುವ ಹೆಚ್.ಡಿ.ಕುಮಾರಸ್ವಾಮಿಯೂ ರಾಜೀನಾಮೆ ಕೊಡಬೇಕು. ಅವರೆಲ್ಲಾ ರಾಜೀನಾಮೆ ಕೊಡಲಿ, ಆಮೇಲೆ ನೋಡೋಣ.
>
> –ಮುಖ್ಯಮಂತ್ರಿ ಸಿದ್ದರಾಮಯ್ಯ

FIR

ಅಲಿಯಾಸ್ ಜವರ ಅವರ ಮಗ ಜೆ. ದೇವರಾಜು(70) ಎ4 ಹಾಗೂ ಇತರರು ಆರೋಪಿಗಳೆಂದು ನಮೂದಿಸಲಾಗಿದೆ.

ಮೈಸೂರಿನ ಬಂಡೀಪಾಳ್ಯದ ಗಣಪತಿ ಆಶ್ರಮದ ರಸ್ತೆ ನಿವಾಸಿ ಲೇಟ್ ಸಿದ್ದಪ್ಪ ಅವರ ಮಗ ಸ್ನೇಹಮಯಿ ಕೃಷ್ಣ ರಾಜ್ಯ ಉಚ್ಚನ್ಯಾಯಾಲಯ ಮತ್ತು ಕರ್ನಾಟಕ ರಾಜ್ಯ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ದೂರುಗಳ ವಿಚಾರಣೆ ನಡೆಸಿ ಮೇಲ್ನೋಟಕ್ಕೆ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಪತ್ನಿ ಎಂ.ಬಿ. ಪಾರ್ವತಿ ಸೇರಿದಂತೆ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿ 2024ರ ಡಿಸೆಂಬರ್ 24ರೊಳಗಾಗಿ ತನಿಖೆ ಪೂರ್ಣಗೊಳಿಸಿ ವರದಿ ಸಲ್ಲಿಸುವಂತೆ ಲೋಕಾಯುಕ್ತ ಮೈಸೂರು ಎಸ್ಪಿ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶ ನೀಡಲಾಗಿತ್ತು.

ತೀರ್ಪು ಹೊರ ಬೀಳುತ್ತಿದ್ದಂತೆಯೇ ನ್ಯಾಯಾಲಯದಿಂದ ತೀರ್ಪಿನ ಆದೇಶದ ದೃಢೀಕೃತ ಪ್ರತಿಯನ್ನು ಪಡೆದ ಲೋಕಾಯುಕ್ತ ಮೈಸೂರು ಎಸ್ಪಿ ಉದೇಶ, ಬೆಂಗಳೂರಲ್ಲಿ ಲೋಕಾಯುಕ್ತ ಉನ್ನತಾಧಿಕಾರಿಗಳನ್ನು ಭೇಟಿ ಮಾಡಿ ಅವರ ಮಾರ್ಗದರ್ಶನದಂತೆ ಎರಡು ದಿನ ತಡವಾಗಿ ಇಂದು ಸಿಎಂ ಸಿದ್ದರಾಮಯ್ಯ ಸೇರಿ ನಾಲ್ವರು ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲು ಮಾಡಿದ್ದಾರೆ. ಪ್ರಕರಣ ದಾಖಲಾಗುತ್ತಿದ್ದಂತೆಯೇ ದೂರದಾರ ಸ್ನೇಹಮಯಿ ಕೃಷ್ಣ ಲೋಕಾಯುಕ್ತ ಎಸ್ಪಿ ಕಚೇರಿಗೆ ಧಾವಿಸಿ ದಾಖಲಿಸಿರುವ ಎಫ್‌ಐಆರ್ ಅನ್ನು ಓದಿ, ನೋಡಿದ ಬಳಿಕ ಸಹಿ ಮಾಡಿ, ಪ್ರತಿಯನ್ನು ಪಡೆದುಕೊಂಡರು.

ದಾಖಲಾಗಿರುವ ಮೊದಲ ಕೇಸ್ ಇದು

ಇದನ್ನು ಸಮರ್ಥವಾಗಿ ಎದುರಿಸುತ್ತೇನೆ ಎಂದು ತಿಳಿಸಿದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಬಿಜೆಪಿ ಸರ್ಕಾರದಲ್ಲಿ ಹೆಚ್.ಡಿ. ಕುಮಾರಸ್ವಾಮಿ ಮಂತ್ರಿಯಾಗಿದ್ದಾರೆ. ಕುಮಾರಸ್ವಾಮಿ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಜಾಮೀನು ಪಡೆದುಕೊಂಡಿದ್ದಾರೆ. ಹಾಗಾದರೆ ಕುಮಾರಸ್ವಾಮಿ ರಾಜಿನಾಮೆ ಕೊಡುತ್ತಾರೆಯೇ ಎಂದು ಪ್ರಶ್ನಿಸಿದರು.

ಗುಜರಾತ್‌ನ ಗೋಧ್ರಾ ಘಟನೆಯಲ್ಲಿ ಬಹಳಷ್ಟು ಜನರು ಸತ್ತರು. ಆಗ ನರೇಂದ್ರ ಮೋದಿ ರಾಜೀನಾಮೆ ನೀಡಿದರೆ ಎಂದು ಪ್ರಶ್ನಿಸಿದ ಸಿದ್ದರಾಮಯ್ಯ, ಈಗ ನನ್ನ ರಾಜೀನಾಮೆ ಕೇಳಲು ಇವರಿಗೆ ಯಾವ ನೈತಿಕತೆ ಇದೆ ಎಂದು ಹೇಳಿದರು. ನಾನು ಯಾವುದೇ ತಪ್ಪು ಮಾಡಿಲ್ಲ. ಆದ ಕಾರಣ ರಾಜೀನಾಮೆ ನೀಡುವುದಿಲ್ಲ ಎಂದು ಪುನರುಚ್ಚರಿಸಿದರು.

ಯಾರೇ ರಾಜ್ಯಪಾಲರಾದರೂ ಆಡಳಿತದಲ್ಲಿ ಹಸ್ತಕ್ಷೇಪ ಮಾಡಬಾರದು. ಆದರೆ ಹಲವು ರಾಜ್ಯಗಳಲ್ಲಿ ರಾಜ್ಯಪಾಲರು ಹಸ್ತಕ್ಷೇಪ ಮಾಡುತ್ತಿದ್ದು, ಈ ಬಗ್ಗೆ ರಾಷ್ಟ್ರ ಮಟ್ಟದಲ್ಲಿ ಚರ್ಚೆಗಳು ನಡೆಯಬೇಕು ಎಂದು ಅಭಿಪ್ರಾಯಪಟ್ಟರು. ರಾಜ್ಯಪಾಲರು ಹಾಗೂ ಸರ್ಕಾರದ ನಡುವೆ ಸಾಮರಸ್ಯ ಇಲ್ಲದಿದ್ದರೆ ಸಾಂವಿಧಾನಿಕ ಸಂಘರ್ಷವಾಗುವುದೇ ಎಂಬ ಪ್ರಶ್ನೆಗೆ, ಯಾವ ಸಂಘರ್ಷವೂ ಆಗುವುದಿಲ್ಲ. ಐದು ವರ್ಷ ಆಡಳಿತ ನಡೆಸಿ ಎಂದು ಜನರು ನಮ್ಮನ್ನು ಆಯ್ಕೆ ಮಾಡಿದ್ದಾರೆ. ಅದರಂತೆ ನಾವು ಆಡಳಿತ ನಡೆಸುತ್ತಿದ್ದೇವೆ ಎಂದು ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಕರ್ನಾಟಕ ಮಾತ್ರವಲ್ಲದೆ ಬಿಜೆಪಿಯೇತರ ಸರ್ಕಾರವಿರುವ ಕಡೆ ಕೇಂದ್ರದ ಬಿಜೆಪಿ ಸರ್ಕಾರ ಸಿಬಿಐ, ಇಡಿ ಹಾಗೂ ರಾಜ್ಯಪಾಲರನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಇದೇ ವೇಳೆ ಆಪಾದಿಸಿದರು.

ಲೋಕಾಯುಕ್ತ ಮುಚ್ಚಿದ್ದ ಸಿದ್ದರಾಮಯ್ಯ ಕೊರಳಿಗೆ ಅದೇ ಲೋಕಾಯುಕ್ತ ಈಗ ಉರುಳಾಗಿದೆ ಎಂಬ ಕುಮಾರಸ್ವಾಮಿ ಆರೋಪಕ್ಕೆ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ನಾವು ಲೋಕಾಯುಕ್ತ ಮುಚ್ಚಲಿಲ್ಲ. ಎಸಿಬಿ ಅಸ್ತಿತ್ವಕ್ಕೆ ತಂದೆವು. ಬಿಜೆಪಿ ಅಧಿಕಾರದಲ್ಲಿರುವ 8 ರಾಜ್ಯಗಳಲ್ಲಿ ಎಸಿಬಿ ಅಸ್ತಿತ್ವದಲ್ಲಿದೆ. ಇಲ್ಲಿ ಎಸಿಬಿ ವಿರೋಧಿಸಿ, ಅಲ್ಲಿ ಎಸಿಬಿ ಅಸ್ತಿತ್ವಕ್ಕೆ ತರುವುದು ಬಿಜೆಪಿಯ ದ್ವಿಮುಖ ನೀತಿ ಅಲ್ಲವೇ ಎಂದು ಕಿಡಿಕಾರಿದರು.

ನಮಗೆ ಜನರ ಆಶೀರ್ವಾದವಿದ್ದು, 136 ಶಾಸಕರು ಗೆಲುವು ಸಾಧಿಸಿದ್ದೇವೆ. ಜನರಿಗೆ ಕೊಟ್ಟ ಭರವಸೆ ಈಡೇರಿಸುತ್ತೇವೆ. ಗ್ಯಾರಂಟಿ ಯೋಜನೆ ಸೇರಿದಂತೆ ಯಾವುದೇ ಯೋಜನೆ ಸ್ಥಗಿತ ಮಾಡುವುದಿಲ್ಲ ಎಂದು ಸಿದ್ದರಾಮಯ್ಯ ಭರವಸೆ ನೀಡಿದರು.

> ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಯಾಕೆ ಇನ್ನೂ ಎಫ್‌ಐಆರ್ ದಾಖಲಿಸಿಲ್ಲ ಎಂದು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳನ್ನು ಕೇಳಿದೆ. ದೂರಿನಲ್ಲಿ ಹಲವಾರು ಸಂಶಯಗಳಿವೆ ಎಂದು ಅವರು ಹೇಳಿದರು. ಹೈಕೋರ್ಟ್‌ಗೆ ಬಾರದ ಸಂಶಯ, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಬಾರದ ಸಂಶಯ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳಿಗೆ ಯಾಕೆ ಬಂತೋ ಗೊತ್ತಿಲ್ಲ.
>
> –ಲೋಕಾಯುಕ್ತ ನಿವೃತ್ತ ನ್ಯಾ. ಸಂತೋಷ್ ಹೆಗ್ಡೆ



ಸ್ನೇಹಮಯಿ ಕೃಷ್ಣ ಹೈಕೋರ್ಟ್ ಮೊರೆ

ಪ್ರಕರಣ ದಾಖಲಿಸುವಂತೆ ಸಾರ್ವಜನಿಕರು ಹಾಗೂ ಮಾಧ್ಯಮಗಳ ಒತ್ತಡ ಹೆಚ್ಚಾದ ನಂತರ ಬೇರೆ ದಾರಿಯಿಲ್ಲದೇ ಇಂದು ಎಫ್‌ಐಆರ್ ದಾಖಲಿಸಿದ್ದಾರೆ. ಇದನ್ನೆಲ್ಲಾ ಗಮನಿಸಿದರೆ ರಾಜ್ಯ ಸರ್ಕಾರದಡಿ ಬರುವ ತನಿಖಾ ಸಂಸ್ಥೆಗಳು ಮುಖ್ಯಮಂತ್ರಿಗಳ ವಿರುದ್ಧ ತನಿಖೆ ನಡೆಸಲು ಸ್ವಲ್ಪ ಯೋಚನೆ ಮಾಡುವಂತೆ ಕಾಣುತ್ತಿದೆ ಎಂದರು.

50 ಕೋಟಿ ರೂ.ಗೂ ಹೆಚ್ಚು ಹಗರಣ ನಡೆದಿದ್ದರೆ ಅಂತಹ ಪ್ರಕರಣಗಳನ್ನು ಸಿಬಿಐ ತನಿಖೆ ನಡೆಸಬಹುದು ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಹೀಗಾಗಿ ಈ ಪ್ರಕರಣ ಸಿಬಿಐ ತನಿಖೆಗೆ ಯೋಗ್ಯವಾಗಿದೆ ಎಂದು ಅವರು ಹೇಳಿದರು. ಆರೋಪಿಯಾಗಿರುವ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಸ್ಥಾನದಲ್ಲಿ ಒಂದು ಕ್ಷಣವೂ ಮುಂದುವರೆಯಬಾರದು ಎಂದು ಒತ್ತಾಯಿಸಿದ ಅವರು, ಸಮಾಜವಾದಿ ಹಿನ್ನೆಲೆಯಲ್ಲಿ ಬಂದಿರುವ ಅವರು ತಮ್ಮ ಮೇಲಿನ ಆರೋಪಗಳಿಂದ ಮುಕ್ತರಾಗುವವರೆಗೆ ದಸರಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬಾರದು ಎಂದ ಅವರು, ದಸರಾ ಉದ್ಘಾಟನೆ ಸೇರಿದಂತೆ ಯಾವುದೇ ವೇದಿಕೆಗಳಲ್ಲೂ ಸಿದ್ದರಾಮಯ್ಯನವರಿಗೆ ಅವಕಾಶ ನೀಡಬಾರದು ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಈ ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇನೆ. ಸಿದ್ದರಾಮಯ್ಯ ವಿರುದ್ಧ ತಾವು ಮಾಡಿರುವ ಎಲ್ಲಾ ಆರೋಪಗಳನ್ನೂ ಮುಂದಿನ ಹಂತದಲ್ಲಿ ಸಾಬೀತುಪಡಿಸುತ್ತೇನೆ ಎಂದ ಅವರು, ಈ ಪ್ರಕರಣದಲ್ಲಿ ತಮ್ಮ ಹೋರಾಟಕ್ಕೆ ಪ್ರಾಥಮಿಕ ಗೆಲುವು ದೊರೆಯಲು ಹಲವು ಸಾಮಾಜಿಕ ಹೋರಾಟಗಾರರು ಒಂದು ತಂಡವಾಗಿ ಕೆಲಸ ಮಾಡಿದ್ದು ಹಾಗೂ ಮಾಧ್ಯಮಗಳು ಕಾರಣವಾಗಿವೆ. ಹೀಗಾಗಿ ತಮಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದ ಎಲ್ಲರಿಗೂ ಧನ್ಯವಾದ ತಿಳಿಸುತ್ತೇನೆ ಎಂದರು.

ಸಂಕಷ್ಟ ತಂದೊಡ್ಡಿದ ಮುಡಾದ ಆ 14 ನಿವೇಶನಗಳು...

ಪುಷ್ಠಿ ನೀಡುವಂತಹ ಅಂಶಗಳು. ಮೇಲ್ನೋಟಕ್ಕೆ ಎಲ್ಲವೂ ಸರಿಯಾಗಿದೆ ಎಂದು ಅನ್ನಿಸಿದರೂ, ಈ ಭೂಮಿಗೆ ಸಿದ್ದರಾಮಯ್ಯ ಅವರ ಪತ್ನಿ ಶ್ರೀಮತಿ ಪಾರ್ವತಿ ಅವರು ಒಡತಿಯಾಗಿರಲಿಲ್ಲ. ಬದಲಾಗಿ ಭೂಮಿಯು ಮುಡಾ ಒಡೆತನಕ್ಕೆ ಸೇರಿದ್ದಾಗಿದೆ. ಅಸಲು ಪಾರ್ವತಿ ಅವರ ಸಹೋದರ ಮಲ್ಲಿಕಾರ್ಜುನಸ್ವಾಮಿಯವರು ನಿಂಗ ಅವರ ವಾರಸುದಾರ ದೇವರಾಜು ಅವರಿಂದ ಜಮೀನು ಖರೀದಿಸಿರುವುದೇ ಅಸಿಂಧು ಎಂಬ ಅಂಶವು ದಾಖಲೆಗಳಿಂದ ತಿಳಿಯುತ್ತಿದೆ.

1998ರಲ್ಲಿ ಸದರಿ ಜಮೀನನ್ನು ಮುಡಾ ಡಿನೋಟಿಫೈ ಮಾಡಿದೆ ಎಂದು ಹೇಳಲಾಗುತ್ತಿದ್ದರೂ, ಆರ್‌ಟಿಸಿಯಲ್ಲಿ ಮುಡಾ ಹೆಸರೇ ಇತ್ತು. 2001ರಲ್ಲಿ ಮುಡಾ ದೇವನೂರು ಬಡಾವಣೆ 3ನೇ ಹಂತವನ್ನು ನಿರ್ಮಾಣ ಮಾಡಿದೆ. ಆ ಸಂದರ್ಭದಲ್ಲಿ ಈ ಭೂಮಿಯನ್ನೂ ಕೂಡ ಅಭಿವೃದ್ಧಿಪಡಿಸಿ, ಫಲಾನುಭವಿಗಳಿಗೆ ಹಂಚಲಾಗಿದೆ.

2001ರಲ್ಲಿ ಮುಡಾದಿಂದ ಅಭಿವೃದ್ಧಿ ಹೊಂದಿ ನಿವೇಶನಗಳು ಹಂಚಿಕೆಯಾಗಿರುವ ಭೂಮಿಯನ್ನು ಕೃಷಿ ಜಮೀನು ಎಂಬ ಹೆಸರಿನಲ್ಲಿ 2004ರಲ್ಲಿ ಮಲ್ಲಿಕಾರ್ಜುನಸ್ವಾಮಿ ಅವರು ಖರೀದಿ ಮಾಡಿದ್ದಾದರೂ ಹೇಗೆ? ಎಂಬುದು ಅನುಮಾನಕ್ಕೆ ಕಾರಣವಾಗಿದೆ. ಅಲ್ಲದೇ ಮಲ್ಲಿಕಾರ್ಜುನಸ್ವಾಮಿ ಅವರು ಇದೇ ಭೂಮಿಯನ್ನು ಜಿಲ್ಲಾಧಿಕಾರಿಗಳ ಮೂಲಕ 2005ರ ಜುಲೈ 15ರಂದು ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಸಿಕೊಂಡಿದ್ದಾರೆ. ಈ ಸಂದರ್ಭದಲ್ಲಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಲಿಲ್ಲವೇ? ಹಾಗೂ ಆರ್‌ಟಿಸಿಯಲ್ಲಿ ಮುಡಾ ಹೆಸರು ಇರುವುದನ್ನು ಗಮನಿಸಲಿಲ್ಲವೇ? ಅಥವಾ ಪ್ರಭಾವಕ್ಕೆ ಒಳಗಾದರೇ? ಎಂಬ ಸಂಶಯವಿದೆ.

ಮಲ್ಲಿಕಾರ್ಜುನಸ್ವಾಮಿ ಅವರು 2010ರ ಆಗಸ್ಟ್ 6ರಂದು ತಮ್ಮ ಸಹೋದರಿ ಶ್ರೀಮತಿ ಪಾರ್ವತಿ ಅವರಿಗೆ ಇದೇ ಭೂಮಿಯನ್ನು ಕೃಷಿ ಜಮೀನು ಹೆಸರಿನಲ್ಲಿ ದಾನದ ಮೂಲಕ ಪರಭಾರೆ ಮಾಡಿದ್ದಾರೆ. ಈ ಭೂಮಿಗೆ ಪಾರ್ವತಿ ಅವರ ಹೆಸರಿನಲ್ಲಿ ಖಾತೆ ವರ್ಗಾವಣೆ ಆಗಿ ಕಂದಾಯವನ್ನೂ ಪಾವತಿಸಲಾಗಿದೆ. ಅಂದರೆ 2005ರಲ್ಲಿ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿದ್ದ ಭೂಮಿ ಅದ್ಯಾವ ಪವಾಡದಲ್ಲಿ ಕೃಷಿ ಭೂಮಿಯಾಗಿ ಮಾರ್ಪಾಡಾಯಿತು? ಎಂಬ ಪ್ರಶ್ನೆಯನ್ನು ನ್ಯಾಯಾಲಯದಲ್ಲಿ ಸಿದ್ದರಾಮಯ್ಯ ಅವರ ಪ್ರತಿವಾದಿಗಳ ವಕೀಲರು ಪ್ರಸ್ತಾಪ ಮಾಡಿದ್ದರು.

ಶ್ರೀಮತಿ ಪಾರ್ವತಿ ಅವರು 2017ರಲ್ಲಿ ತಮ್ಮ 3.16 ಎಕರೆ ಭೂಮಿಯನ್ನು ಮುಡಾ ಸ್ವಾಧೀನಪಡಿಸಿಕೊಳ್ಳದೇ ಅಭಿವೃದ್ಧಿಪಡಿಸಿರುವುದರಿಂದ ಅದಕ್ಕೆ ಪರ್ಯಾಯವಾಗಿ 50:50 ಅನುಪಾತದಡಿ ಭೂಮಿ ನೀಡಬೇಕು ಎಂದು ಮುಡಾಗೆ ಅರ್ಜಿ ಸಲ್ಲಿಸಿದ್ದರು. ಅದರಂತೆ 2021ರಲ್ಲಿ ಅವರಿಗೆ ವಿಜಯನಗರ ಬಡಾವಣೆಯಲ್ಲಿ 14 ನಿವೇಶನಗಳನ್ನು ಮುಡಾದಿಂದ ನೀಡಲಾಗಿದೆ.

ಇಲ್ಲಿರುವ ಅನುಮಾನಗಳೆಂದರೆ 2001ರಲ್ಲೇ ಮುಡಾದಿಂದ ಸದರಿ ಭೂಮಿಯಲ್ಲಿ ಬಡಾವಣೆ ನಿರ್ಮಾಣವಾಗಿತ್ತು. ಹಾಗಿದ್ದರೂ 2004ರಲ್ಲಿ ಈ ಭೂಮಿ ಕೃಷಿ ಜಮೀನಾಗಿದ್ದು ಹೇಗೆ? ಅಭಿವೃದ್ಧಿ ಹೊಂದಿ ನಿವೇಶನ ರಚನೆಯಾಗಿರುವ ಭೂಮಿಯನ್ನು ದೇವರಾಜು ಅವರಿಂದ ಮಲ್ಲಿಕಾರ್ಜುನಸ್ವಾಮಿ ಖರೀದಿ ಮಾಡಿರುವುದು ಕಾನೂನು ಬಾಹಿರವಲ್ಲವೇ? ಅಲ್ಲದೇ ಮುಡಾದಿಂದ ಅಭಿವೃದ್ಧಿ ಹೊಂದಿದ್ದ ಭೂಮಿಯನ್ನೇ ಮತ್ತೆ 2005ರಲ್ಲಿ ಜಿಲ್ಲಾಧಿಕಾರಿಗಳು ಮಲ್ಲಿಕಾರ್ಜುನಸ್ವಾಮಿ ಹೆಸರಿನಲ್ಲಿ ಭೂ ಪರಿವರ್ತನೆ ಮಾಡಿರುವುದು ತನಿಖೆಗೆ ಒಳಪಡಬೇಕಾದ ವಿಷಯ ಎಂಬುದು ನ್ಯಾಯಾಲಯದಲ್ಲಿ ವಕೀಲರ ವಾದವಾಗಿತ್ತು. 2005ರಲ್ಲೇ ಭೂ ಪರಿವರ್ತನೆಯಾಗಿ ಭೂಮಿಯು 2010ರಲ್ಲಿ ಮತ್ತೆ ಕೃಷಿ ಭೂಮಿಯಾಗಿ ಪಾರ್ವತಿ ಅವರ ಹೆಸರಿಗೆ ನೋಂದಣಿಯಾಗಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. 2001ರಲ್ಲೇ ಮುಡಾದಿಂದ ಬಡಾವಣೆ ನಿರ್ಮಾಣವಾಗಿ ನಿವೇಶನ ಹಂಚಿಕೆಯಾಗಿರುವ ಭೂಮಿಯು ಮುಡಾಗೆ ಸೇರಿದ್ದೇ ಹೊರತು ಶ್ರೀಮತಿ ಪಾರ್ವತಿ ಅವರಿಗೆ ಸೇರಿದ್ದಲ್ಲ ಎಂಬ ವಾದವೂ ಮಂಡನೆಯಾಗಿದೆ.

ಒಟ್ಟಾರೆ ಈ ಭೂಮಿಯ ಭೂ ಸ್ವಾಧೀನ, ಡಿನೋಟಿಫಿಕೇಷನ್, ದೇವರಾಜು ಅವರಿಂದ ಮಲ್ಲಿಕಾರ್ಜುನಸ್ವಾಮಿಗೆ ಮಾರಾಟ, ಮಲ್ಲಿಕಾರ್ಜುನಸ್ವಾಮಿ ಹೆಸರಿಗೆ ಭೂ ಪರಿವರ್ತನೆ, ಕೃಷಿ ಜಮೀನು ಹೆಸರಿನಲ್ಲಿ ಶ್ರೀಮತಿ ಪಾರ್ವತಿ ಅವರಿಗೆ ದಾನಪತ್ರ ಹಾಗೂ ಮುಡಾದಿಂದ 50:50 ಅನುಪಾತದಡಿ ನಿವೇಶನ ಹಂಚಿಕೆ, ಈ ಎಲ್ಲಾ ಅಂಶಗಳು ಭಾರೀ ಅನುಮಾನದಿಂದ ಕೂಡಿದೆ. ಹೀಗಾಗಿ ಈ ಪ್ರಕರಣ ತನಿಖೆಗೆ ಯೋಗ್ಯವಾಗಿದೆ ಎಂಬುದನ್ನು ಸಿದ್ದರಾಮಯ್ಯರ ಪ್ರತಿವಾದಿಗಳ ವಕೀಲರು ನ್ಯಾಯಾಲಯಕ್ಕೆ ದಾಖಲೆಗಳ ಸಮೇತ ಮನವರಿಕೆ ಮಾಡಿಕೊಟ್ಟಿದ್ದೇ ಇಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಡಾದಿಂದ 14 ನಿವೇಶನ ಪಡೆದ ಅವರ ಪತ್ನಿ ಶ್ರೀಮತಿ ಪಾರ್ವತಿ, ಇವರಿಗೆ ಜಮೀನು ದಾನ ಮಾಡಿದ ಸಹೋದರ ಮಲ್ಲಿಕಾರ್ಜುನಸ್ವಾಮಿ ಹಾಗೂ ಮಲ್ಲಿಕಾರ್ಜುನಸ್ವಾಮಿಗೆ ಜಮೀನು ಮಾರಾಟ ಮಾಡಿರುವ ದೇವರಾಜು ವಿರುದ್ಧ ಲೋಕಾಯುಕ್ತದಲ್ಲಿ ಎಫ್‌ಐಆರ್ ದಾಖಲಾಗಲು ಕಾರಣವಾಗಿದೆ.

ಮೈಸೂರು ಮಿತ್ರ ಶನಿವಾರ 28 ಸೆಪ್ಟೆಂಬರ್ 2024

ಮೈಸೂರು ದಸರಾದಲ್ಲಿ ವ್ಯಾಪಾರೀಕರಣವೇ ಮೇಳೈಸುತ್ತಿದೆ

ಮಾಜಿ ಮೇಯರ್ ಸಂದೇಶ್ ಸ್ವಾಮಿ ಆಕ್ರೋಶ

ಮೈಸೂರು, ಸೆ.27(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವವನ್ನು ವ್ಯಾಪಾರೀಕರಣ ಮಾಡಲಾಗುತ್ತಿದೆ ಎಂದು ಮಾಜಿ ಮೇಯರ್ ಸಂದೇಶ್ ಸ್ವಾಮಿ ಆರೋಪಿಸಿದ್ದಾರೆ.



ಈ ತನಕ ಯಾವುದೇ ಸರ್ಕಾರ ದಸರಾ ವೀಕ್ಷಣೆಗೆ ಟಿಕೆಟ್ ಮೂಲಕ ಪ್ರವೇಶ ಕಲ್ಪಿಸಿರುವ ಉದಾಹರಣೆ ಇಲ್ಲ. ಆದರೆ ಇಂದಿನ ಕಾಂಗ್ರೆಸ್ ಸರ್ಕಾರ ಯುವ ದಸರಾಗೆ ಗ್ಯಾಲರಿ 1ರಲ್ಲಿ 8 ಸಾವಿರ ಹಾಗೂ ಗ್ಯಾಲರಿ 2ರಲ್ಲಿ 5 ಸಾವಿರ ರೂಪಾಯಿಗೆ ಟಿಕೆಟ್ ನಿಗದಿ ಮಾಡಿದೆ. ಪ್ರತಿ ದಿನ ಐದು ಸಾವಿರ ಟಿಕೆಟ್ ಮಾರಾಟ ಮಾಡುವ ಗುರಿ ಹೊಂದಲಾಗಿದೆ.

ಟಿಕೆಟ್ ಖರೀದಿದಾರರು, ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಕುಟುಂಬಸ್ಥರು ಸ್ಥಳಾವಕಾಶ ಆಕ್ರಮಿಸಿದರೆ ಜನಸಾಮಾನ್ಯರು ಯಾವ ರೀತಿ ಮುಕ್ತವಾಗಿ ಕಾರ್ಯಕ್ರಮ ವೀಕ್ಷಣೆ ಮಾಡಲು ಸಾಧ್ಯ ಎಂದು ಸಂದೇಶ್ ಸ್ವಾಮಿ ಪ್ರಶ್ನಿಸಿದ್ದಾರೆ.

ನಗರದ ಹೃದಯ ಭಾಗವಾದ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುತ್ತಿದ್ದ ಯುವ ದಸರಾ ಉತ್ತನಹಳ್ಳಿ ಬಳಿ ನಡೆಸುತ್ತಿರುವ ಕಾರಣ ಬಹಳಷ್ಟು ಜನರಿಗೆ ಅನಾನುಕೂಲವಾಗಲಿದೆ. ಆದ ಕಾರಣ ಈ ತೀರ್ಮಾನವನ್ನು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಅಧಿಕಾರಿಗಳು ಪುನರ್ ಪರಿಶೀಲನೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಇನ್ನು, ದಸರಾ ಆಹಾರ ಮೇಳದಲ್ಲಿ ಸಸ್ಯಹಾರದ ಮಳಿಗೆಗೆ 25 ಸಾವಿರ ಇದ್ದ ಬಾಡಿಗೆಯನ್ನು 56 ಸಾವಿರಕ್ಕೆ ಹಾಗೂ ಮಾಂಸಹಾರದ ಮಳಿಗೆಗೆ 30 ಸಾವಿರ ಬಾಡಿಗೆಯನ್ನು 88,500 ರೂಪಾಯಿಗೆ ಏರಿಕೆ ಮಾಡಲಾಗಿದೆ. ಬಡವರು ಹಾಗೂ ಮಧ್ಯಮ ವರ್ಗದವರು ಮಳಿಗೆ ತೆರೆದು ಜೀವನಕ್ಕೊಂದು ಆದಾಯ ಮಾಡಿಕೊಳ್ಳಲು ಮುಂದಾಗಿದ್ದರೆ ಅದಕ್ಕೂ ಅಡ್ಡಗಾಲು ಹಾಕಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ದಸರಾ ವಸ್ತುಪ್ರದರ್ಶನದಲ್ಲಿ 50 ರೂಪಾಯಿ ಇದ್ದ ಪ್ರವೇಶ ದರವನ್ನು 55 ರೂಪಾಯಿಗೆ ಹೆಚ್ಚು ಮಾಡಲಾಗಿದೆ. ದಸರಾ ಗೋಲ್ಡ್ ಕಾರ್ಡ್ ಅನ್ನು 6,500 ರೂಪಾಯಿಗೆ ಏರಿಕೆ ಮಾಡಲಾಗಿದೆ. ಗೋಲ್ಡ್ ಕಾರ್ಡ್ ಪಡೆದವರಿಗೆ ವಿಶೇಷ ಆದ್ಯತೆ ಕೂಡ ದೊರೆಯುತ್ತಿಲ್ಲ. ಈ ಮೂಲಕ ದಸರಾ ವ್ಯಾಪಾರೀಕರಣವಾಗುತ್ತಿರುವುದು ಸರ್ಕಾರಕ್ಕೆ ಶೋಭೆ ತರುವುದಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ದಸರಾ ಎಲ್ಲಾ ವರ್ಗದವರು ಭಾಗವಹಿಸುವ ಸಾಂಸ್ಕೃತಿಕ ಹಬ್ಬವಾಗಬೇಕೇ ಹೊರತು, ಸರ್ಕಾರದ ಬೊಕ್ಕಸ ತುಂಬಿಸಿಕೊಳ್ಳುವ ಹಬ್ಬವಾಗಬಾರದು. ಇಲ್ಲವೇ ಅಧಿಕಾರಿಗಳು ಲೂಟಿ ಮಾಡುವ ವ್ಯಾಪಾರ ಕೇಂದ್ರವಾಗಬಾರದು ಎಂದು ಹೇಳಿದ್ದಾರೆ.

ಮೈಸೂರು ಮಹಾರಾಜರ ಕಾಲದಲ್ಲಿ ದಸರಾಗೆ ತನ್ನದೇ ಆದ ಘನತೆ ಮತ್ತು ಪಾವಿತ್ರ್ಯತೆ ಇತ್ತು ಇದನ್ನು ಉಳಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ದಸರಾ ಪ್ರಾಧಿಕಾರ ರಚನೆ ಮಾಡಬೇಕು ಎಂದು ಸಂದೇಶ್ ಸ್ವಾಮಿ ಆಗ್ರಹಿಸಿದರು.

ಅ.3ರಿಂದ ಶ್ರೀವೆಂಕಟೇಶ್ವರ ಧ್ಯಾನ ಕೇಂದ್ರದಲ್ಲಿ ಶರನ್ನವರಾತ್ರೋತ್ಸವ

ಮೈಸೂರು, ಸೆ.27–ಮೈಸೂರಿನ ಶ್ರೀರಾಂಪುರಂದಲ್ಲಿರುವ ಉತ್ತರಾದಿ ಮಠಕ್ಕೆ ಸೇರಿರುವ ಶ್ರೀವೆಂಕಟೇಶ್ವರ ಧ್ಯಾನ ಕೇಂದ್ರದಲ್ಲಿ ಅ.3ರಿಂದ 12ರವರೆಗೆ ಈ ವರ್ಷವೂ 'ಶರನ್ನವರಾತ್ರಿ ಉತ್ಸವ'ವನ್ನು ಆಯೋಜಿಸಲಾಗಿದೆ.

ಪ್ರತಿದಿನ ಬೆಳಿಗ್ಗೆ 8ಕ್ಕೆ ಪುರುಷರಿಂದ 'ವಿಷ್ಣು ಸಹಸ್ರನಾಮ ಪಾರಾಯಣ', ಪಂ.ಶ್ರೀ ಶ್ರೀನಿವಾಸಾಚಾರ್ಯ ಋಗ್ವೇದಿ ಅವರ ನೇತೃತ್ವದಲ್ಲಿ 'ಋಗ್ ಸಂಹಿತಾ ಹೋಮ', ಶ್ರೀವೆಂಕಟೇಶ ದೇವರಿಗೆ ವಿನೂತನ ಅಲಂಕಾರ, ಬೆಳಗ್ಗೆ 10.30ಕ್ಕೆ ಸ್ತ್ರೀಯರಿಂದ 'ವೆಂಕಟೇಶ ಸ್ತವರಾಜ ಪಾರಾಯಣ', ಮಧ್ಯಾಹ್ನ 11ಕ್ಕೆ ನಗರದ ವಿವಿಧ ಭಜನಾ ಮಂಡಳಿಯವರಿಂದ 'ಭಜನೆ ಕಾರ್ಯಕ್ರಮ', ಸಂಜೆ 5ರಿಂದ 5.30ರವರೆಗೆ ಪಂ.ಹೇಮಂತಾಚಾರ್ಯ ಗುಡಿರವರಿಂದ 'ಶ್ರೀ ವೆಂಕಟೇಶ ಮಹಾತ್ಮ್ಯೆ ಪ್ರವಚನ', ಸಂಜೆ 5.30ರಿಂದ 6ರವರೆಗೆ ಪಂ.ಜಯರಾಜ ಆಚಾರ್ಯರವರಿಂದ 'ವಾಯು ಮಹಿಮೆ ಪ್ರವಚನ', ಸಂಜೆ 6ರಿಂದ 7ರವರೆಗೆ 'ಶ್ರೀವೆಂಕಟೇಶ ದೇವರಿಗೆ ವಿಷ್ಣುಸಹಸ್ರನಾಮಾವಳಿಯಿಂದ ಅರ್ಚನೆ', ನಂತರ ಸ್ವಸ್ತಿವಾಚನ, ಮಹಾಮಂಗಳಾರತಿ ಏರ್ಪಡಿಸಲಾಗಿದೆ.

ಅ.12ರಂದು ವಿಜಯದಶಮಿ ಪ್ರಯುಕ್ತ ಬೆಳಗ್ಗೆ 7ಕ್ಕೆ ಮಹಾಪಂಚಾಮೃತ ಅಭಿಷೇಕ ನಂತರ ಋಗ್‌ಸಂಹಿತಾ ಯಾಗದ ಪೂರ್ಣಾಹುತಿ, ಮಧ್ಯಾಹ್ನ 4ಕ್ಕೆ 'ಶ್ರೀ ವೆಂಕಟೇಶ ಕಲ್ಯಾಣ', ಸಾಯಂಕಾಲ 5ರಿಂದ 6.30ರವರೆಗೆ ವಿವೇಕಾನಂದ ವೃತ್ತದಿಂದ ಶ್ರೀಮಠದವರೆಗೆ 'ಭವ್ಯ ಮೆರವಣಿಗೆ' ನಂತರ ಅಕ್ಷತಾರೋಪಣ, ಸ್ವಸ್ತಿವಾಚನ, ಮಹಾಮಂಗಳಾರತಿ ಏರ್ಪಡಿಸಲಾಗಿದೆ. ಈ ಎಲ್ಲಾ ಧಾರ್ಮಿಕ ಕೈಂಕರ್ಯಗಳಿಗೆ ಭಗವದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಶ್ರೀ ಮಠದ ವ್ಯವಸ್ಥಾಪಕರಾದ ಪಂ.ಹೇಮಂತಾಚಾರ್ಯ ಗುಡಿಯವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊಬೈಲ್ 8147205326 ಸಂಪರ್ಕಿಸಬಹುದು.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತ ಸಂಘದಿಂದ ಪ್ರತಿಭಟನೆ



ಮೈಸೂರು ಜಿಲ್ಲಾ ಪಂಚಾಯಿತ್ ಕಚೇರಿ ಮುಂಭಾಗ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಪ್ರತಿಭಟನೆ ನಡೆಸಿದರು.

ಮೈಸೂರು, ಸೆ.27(ಜಿಎ)–ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಜಿಲ್ಲಾ ಪಂಚಾಯಿತ್ ಸಭಾಂಗಣದ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೊಸಕೋಟೆ ಬಸವರಾಜು ಮಾತನಾಡಿ, 'ರೈತರ ಭೂಮಿ ಮೇಲೆ 66 ಕೆ.ವಿ ವಿದ್ಯುತ್ ಗೋಪುರ ನಿರ್ಮಿಸುವ ಯೋಜನೆ ಕೈಬಿಡಬೇಕು. ಕೃಷಿ ಪಂಪ್ ಸೆಟ್‌ಗೆ ಸಂಪರ್ಕ ಪಡೆಯಲು ಎಲ್ಲಾ ಖರ್ಚು ರೈತರೇ ಭರಿಸಬೇಕು ಎಂಬ ನಿಯಮ ಕೈಬಿಡಬೇಕು. ಕೋಚನಹಳ್ಳಿ ಗ್ರಾಮದ ರೈತರಿಗಾಗಿರುವ ಅನ್ಯಾಯ ಸರಿಪಡಿಸಬೇಕು' ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಜಿಲ್ಲಾ ಪಂಚಾಯಿತ್ ಸಭಾಂಗಣಕ್ಕೆ ಆಗಮಿಸುತ್ತಿದ್ದಂತೆ ಮನವಿ ಪತ್ರ ಸಲ್ಲಿಸಿದರು. ಈ ವೇಳೆ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಹೊಸೂರು ಕುಮಾರ್, ನೇತ್ರಾವತಿ, ಆನಂದೂರು ಪ್ರಭಾಕರ್, ಮಂಡಕಳ್ಳಿ ಮಹೇಶ್, ಪಿ.ಮರಂಕಯ್ಯ, ನಾಗನಹಳ್ಳಿ ವಿಜೇಂದ್ರ, ಸಾಲುಂಡಿ ಬಸವರಾಜ್ ಉಪಸ್ಥಿತರಿದ್ದರು.

ದಸರಾ ಯುವ ಸಂಭ್ರಮ; ವೀರಯೋಧರು, ಅನ್ನದಾತರು, ಮಹಿಳೆಯರ ಪಾತ್ರ ಅನಾವರಣ



ಅರ್ಜುನ ಆನೆ ಸ್ಮರಿಸಿದ ಜೆಎಸ್‌ಎಸ್ ಮಹಿಳಾ ಕಾಲೇಜು ತಂಡ

ವಿವಿಧ ಕಾಲೇಜು ವಿದ್ಯಾರ್ಥಿನಿಯರ ಮನೋಜ್ಞ ಪ್ರತಿಭೆ ಪ್ರದರ್ಶನ



ಯುವ ಸಂಭ್ರಮದಲ್ಲಿ ಒಗ್ಗಟ್ಟಿನ ಪ್ರದರ್ಶನ ನೀಡಿದ ಮಹಿಳಾ ಸಾಧಕರು

ಮೈಸೂರು, ಸೆ.27(ಎಂಕೆ)– ಯುವ ಸಂಭ್ರಮದಲ್ಲಿ ಮಹಿಳಾ ಸಂಭ್ರಮದ ಝೇಂಕಾರ... ಅಮೋಘ ನೃತ್ಯ ಸಂಯೋಜನೆ ಮೂಲಕ ವಾತ್ಸಲ್ಯ ಮೂರ್ತಿ ಹೆಣ್ಣಿನ ಅಂತಃಕರಣ ಅನಾವರಣ...!

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮೈಸೂರು ವಿವಿ ಮಾನಸ ಗಂಗೋತ್ರಿ ಬಯಲು ರಂಗಮಂದಿರ ಸಾಂಸ್ಕೃತಿಕ ವೇದಿಕೆಯಲ್ಲಿ ನಡೆಯುತ್ತಿರುವ ದಸರಾ ಯುವ ಸಂಭ್ರಮದಲ್ಲಿ ಶುಕ್ರವಾರ ಮಹಿಳಾ ಸಂಭ್ರಮವೇ ಮನೆ ಮಾಡಿತ್ತು. ನಿರೂಪಣೆ, ಅಭಿನಂದನೆ, ನೃತ್ಯ ಪ್ರದರ್ಶನ ಎಲ್ಲವನ್ನು ಮನೋಜ್ಞವಾಗಿ ನಿರ್ವಹಿಸಿದ ಮಹಿಳಾ ಮಣಿಗಳು ನಾರಿ ಶಕ್ತಿ ಪ್ರದರ್ಶಿಸಿದರು.

40ಕ್ಕೂ ಹೆಚ್ಚು ವಿವಿಧ ಕಾಲೇಜಿನ ಮಹಿಳಾ ತಂಡಗಳು ಹಿನ್ನಲೆ ಹಾಡಿಗೆ ಅನುಗುಣವಾಗಿ ಮಹಿಳಾ ಸಬಲೀಕರಣದ ಜೊತೆಗೆ ನಾಡು–ನುಡಿಯ ಕುರಿತು ರಮಣಿಯ ದೃಶ್ಯಕಾವ್ಯಗಳನ್ನೊಳಗೊಂಡ ಆತ್ಯಾಕರ್ಷಕ ನೃತ್ಯ ರೂಪಕಗಳನ್ನು ಸೊಗಸಾಗಿ ಪ್ರಸ್ತುತಪಡಿಸುವುದರೊಂದಿಗೆ ಯುವ ಸಂಭ್ರಮ ವೇದಿಕೆಯಲ್ಲಿ ಕಿಕ್ಕಿರಿದು ತುಂಬಿದ್ದ ಜನಸ್ತೋಮಕ್ಕೆ ರಸದೌತಣ ನೀಡಿದರು.

ಮೈಸೂರಿನ ಪೀಪಲ್ಸ್ ಪಾರ್ಕ್‌ನ ಬಾಲಕಿಯರ ಪದವಿಪೂರ್ವ ಕಾಲೇಜು, ಜೆಎಸ್‌ಎಸ್ ಪದವಿಪೂರ್ವ ಕಾಲೇಜು, ಟೆರಿಷಿಯನ್ ಕಾಲೇಜು ಹಾಗೂ ಹುಣಸೂರಿನ ಬಾಲಕಿಯರ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿಯರು ರಾಷ್ಟ್ರೀಯ ಭಾವೈಕ್ಯತೆಯೊಂದಿಗೆ ಸಮ ಸಮಾಜ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ ಮತ್ತು ಅವರ ಅಸ್ತಿತ್ವದ ಕುರಿತು ಬೆಳಕು ಚೆಲ್ಲಿದರು.

ಮಹಿಳಾ ಸಾಧಕರಿಗೆ ಸನ್ಮಾನ....

ಮಹಿಳಾ ವಿಶೇಷತೆಯಿಂದ ಕೂಡಿದ್ದ ಯುವ ಸಂಭ್ರಮ ವೇದಿಕೆ ಮಹಿಳಾ ಸಾಧಕರನ್ನು ಸನ್ಮಾನಿಸಲಾಯಿತು. ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ.ನಾಗಲಕ್ಷ್ಮಿ ಚೌಧರಿ, ಗ್ಯಾರಂಟಿ ಯೋಜನೆ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಪರ್ವತಾರೋಹಿಣಿ ಡಾ.ಉಷಾಹೆಗಡೆ, ಡಿಸೈನರ್ ಪಾಲಶ್ ಬಿದ್ದಪ್ಪಹಾಗೂ ಅಂತಾರಾಷ್ಟ್ರೀಯ ಯೋಗಪಟು ಖುಷಿ ಅವರನ್ನು ಅತ್ಯಂತ ಆತ್ಮೀಯವಾಗಿ ಅಭಿನಂದಿಸಲಾಯಿತು.

ಕೃಷ್ಣಮೂರ್ತಿಪುರಂನ ಎಂಎಂಕೆ ಮತ್ತು ಎಸ್‌ಡಿಎಂ ಬಾಲಕಿಯರ ಪದವಿ ಪೂರ್ವ ಕಾಲೇಜು ಹಾಗೂ ದೇವರಾಜ ಮೊಹಲ್ಲಾದ ದೇವರಾಜ ಬಾಲಕಿಯರ ಸರ್ಕಾರಿ ಸ್ವತಂತ್ರ ಪದವಿಪೂರ್ವ ಕಾಲೇಜು ತಂಡ ಜೈ ಜವಾನ್ ಜೈ ಕಿಸಾನ್ ಘೋಷಣೆಯೊಂದಿಗೆ ರೈತರನ್ನು ಸ್ಮರಿಸಿದರೆ, ಮದ್ದೂರಿನ ಮಹಿಳಾ ಸರ್ಕಾರಿ ಕಾಲೇಜು ವಿದ್ಯಾರ್ಥಿನಿಯರು ದೇಶ ಭಕ್ತಿಯ ಜೊತೆಗೆ ರಾಜಶ್ರೀ ನಾಲ್ವಡಿ ಅವರ ಕೊಡುಗೆ ಸ್ಮರಿಸಿದರೆ, ಮೈಸೂರಿನ ವಾಣಿ ವಿಲಾಸ ಪದವಿ ಪೂರ್ವ ಕಾಲೇಜು ಮಕ್ಕಳು ಮೈಸೂರು ದಸರಾ ಪರಂಪರೆಯನ್ನು ಅನಾವರಣಗೊಳಿಸಿದರು.

ಹಾಗೆಯೇ ಚಾಮರಾಜನಗರದ ಸರ್ಕಾರಿ ಪ್ರಥಮದರ್ಜೆ ಕಾಲೇಜು ತಂಡ ವಿದ್ಯಾರ್ಥಿನಿಯರು ಸಂವಿಧಾನ ಕುರಿತು ನೀಡಿದ ಅಮೋಘ ನೃತ್ಯ ಪ್ರದರ್ಶನ ಅಪಾರ ಮೆಚ್ಚುಗೆ ಪಡೆಯಿತು.

ಅರ್ಜುನ ಆನೆ ನೆನಪು: ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜು ವಿದ್ಯಾರ್ಥಿನಿಯರು ಅಂಬಾರಿ ಆನೆ ಅರ್ಜುನನ ಸ್ಮರಣೆಯೊಂದಿಗೆ ಅಂಬಾರಿ ಆನೆ ಹೊತ್ತು ದಸರಾ ಮಹೋತ್ಸವಕ್ಕೆ ನೀಡಿದ ಕೊಡುಗೆಯನ್ನು ಮೆಲುಕು ಹಾಕಿದರು. ಹಾಗೆಯೇ ಟೆರಿಷಿಯನ್ ಕಾಲೇಜು ವಿದ್ಯಾರ್ಥಿನಿಯರು ಮನಮೋಹಕ ನವಿಲು ನೃತ್ಯದ ಮೂಲಕ ಯುವ ಸಮೂಹದ ಹೃನ್ಮನ ತಣಿಸಿದರು.

> ಶಿಕ್ಷಣವು ನಿಮಗೆ ಗೊತ್ತಿಲ್ಲದೇ ನಿಮ್ಮ ಭವಿಷ್ಯವನ್ನು ರೂಪಿಸುತ್ತದೆ. ಹುಟ್ಟಿದ ಮೇಲೆ ಸಾಧಿಸಬೇಕು. ಅಂಬೇಡ್ಕರ್ ಅವರ ಮಕ್ಕಳು ಹೋರಾಡಬೇಕು. ಮುಂದೆ ಇಟ್ಟ ಹೆಜ್ಜೆಯಿಂದ ಹಿಂದೆ ಸರಿಯಬೇಡಿ. ಕಷ್ಟ ಎದುರಾದಾಗ ಹಿಂಜರಿಯದೆ ಧೈರ್ಯದಿಂದ ಎದುರಿಸಿ.
> - ಡಾ.ನಾಗಲಕ್ಷ್ಮಿ ಚೌಧರಿ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ

ರಾಧಾ–ಕೃಷ್ಣ ಪ್ರೇಮ ಕಾವ್ಯ: ಪಿರಿಯಾಪಟ್ಟಣದ ಸರ್ಕಾರಿ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಯ ರಾಧಾ–ಕೃಷ್ಣರ ಪ್ರೇಮ ಕಾವ್ಯವನ್ನು ಅತ್ಯಂತ ರಮಣೀಯವಾಗಿ ಪ್ರಸ್ತುತಪಡಿಸುವ ಮೂಲಕ ಶೃಂಗಾರ ಲೋಕ ಸೃಷ್ಟಿಸಿದರು. ಹಾಗೆಯೇ ಬೆಂಗಳೂರಿನ ಶ್ರೀ ವಿನಾಯಕ ಮಹಿಳಾ ಪದವಿಪೂರ್ವ ಕಾಲೇಜು ತಂಡ ಮಹಾಕಾಳಿ ನೃತ್ಯದ ಮೂಲಕ ದೇವಿಯ ದರ್ಶನ ಮಾಡಿಸಿದರೆ, ನಂಜನಗೂಡು ಬಾಲಕಿಯರ ಪದವಿ ಪೂರ್ವ ಕಾಲೇಜು ತಂಡ ಶಿವತಾಂಡವ ನೃತ್ಯ ಪ್ರದರ್ಶನ ಮೂಲಕ ಶಿಳ್ಳೆ–ಚಪ್ಪಾಳೆಗಳ ಸುರಿಮಳೆಗೆ ಪಾತ್ರರಾದರು.



ಜೆಎಸ್‌ಎಸ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಯರ ಮಹಾಕಾಳಿ ನೃತ್ಯ

ವಿಶ್ವಕರ್ಮ ಜಯಂತ್ಯೋತ್ಸವ



ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ಕಚೇರಿಯಲ್ಲಿ ವಿಶ್ವಕರ್ಮ ಜಯಂತೋತ್ಸವ ಹಾಗೂ ಪೂಜಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ವೇದಿಕೆ ಅಧ್ಯಕ್ಷ ಕೆಂಡಗಣ್ಣ ವಿಶ್ವಕರ್ಮ, ಕಾರ್ಯದರ್ಶಿ ಸಿದ್ದರಾಜು, ಸಂಚಾಲಕರಾದ ಶ್ರೀ ಲಕ್ಷ್ಮಿ, ಖಜಾಂಚಿ ರಾಜು, ಪದಾಧಿಕಾರಿಗಳಾದ ಮಹೇಶ್, ಸಿದ್ದೇಶ್ ಮಂಜು, ಮುಖಂಡ ಶಿವಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಒಂಟಿಕೊಪ್ಪಲು ಮದನ್ ಮಹದೇಶ್‌ಗೆ 'ಆದರ್ಶ ಪುರುಷ ಪ್ರಶಸ್ತಿ'



ಮೈಸೂರು, ಸೆ.27– ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ಕೊಡಮಾಡುವ 'ಆದರ್ಶ ಪುರುಷ ಪ್ರಶಸ್ತಿ'ಗೆ ಮೈಸೂರು ಒಂಟಿಕೊಪ್ಪಲಿನ ಮದನ್ ಮಹದೇಶ್ ಆಯ್ಕೆಯಾಗಿದ್ದಾರೆ. ಮದನ್ ಅವರ ಸಮಾಜಸೇವೆ ಪರಿಗಣಿಸಿ ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ಇವರೊಂದಿಗೆ ಹಲವು ಪುರುಷ ಸಾಧಕರಿಗೆ 'ಆದರ್ಶ ಪುರುಷ ಪ್ರಶಸ್ತಿ' ಹಾಗೂ 'ಸೇವಾ ಭೂಷಣ ಪ್ರಶಸ್ತಿ' ಹಾಗೂ ಮಹಿಳಾ ಸಾಧಕರಿಯರಿಗೆ 'ಶ್ರೀಮತಿ ಯಶೋಧರಮ್ಮ ದಾಸಪ್ಪ ಪ್ರಶಸ್ತಿ'ಯನ್ನು ಸೆ.28ರಂದು ಕಿರುರಂಗಮಂದಿರದಲ್ಲಿ ನಡೆಯಲಿರುವ ವೇದಿಕೆಯ 13ನೇ ವಾರ್ಷಿಕೋತ್ಸವ ಹಾಗೂ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹಿಂದುಳಿದ ವರ್ಗದವರಿಗೆ ಮೀಸಲಾತಿ ಕಲ್ಪಿಸಿದ 105ನೇ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಾಗುವುದು ಎಂದು ವೇದಿಕೆ ಸಂಸ್ಥಾಪಕ ಅಧ್ಯಕ್ಷೆ ಹೆಚ್.ಎಲ್.ಯಮುನಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರಮನೆ ಆವರಣದಲ್ಲಿ ವಿಶ್ವ ಪ್ರವಾಸೋದ್ಯಮ ದಿನ ಉದ್ಘಾಟನೆ

ಮೈಸೂರು, ಸೆ. 27(ಆರ್‌ಕೆ)– ಮೈಸೂರು ಅರಮನೆ ಆವರಣದಲ್ಲಿ ಇಂದು ಆಯೋಜಿಸಿದ್ದ ವಿಶ್ವ ಪ್ರವಾಸೋದ್ಯಮ ದಿನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.

ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ ವತಿಯಿಂದ ಆಯೋಜಿಸಿದ್ದ 'ಪ್ರವಾಸೋದ್ಯಮ ಮತ್ತು ಶಾಂತಿ' ಘೋಷವಾಕ್ಯದೊಂದಿಗೆ ಮೆರವಣಿಗೆಗೆ ಬಾವುಟ ತೋರುವ ಮೂಲಕ ಮೆರವಣಿಗೆಗೆ ಮುಖ್ಯಮಂತ್ರಿಗಳು ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ವಿಶ್ವಸಂಸ್ಥೆಯು 1980ರಲ್ಲಿ ಈ ದಿನವನ್ನು ವಿಶ್ವ ಪ್ರವಾಸೋದ್ಯಮ ದಿನವನ್ನಾಗಿ ಆಚರಿಸಲು ಪ್ರಕಟಿಸಿದ ಬಳಿಕ ನಮ್ಮ ದೇಶದಲ್ಲೂ ನಿರಂತರವಾಗಿ ಆಚರಿಸುತ್ತಾ ಬಂದಿದ್ದೇವೆ. ಮೈಸೂರಿನತ್ತ ಪ್ರವಾಸಿಗರನ್ನು ಸೆಳೆಯಲು ಈ ಕಾರ್ಯಕ್ರಮ ಪ್ರಮುಖ ಪಾತ್ರ ವಹಿಸಲಿದೆ ಎಂದರು.



ಪ್ರವಾಸೋದ್ಯಮ ಜಾಗೃತಿ ಮೂಡಿಸುವ ಮೆರವಣಿಗೆಯು, ಅರಮನೆಯ ಬಲರಾಮ ದ್ವಾರ, ಕೆಆರ್ ಸರ್ಕಲ್, ಸಯ್ಯಾಜಿರಾವ್ ರಸ್ತೆ ಬಂಬೂ ಬಜಾರ್ ಮಾರ್ಗವಾಗಿ ಹೈವೇ ಸರ್ಕಲ್ ಬಳಿಯಿಂದ ವಾಪಸ್ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದ ಬಳಿ ಅಂತ್ಯಗೊಂಡಿತು.

ಜಂಬೂ ಸವಾರಿ ಆನೆಗಳು, ನಾದಸ್ವರ, ಡೊಳ್ಳು ಕುಣಿತ, ಕಂಸಾಳೆ, ಗಾರುಡಿ ಗೊಂಬೆ, ಚಂಡೆ, ಕೊಡವ ಕುಣಿತ, ಟಿಬೆಟಿಯನ್ ವಾದ್ಯ, ಕಳಸ ಹೊತ್ತ ಮಹಿಳೆಯರು, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯ, ಹಿಂದೂ ಕೇರಳ ಸಮಾಜ, ಪದ್ಮಶ್ರೀ ಜೈನ ಮಹಿಳಾ ಸಮಾಜ, ಮಹಾಜನ ಸ್ನಾತಕೋತ್ತರ ಕಾಲೇಜಿನ ಪ್ರವಾಸೋದ್ಯಮ ವಿಭಾಗ, ಸೆಂಟ್ ಫಿಲೋಮಿನಾ, ವಿದ್ಯಾ ವಿಕಾಸ ಇನ್‌ಸ್ಟಿಟ್ಯೂಟ್ ಆಫ್ ಟೂರಿಸಂ, ಪ್ರವಾಸಿ ಮಾರ್ಗದರ್ಶಿಗಳು, ಅಶ್ವದಳ, ಕೆಎಸ್‌ಟಿಡಿಸಿ ಅಂಬಾರಿ ವಾಹನ, ಟಾಂಗಾಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು.

ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪಶು ಸಂಗೋಪನಾ ಸಚಿವ ಕೆ. ವೆಂಕಟೇಶ್, ಶಾಸಕರಾದ ಜಿ.ಟಿ. ದೇವೇಗೌಡ, ತನ್ವೀರ್ ಸೇಠ್, ಡಿ.ರವಿಶಂಕರ್, ಅನಿಲ್ ಚಿಕ್ಕಮಾದು, ಕೆ. ಹರೀಶ್‌ಗೌಡ, ವಿಧಾನಪರಿಷತ್ ಸದಸ್ಯರಾದ ಡಾ. ಯತೀಂದ್ರ ಸಿದ್ದರಾಮಯ್ಯ, ಡಾ. ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರನಾಥ, ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಡಾ. ಕೆ.ವಿ. ರಾಜೇಂದ್ರ, ಜಂಟಿ ನಿರ್ದೇಶಕಿ ಎಂ.ಕೆ. ಸವಿತಾ, ಮೈಸೂರು ಟ್ರಾವೆಲ್ ಅಸೋಸಿಯೇಷನ್ ಅಧ್ಯಕ್ಷ ಸಿ.ಎ. ಜಯಕುಮಾರ್, ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ. ಹೆಗ್ಡೆ, ದತ್ತಿ ಅಧ್ಯಕ್ಷ ರವಿಶಾಸ್ತ್ರಿ, ಮೈಸೂರು ಸಂಘ–ಸಂಸ್ಥೆಗಳ ಪ್ರಮುಖರು ಬಿಳಿ ಶರ್ಟ್, ಪಂಚೆ, ಶಲ್ಯ ಸಾಂಪ್ರದಾಯಿಕ ಉಡುಗೆ ತೊಟ್ಟು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ದೇಶ - ವಿದೇಶ

ಜಯ ದಕ್ಕುವವರೆಗೂ ಹಿಜ್ಬುಲ್ಲಾ ವಿರುದ್ಧದ ಹೋರಾಟದ ಶಪಥ

ಅಮೇರಿಕಾ: ಲೆಬನಾನ್‌ನಲ್ಲಿ ಕದನ ವಿರಾಮ ಘೋಷಿಸುವ ಅಮೆರಿಕಾ ಪ್ರಸ್ತಾವನೆ, ಸಲಹೆಗಳನ್ನು ಇಸ್ರೇಲ್ ತಿರಸ್ಕರಿಸಿದ್ದು, ಹಿಜ್ಬುಲ್ಲಾ ಉಗ್ರ ಸಂಘಟನೆ ವಿರುದ್ಧ ಜಯ ಗಳಿಸುವವರೆಗೂ ಹೋರಾಡುವ ಶಪಥ ಮಾಡಿದೆ.



ಲೆಬನಾನ್ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇರಾನ್ ಬೆಂಬಲಿತ ಹಿಜ್ಬುಲ್ಲಾ ಭದ್ರಕೋಟೆಗಳ ಮೇಲೆ ಇಸ್ರೇಲ್ ಬಾಂಬ್ ದಾಳಿ ನಡೆಸಿ ಈ ವಾರ ನೂರಾರು ಜನರನ್ನು ಕೊಂದಿದೆ. ಆದರೆ ಉಗ್ರಾಮಿ ಗುಂಪು ರಾಕೆಟ್ ಬ್ಯಾರೇಜ್‌ಗಳಿಂದ ಪ್ರತೀಕಾರಕ್ಕೆ ಮುಂದಾಗಿದೆ.

ಉತ್ತರದಲ್ಲಿ ಯಾವುದೇ ಕದನ ವಿರಾಮ ಇರುವುದಿಲ್ಲ. ವಿಜಯದವರೆಗೆ ಮತ್ತು ಉತ್ತರದ ನಿವಾಸಿಗಳು ತಮ್ಮ ಮನೆಗಳಿಗೆ ಸುರಕ್ಷಿತವಾಗಿ ಹಿಂದಿರುಗುವವರೆಗೆ ನಾವು ನಮ್ಮೆಲ್ಲ ಶಕ್ತಿಯೊಂದಿಗೆ ಹಿಜ್ಬುಲ್ಲಾ ಭಯೋತ್ಪಾದಕ ಸಂಘಟನೆಯ ವಿರುದ್ಧ ಹೋರಾಡುವುದನ್ನು ಮುಂದುವರಿಸುತ್ತೇವೆ ಎಂದು ವಿದೇಶಾಂಗ ಸಚಿವ ಇಸ್ರೇಲ್ ಕಾಟ್ಜ್ ಟ್ವಿಟರ್‌ನಲ್ಲಿ ತಿಳಿಸಿದ್ದಾರೆ.

ಶಾಲೆಗೆ ಯಶಸು ಸಿಗಲೆಂದು 2ನೇ ತರಗತಿ ಬಾಲಕನ ಬಲಿ ಕೊಟ್ಟ ಶಿಕ್ಷಕರು!


ಹತ್ರಾಸ್(ಉತ್ತರ ಪ್ರದೇಶ): ಮಕ್ಕಳಲ್ಲಿ ವೈಚಾರಿಕತೆ ಬಿತ್ತಬೇಕಾದ ಶಾಲೆಗಳೇ ಮೂಢನಂಬಿಕೆಯನ್ನು ಆಚರಿಸುವ ಮೂಲಕ ವಿದ್ಯಾರ್ಥಿಯ ಪ್ರಾಣ ತೆಗೆದಿರುವ ಆಘಾತಕಾರಿ ಘಟನೆ ಉತ್ತರ ಪ್ರದೇಶದಲ್ಲಿ ನಡೆದಿದೆ. ಶಾಲೆಗೆ ದೊಡ್ಡ ಹೆಸರು ಬರಬೇಕೆಂದು ಮಾಟ–ಮಂತ್ರ ಮಾಡಿಸಿದ್ದ ಶಾಲೆಯ ನಿರ್ದೇಶಕ ಹಾಗೂ ಶಿಕ್ಷಕರು 2ನೇ ತರಗತಿ ಬಾಲಕನನ್ನು ನರಬಲಿ ಕೊಟ್ಟಿದ್ದಾರೆ.

ಹತ್ರಾಸ್‌ನಲ್ಲಿರುವ ಶಾಲೆಗೆ ಯಶಸ್ಸು ಮತ್ತು ಖ್ಯಾತಿ ಬರಲೆಂದು ವಾಮಾಚಾರ ಆಚರಣೆಯ ಭಾಗವಾಗಿ ನರಬಲಿ ನೀಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಡಿಎಲ್ ಪಬ್ಲಿಕ್ ಶಾಲೆಯ ನಿರ್ದೇಶಕ ದಿನೇಶ್ ಬಾಘೆಲ್, ಅವರ ತಂದೆ ಜಶೋಧನ್ ಸಿಂಗ್ ಮತ್ತು ಮೂವರು ಶಿಕ್ಷಕರಾದ ಲಕ್ಷ್ಮಣ್ ಸಿಂಗ್, ವೀರಪಾಲ್ ಮತ್ತು ರಾಮಪ್ರಕಾಶ್ ಸೋಲಂಕಿ ಸೇರಿದಂತೆ ಐವರನ್ನು ಸಹ ಪೊಲೀಸರು ಬಂಧಿಸಿದ್ದಾರೆ.

ಡಿಎಲ್ ಪಬ್ಲಿಕ್ ಶಾಲೆಯಲ್ಲಿ ಸುಮಾರು 600 ವಿದ್ಯಾರ್ಥಿಗಳಿದ್ದು, ಬಾಲಕ ಹತ್ಯೆಯಾದ ಹಾಸ್ಟೆಲ್‌ನಲ್ಲಿ 1 ರಿಂದ 5ನೇ ತರಗತಿಯ ಮಕ್ಕಳಿದ್ದಾರೆ. ಮೃತ ವಿದ್ಯಾರ್ಥಿ ದೆಹಲಿಯ ಖಾಸಗಿ ಸಂಸ್ಥೆಯೊಂದರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಕ್ರಿಶನ್ ಕುಶ್ವಾಹಾ ಅವರ ಪುತ್ರ ಎಂದು ತಿಳಿದು ಬಂದಿದೆ.

ಜಪಾನ್‌ನ ನೂತನ ಪ್ರಧಾನಿಯಾಗಿ ಶಿಗೆರು ಇಶಿಬಾ ಆಯ್ಕೆ

ಟೋಕಿಯೋ: ಮಾಜಿ ರಕ್ಷಣಾ ಸಚಿವ ಶಿಗೆರು ಇಶಿಬಾ ಅವರು ಜಪಾನ್‌ನ ಮುಂದಿನ ಪ್ರಧಾನಿಯಾಗಿ ಆಯ್ಕೆಯಾಗಿದ್ದಾರೆ. ಫ್ಯೂಮಿಯೊ ಕಿಶಿಡಾ ಅವರ ಉತ್ತರಾಧಿಕಾರಿಯಾಗಲು ಒಂಭತ್ತು ಅಭ್ಯರ್ಥಿಗಳ ನಡುವೆ ನಡೆದ ಪೈಪೋಟಿಯಲ್ಲಿ ಶಿಗೆರು ಗೆಲುವು ಸಾಧಿಸಿದ್ದಾರೆ. ಅಕ್ಟೋಬರ್ 1 ರಂದು ಇಶಿಬಾ ಜಪಾನ್‌ನ 102 ನೇ ಪ್ರಧಾನಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಾರೆ. ಅದೇ ದಿನ ಫ್ಯೂಮಿಯೊ ಕಿಶಿಡಾ ಅಧಿಕಾರದಿಂದ ಕೆಳಗಿಳಿಯಲಿದ್ದಾರೆ.



ನಾನು ಜನರನ್ನು ನಂಬುತ್ತೇನೆ, ಧೈರ್ಯ ಮತ್ತು ಪ್ರಾಮಾಣಿಕತೆಯಿಂದ ಸತ್ಯವನ್ನು ಮಾತನಾಡುತ್ತೇನೆ. ಈ ದೇಶವನ್ನು ಸುರಕ್ಷಿತ ಸ್ಥಳವನ್ನಾಗಿ ಮಾಡಲು ನಾನು ನನ್ನ ಕೈಲಾದಷ್ಟು ಪ್ರಯತ್ನಿಸುತ್ತೇನೆ ಎಂದು ಇಶಿಬಾ ಹೇಳಿದ್ದರು. ಪ್ರಸ್ತುತ ಪ್ರಧಾನಿ ಫ್ಯೂಮಿಯೊ ಕಿಶಿಡಾ ಅವರು ಭ್ರಷ್ಟಾಚಾರ ಆರೋಪ ಎದುರಿಸುತ್ತಿದ್ದಾರೆ. ಸಂಸತ್ತಿನ ಅನುಮೋದನೆಯ ನಂತರ ಹೊಸ ನಾಯಕ ಹೊಸ ಸಚಿವ ಸಂಪುಟವನ್ನು ರಚಿಸುತ್ತಾರೆ. ಕೆಳಮನೆಯ ಪ್ರಸ್ತುತ ಅಧಿಕಾರಾವಧಿಯು ಅಕ್ಟೋಬರ್ 2025 ರವರೆಗೆ ಇರುತ್ತದೆ. ಜಪಾನ್‌ನ ಸಾಂವಿಧಾನಿಕ ಡೆಮಾಕ್ರಟಿಕ್ ಪಕ್ಷವು ಪ್ರಮುಖ ವಿರೋಧ ಪಕ್ಷವಾಗಿದೆ.

ಬಸವಣ್ಣನಿಗೆ ಗೌರವ ನಮನ ಸಲ್ಲಿಸಲು ಬ್ರಿಟಿಷ್ ಪ್ರಧಾನಿಗೆ ಆಹ್ವಾನ

ನವದೆಹಲಿ: 12ನೇ ಶತಮಾನದ ಕವಿ–ಸಂತ ಬಸವಣ್ಣನನ್ನು ಗೌರವಿಸಲು ಬ್ರಿಟಿಷ್ ಭಾರತೀಯ ಸಮುದಾಯದಿಂದ ಯುಕೆ ಪ್ರಧಾನ ಮಂತ್ರಿ ಕೀರ್ ಸ್ಟಾರ್ಮರ್ ಅವರನ್ನು ಆಹ್ವಾನಿಸಲಾಗಿದೆ. ಬ್ರಿಟಿಷ್ ಸಂಸತ್ತಿನ ಬಳಿ ಬಸವಣ್ಣನ ಪ್ರತಿಮೆಯನ್ನು ನಿರ್ಮಿಸಲಾಗಿದೆ. ಲ್ಯಾಂಬೆತ್ ಬಸವೇಶ್ವರ ಪ್ರತಿಷ್ಠಾನದ ಪರವಾಗಿ ಡಾ. ನೀರಜ್ ಪಾಟೀಲ್ ಅವರು ನೀಡಿದ ಆಮಂತ್ರಣವು ಬಸವೇಶ್ವರರ ಸಾಮಾಜಿಕ ನ್ಯಾಯದ ಕೊಡುಗೆಗಳನ್ನು ಆಚರಿಸುವ ಗುರಿಯನ್ನು ಹೊಂದಿದೆ.



ಬ್ರಿಟಿಷ್ ಭಾರತೀಯ ಸಮುದಾಯ ಮತ್ತು ದಿ ಲ್ಯಾಂಬೆತ್ ಬಸವೇಶ್ವರ ಫೌಂಡೇಶನ್ ಪರವಾಗಿ ಇತ್ತೀಚೆಗೆ ಆಹ್ವಾನವನ್ನು ನೀಡಲಾಯಿತು. ಬ್ರಿಟಿಷ್ ಸಂಸತ್ತಿನ ಎದುರು ಭಗವಾನ್ ಬಸವೇಶ್ವರರ ಪ್ರತಿಮೆಯನ್ನು ಸ್ಥಾಪಿಸಲು ಅನುಕೂಲ ಮಾಡಿದ ಪ್ರತಿಷ್ಠಾನವು ಅವರ ಮೌಲ್ಯಗಳು ಮತ್ತು ಪರಂಪರೆಯನ್ನು ಸ್ಮರಿಸುವ ಗುರಿಯನ್ನು ಹೊಂದಿದೆ. ಯುಕೆಯಲ್ಲಿರುವ ಭಾರತೀಯ ಸಮುದಾಯಕ್ಕೆ ಬಹಳ ಪ್ರಾಮುಖ್ಯತೆಯನ್ನು ಹೊಂದಿರುವ ಈ ಬಸವಣ್ಣನ ಪ್ರತಿಮೆಯು 2013ರಲ್ಲಿ ಬ್ರಿಟಿಷ್ ಕ್ಯಾಬಿನೆಟ್‌ನಿಂದ ಪರಿಕಲ್ಪನಾ ಅನುಮೋದನೆಯನ್ನು ಪಡೆದ ಮೊದಲನೆಯ ಪ್ರತಿಮೆಯಾಗಿದೆ.

ಕೇರಳದಲ್ಲಿ ಎರಡನೇ ಮಂಕಿಪಾಕ್ಸ್ ಪ್ರಕರಣ ಪತ್ತೆ

ತಿರುವನಂತಪುರಂ: ಯುನೈಟೆಡ್ ಅರಬ್ ಎಮಿರೇಟ್ಸ್‌ನಿಂದ ಬಂದಿದ್ದ ಕೇರಳದ ಎರ್ನಾಕುಲಂನ 26 ವರ್ಷದ ಯುವಕನಿಗೆ ಶುಕ್ರವಾರ ಮಂಕಿಪಾಕ್ಸ್ ದೃಢಪಟ್ಟಿದೆ. ನಗರದ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಅವರ ರಕ್ತದ ಮಾದರಿಗಳನ್ನು ಅಲಪ್ಪುಳದಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿ ಲ್ಯಾಬ್‌ನಲ್ಲಿ ಪರೀಕ್ಷೆ ನಡೆಸಲಾಗಿದೆ. ಪುಣೆಯಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಯಲ್ಲಿ ಜೀನೋಮಿಕ್ ಸೀಕ್ವೆನ್ಸಿಂಗ್‌ಗಾಗಿ ಮಾದರಿಗಳನ್ನು ಕಳುಹಿಸಲಾಗಿದೆ.

ಈ ಹಿಂದೆ ಮಲಪ್ಪುರಂನ ಎಡವನ್ನಾ ಎಂಬ ಪ್ರದೇಶದ 38 ವರ್ಷದ ವ್ಯಕ್ತಿಗೆ ಸೆಪ್ಟೆಂಬರ್ 18 ರಂದು ಮಂಕಿಪಾಕ್ಸ್ ಕಂಡು ಬಂದಿತ್ತು. ನಂತರ ಅವರ ಸೋಂಕಿಗೆ ವೈರಸ್‌ನ ಕ್ಲೇಡ್ 1 ಬಿ ಸ್ಟ್ರೈನ್ ಕಾರಣ ಎಂದು ತಿಳಿದುಬಂತು. ಈ ಹಿನ್ನೆಲೆಯಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಪ್ರತ್ಯೇಕ ಸೌಲಭ್ಯಗಳನ್ನು ಸ್ಥಾಪಿಸಿ ತೀವ್ರ ಕಣ್ಗಾವಲು ಹೆಚ್ಚಿಸಲಾಗಿದೆ. ರಾಜ್ಯದಲ್ಲಿ ಮಂಕಿಪಾಕ್ಸ್ ತಡೆಗಟ್ಟುವಿಕೆ ಮತ್ತು ಪರಿಣಾಮಕಾರಿ ಚಿಕಿತ್ಸೆಗಾಗಿ ಮಾರ್ಗಸೂಚಿಗಳನ್ನು ನವೀಕರಿಸಲು ಆರೋಗ್ಯ ಇಲಾಖೆಯು ಮುಂದಾಗಿದೆ.

ಕನಿಷ್ಠ 10 ಸಾವಿರ ಸದಸ್ಯರನ್ನು ನೋಂದಾಯಿಸಿ

ಜೆಡಿಎಸ್ ಸದಸ್ಯತ್ವ ಅಭಿಯಾನದಲ್ಲಿ ಕೊಡಗು ಜಿಲ್ಲಾ ಉಸ್ತುವಾರಿ ಸಾ.ರಾ.ಮಹೇಶ್ ಸಲಹೆ



ಮಡಿಕೇರಿಯಲ್ಲಿ ನಡೆದ ಜೆಡಿಎಸ್ ಸದಸ್ಯತ್ವ ಅಭಿಯಾನದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿದರು.

> ಕೊಡಗು ಜಿಲ್ಲೆಯ 5 ತಾಲೂಕಿನ ಪಕ್ಷದ ಅಧ್ಯಕ್ಷರು ಮತ್ತು ಕಾರ್ಯಕರ್ತರನ್ನು ವಿಶ್ವಾಸಕ್ಕೆ ಪಡೆದುಕೊಂಡು ಜೆಡಿಎಸ್ ಜಿಲ್ಲಾಧ್ಯಕ್ಷರನ್ನು ನೇಮಕ ಮಾಡಲಾಗುವುದು. ಆಕಾಂಕ್ಷಿಗಳ ಪಟ್ಟಿಯನ್ನು ವರಿಷ್ಠರ ಗಮನಕ್ಕೆ ತರಲಾಗುವುದು. ಸದಸ್ಯತ್ವ ಅಭಿಯಾನ ಪೂರ್ಣಗೊಂಡ ಬಳಿಕ ಜಿಲ್ಲಾಧ್ಯಕ್ಷರ ಆಯ್ಕೆ ಮಾಡಲಾಗುವುದು.
> –ಸಾ.ರಾ.ಮಹೇಶ್, ಮಾಜಿ ಸಚಿವ.

ಮಡಿಕೇರಿ, ಸೆ.27–ಕೊಡಗು ಜಿಲ್ಲೆಯ ಎರಡೂ ವಿಧಾನಸಭೆ ಕ್ಷೇತ್ರಗಳಲ್ಲಿ ಜೆಡಿಎಸ್ ಕನಿಷ್ಠ 10 ಸಾವಿರ ಸದಸ್ಯರನ್ನು ನೋಂದಾಯಿಸುವ ಮೂಲಕ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಬೇಕು ಎಂದು ಜೆಡಿಎಸ್ ಸದಸ್ಯತ್ವ ಅಭಿಯಾನದ ಕೊಡಗು ಜಿಲ್ಲಾ ಉಸ್ತುವಾರಿ ಹಾಗೂ ಮಾಜಿ ಸಚಿವ ಸಾ.ರಾ.ಮಹೇಶ್ ಕಾರ್ಯಕರ್ತರಿಗೆ ಸಲಹೆ ನೀಡಿದರು.

ನಗರದ ಖಾಸಗಿ ಸಭಾಂಗಣದಲ್ಲಿ ಜೆಡಿಎಸ್ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕೊಡಗು ಜಿಲ್ಲೆ ಪ್ರಕೃತಿ ವಿಕೋಪಕ್ಕೆ ಸಿಲುಕಿದ ಸಂದರ್ಭ 6 ತಿಂಗಳಲ್ಲಿ 8 ಬಾರಿ ಜಿಲ್ಲೆಗೆ ಭೇಟಿ ನೀಡಿ, ಸಂತ್ರಸ್ತರ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದರು. ನೂರಾರು ಸಂತ್ರಸ್ತರಿಗೆ 9.80 ಲಕ್ಷ ರೂ.ಗಳಲ್ಲಿ ಸುಸಜ್ಜಿತ ಮನೆಗಳನ್ನು ನಿರ್ಮಿಸಿ ಕೊಡುವ ಮೂಲಕ ಕೊಡುಗೆ ನೀಡಿದ್ದರು. ಇದು ಜೆಡಿಎಸ್ ಹೆಗ್ಗಳಿಕೆಯೂ ಆಗಿದೆ ಎಂದರು.

ಇದೀಗ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯಾಗಿ ಎನ್‌ಡಿಎ ಒಕ್ಕೂಟದಲ್ಲಿ ಬೆರೆತಿವೆ. ಈ ಹಿನ್ನೆಲೆಯಲ್ಲಿ ಮುಂಬರುವ ಜಿಲ್ಲಾ, ತಾಲೂಕು ಪಂಚಾಯಿತಿ, ಪುರಸಭೆ, ಪಟ್ಟಣ ಪಂಚಾಯಿತಿ ಚುನಾವಣೆಗಳಲ್ಲಿ ಎನ್‌ಡಿಎ ಮೈತ್ರಿ ಕೂಟದ ಮೂಲಕ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗುವುದು. ಜೆಡಿಎಸ್ ಪ್ರಭಾವ ಇರುವ ಕಡೆಗಳಲ್ಲಿ ಪಕ್ಷದ ಸಮರ್ಥ ಕಾರ್ಯಕರ್ತರನ್ನು ಅಭ್ಯರ್ಥಿಯನ್ನಾಗಿ ಮಾಡಲಾಗುವುದು. ಆದ್ದರಿಂದ ಪಕ್ಷದ ನೋಂದಣಿ ಹೆಚ್ಚಿಸಬೇಕು. ಈ ದಿಸೆಯಲ್ಲಿ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ಶ್ರಮ ವಹಿಸಬೇಕು. ಎನ್‌ಡಿಎ ಮೈತ್ರಿ ಕೂಟದ ಮೂಲಕ ಮುಂಬರುವ ವಿಧಾನಸಭಾ ಚುನಾವಣೆಯನ್ನು ಎದುರಿಸಿದಲ್ಲಿ ಕೊಡಗಿನ ಎರಡೂ ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳೇ ಗೆಲುವು ಸಾಧಿಸುತ್ತಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜೆಡಿಎಸ್ ಕೋರ್ ಕಮಿಟಿ ಜಿಲ್ಲಾಧ್ಯಕ್ಷ ಸಿ.ಎಲ್.ವಿಶ್ವ ಮಾತನಾಡಿ, ಇದೀಗ ಸ್ಥಳೀಯ ಸಂಸ್ಥೆ ಚುನಾವಣೆ ಸಮಯವಾಗಿರುವ ಹಿನ್ನೆಲೆಯಲ್ಲಿ ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಟಿಕೆಟ್ ನೀಡುವಂತಾಗಬೇಕು. ಕುಶಾಲನಗರ ಪಪಂ ಚುನಾವಣೆ ಸಂದರ್ಭ ಕಾಂಗ್ರೆಸ್‌ಗೆ ಬೆಂಬಲ ನೀಡಿದ ಜೆಡಿಎಸ್ ಸದಸ್ಯರನ್ನು ಪಕ್ಷದಿಂದ ಅಮಾನತುಗೊಳಿಸಿ, ಸದಸ್ಯತ್ವವನ್ನು ರದ್ದುಗೊಳಿಸಬೇಕು. ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಎನ್‌ಡಿಎ ಮೈತ್ರಿ ಕೂಟದ ಮೂಲಕ ಚುನಾವಣೆ ಎದುರಿಸಿದರೆ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಇದೇ ಸಂದರ್ಭ ಪಕ್ಷ ಪ್ರಮುಖರು ಹಾಗೂ ಕಾರ್ಯಕರ್ತರು ಮಾತನಾಡಿ, ಜೆಡಿಎಸ್‌ಗೆ ನೂತನ ಜಿಲ್ಲಾಧ್ಯಕ್ಷರ ನೇಮಕ ಮಾಡಬೇಕು. ಈ ಕುರಿತು ಪಕ್ಷದ ವರಿಷ್ಠರ ಗಮನ ಸೆಳೆಯುವಂತೆ ಮಹೇಶ್ ಅವರನ್ನು ಆಗ್ರಹಿಸಿದರು. ಕಾರ್ಯಕ್ರಮದಲ್ಲಿ ಪಕ್ಷದ ಕೋರ್ ಕಮಿಟಿ ಪ್ರವೀಣ್, ಪ್ರಮುಖರಾದ ರವಿ ಕಿರಣ್, ಸಿ.ಎಸ್.ನಾಗರಾಜ್, ಕೋಟಿ ರಾಮಯ್ಯ, ಮಂಜುನಾಥ್, ಸುರೇಶ್, ವಿಠಲಗೌಡ, ಶ್ರೀನಿವಾಸ್, ಎಸ್‌ಟಿ ಘಟಕದ ಜಯಮ್ಮ ಉಪಸ್ಥಿತರಿದ್ದರು.

ಕರ್ನಾಟಕ ಹಾಕಿ ತಂಡಕ್ಕೆ ಕೊಡಗಿನ ಶ್ರಾವ್ಯ, ಶ್ರೀಷ್ಮಾ ಆಯ್ಕೆ



ಬಿ.ಡಿ.ಶ್ರಾವ್ಯ, ಶ್ರೀಷ್ಮಾ ಬೊಳ್ಳಮ್ಮ.

ನಾಪೋಕ್ಲು: ಜಾರ್ಖಂಡ್‌ನ ರಾಂಚಿಯಲ್ಲಿ ಸೆ.30ರಿಂದ ನಡೆಯುವ ಜೂನಿಯರ್ ರಾಷ್ಟ್ರೀಯ ಹಾಕಿ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕ ತಂಡದಿಂದ ಕೊಡಗಿನ ಬಿ.ಡಿ.ಶ್ರಾವ್ಯ ಹಾಗೂ ಪಟ್ಟಮಾಡ ಶ್ರೀಷ್ಮಾ ಬೊಳ್ಳಮ್ಮ ಪ್ರತಿನಿಧಿಸುತ್ತಿದ್ದಾರೆ. ನಾಪೋಕ್ಲು ಸಮೀಪದ ಕಕ್ಕಬೆ–ಕುಂಜಿಲ ಗ್ರಾಮದ ಬಿ.ಡಿ.ಶ್ರಾವ್ಯ ಗೋಲ್ ಕೀಪರ್ ಆಗಿ ಆಯ್ಕೆಯಾಗಿದ್ದು, ಈಕೆ ಮುಂಬೈ ಎನ್‌ಸಿಓಇ ತಂಡದಲ್ಲಿ ತರಬೇತಿ ಪಡೆಯುತ್ತಿದ್ದಾರೆ. ಈಕೆ ಕಕ್ಕಬೆ–ಕುಂಜಿಲ ಗ್ರಾಮದ ದೇವಯ್ಯ ಚಿತ್ರ ದಂಪತಿ ಪುತ್ರಿ, ಬೆಂಗೂರು ಗ್ರಾಮದ ಪಟ್ಟಮಾಡ ಶ್ರೀಷ್ಮಾ ಬೊಳ್ಳಮ್ಮ ಕರ್ನಾಟಕ ತಂಡದಿಂದ ಪ್ರತಿನಿಧಿಸುತ್ತಿದ್ದು, ಈಕೆ ಕೊಡಗಿನ ಬೆಂಗೂರಿನ ಪಟ್ಟಮಾಡ ರವಿನ್ ಮುತ್ತಣ್ಣ ಹಾಗೂ ಮಿಲನ್ ಮುತ್ತಣ್ಣ ಅವರ ಪುತ್ರಿ. ಶ್ರೀಷ್ಮಾ ಬೊಳ್ಳಮ್ಮ ಬೆಂಗಳೂರಿನ ಸಂತಜೋಸೆಫರ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ವ್ಯಾಸಂಗ ಮಾಡುತ್ತಿದ್ದಾರೆ.

ಕ್ರೇಟ್‌ನಲ್ಲಿದ್ದ ಹಾಲಿನ ಪ್ಯಾಕೆಟ್‌ಗಳು ಕಳವು



ಮಡಿಕೇರಿ, ಸೆ.27–ಮಧ್ಯರಾತ್ರಿ ಅಂಗಡಿಯೊಂದರ ಮುಂಭಾಗದಲ್ಲಿರಿಸಿದ್ದ ಕ್ರೇಟ್‌ನಿಂದ ಹಾಲಿನ ಪ್ಯಾಕೆಟ್‌ಗಳನ್ನು ದ್ವಿಚಕ್ರ ವಾಹನದಲ್ಲಿ ಬಂದ ಮೂವರು ಯುವಕರು ಕದ್ದು ಪರಾರಿಯಾಗುತ್ತಿರುವ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಪೊನ್ನಂಪೇಟೆ ಶ್ರೀರಾಮಕೃಷ್ಣ ಸೇವಾ ಆಶ್ರಮ ಬಳಿಯ ಗ್ರೀನ್‌ಲ್ಯಾಂಡ್ ಪ್ರಾವಿಷನ್ ಸ್ಟೋರ್ ಮುಂಭಾಗದ ಕ್ರೇಟ್‌ಗಳಲ್ಲಿಟ್ಟಿದ್ದ ನಂದಿನಿ 10 ರಿಂದ 12 ಲೀಟರ್‌ಗೂ ಹೆಚ್ಚಿನ ಹಾಲಿನ ಪ್ಯಾಕೆಟ್‌ಗಳನ್ನು ಗುರುವಾರ ರಾತ್ರಿ 1.20ರಲ್ಲಿ ಸ್ಕೂಟಿಯಲ್ಲಿ ಬಂದ ಮೂವರು ಯುವಕರು ಕಳ್ಳತನ ಮಾಡಿ ಪರಾರಿಯಾಗಿದ್ದಾರೆ.

ಶುಕ್ರವಾರ ಬೆಳಗ್ಗೆ ಎಂದಿನಂತೆ ಅಂಗಡಿಗೆ ಬಂದ ಮಾಲೀಕ ಸಜೀರ್ ಹಾಲಿನ ಕ್ರೇಟ್ ಖಾಲಿಯಾಗಿರುವುದನ್ನು ಕಂಡು ದಂಗಾಗಿದ್ದಾರೆ. ಸಿಸಿ ಕ್ಯಾಮರಾ ಪರಿಶೀಲಿಸಿದಾಗ ಮೂವರು ಹಾಲನ್ನು ಕಳ್ಳತನ ಮಾಡಿರುವುದು ಗೊತ್ತಾಗಿದೆ.

ಕೆಲ ದಿನಗಳಿಂದ ಅರ್ಧ, ಒಂದು ಲೀಟರ್ ಹಾಲಿನ ಪ್ಯಾಕೆಟ್‌ಗಳು ಕಳ್ಳತನವಾಗುತ್ತಿತ್ತು. ಈ ಬಗ್ಗೆ ಅಷ್ಟಾಗಿ ಗಮನ ನೀಡಿರಲಿಲ್ಲ. ಆದರೆ, ಮೊನ್ನೆ ರಾತ್ರಿ ಕ್ರೇಟ್‌ನಲ್ಲಿ ಹಾಲಿನ ಪ್ಯಾಕೆಟ್‌ಗಳು ಕಡಿಮೆ ಇರುವುದನ್ನು ಗಮನಿಸಿ, ಸಿಸಿ ಕ್ಯಾಮರಾ ಪರಿಶೀಲಿಸಿದಾಗ ಹಾಲಿನ ಕಳ್ಳತನ ಮಾಡುತ್ತಿರುವುದು ಪತ್ತೆಯಾಗಿದೆ. ಬೇರೆ ಹಾಲಿನ ವಿತರಕರು ಎಚ್ಚರಿಕೆ ವಹಿಸಬೇಕೆಂದು ಅಂಗಡಿ ಮಾಲೀಕ ಸಜೀರ್ ಮನವಿ ಮಾಡಿದರು.

ರೋಟರಿಯಿಂದ ಮಕ್ಕಳ ಶಿಕ್ಷಣಕ್ಕೆ ಒತ್ತು



ವಿರಾಜಪೇಟೆ ರೋಟರಿ ಶಾಲಾ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಕ್ರಮ್ ದತ್ತ ಮಾತನಾಡಿದರು.

ವಿರಾಜಪೇಟೆ, ಸೆ.27–ರೋಟರಿ ಸಂಸ್ಥೆಯಿಂದ ಶಾಲೆಗಳಿಗೆ ಕುಡಿಯುವ ನೀರಿನ ಸೌಲಭ್ಯ ಹಾಗೂ ಅಂಗನವಾಡಿ ಮಕ್ಕಳ ಶಿಕ್ಷಣ ಮತ್ತು ಸೌಲಭ್ಯಕ್ಕೆ ಒತ್ತು ನೀಡಲಾಗುವುದು ಎಂದು ರೋಟರಿ ಜಿಲ್ಲಾ ಗವರ್ನರ್ ವಿಕ್ರಮ್ ದತ್ತ ಹೇಳಿದರು.

ಪಟ್ಟಣದ ರೋಟರಿ ಶಾಲಾ ಸಭಾಂಗಣದಲ್ಲಿ ಆಯೋಜಿಸಿದ್ದ ರೋಟರಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಂಧ್ಯಾ ಸುರಕ್ಷಾ ಯೋಜನೆಗಳನ್ನು ಗ್ರಾಮೀಣ ಪ್ರದೇಶದ ಜನರಿಗೆ ತಲುಪಿಸುವಂತ ಕೆಲಸ ಮಾಡಲಾಗುತ್ತಿದೆ. ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆ ಹಾಗೂ ದುಷ್ಚಟಗಳಿಂದ ದೂರವಿರಲು ಎಚ್ಚರ ವಹಿಸಬೇಕೆಂದು ಅರಿವು ಮೂಡಿಸಲಾಗುತ್ತಿದೆ ಎಂದರು.

ದಕ್ಷಿಣ ಕನ್ನಡ ಜಿಲ್ಲೆ, ಕೊಡಗು, ಮೈಸೂರು, ಚಾಮರಾಜನಗರ ಸೇರಿದಂತೆ 88 ರೋಟರಿ ಸಂಸ್ಥೆಯಲ್ಲಿ 3750 ಸದಸ್ಯರುಗಳಿದ್ದಾರೆ. ಉತ್ತಮ ಕೆಲಸಕ್ಕೆ ಶ್ರಮಿಸುತ್ತಿದ್ದಾರೆ. ಪ್ರತಿವರ್ಷ 9 ನೂತನ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಮಳೆ ನೀರು ಕೊಯ್ಲು, ಸೇವಾ ಮನೋಭಾವದಿಂದ ವ್ಹೀಲ್‌ಚೇರ್ ವಿತರಣೆ, ಅನಾರೋಗ್ಯ ಪೀಡಿತರ ಯೋಗ ಕ್ಷೇಮ ವಿಚಾರ ಸೇರಿದಂತೆ ಇನ್ನಿತರ ಅಭಿವೃದ್ಧಿ ಕಾರ್ಯ ನಡೆಸಲಾಗುತ್ತಿದೆ ಎಂದು ಹೇಳಿದರು.

ವಿರಾಜಪೇಟೆ ರೋಟರಿ ಅಧ್ಯಕ್ಷ ಪ್ರಣವ್ ಎಂ.ಚಿತ್ರಭಾನು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಹಾಯಕ ಗವರ್ನರ್ ದೇವಣಿರ ಕಿರಣ್, ಜೋನಲ್ ಲೈಪ್‌ನೆಟ್ ಡಾ.ಲವಿನ್ ಚಂಗಪ್ಪ, ರೋಟರಿ ಕಾರ್ಯದರ್ಶಿ ಬಿ.ಬಿ.ಮಾದಪ್ಪ ಹಾಜರಿದ್ದರು.

ನಾಗಮಂಗಲ ಗಲಭೆ ಪ್ರಕರಣ

ಬಂಧಿತ ಎಲ್ಲಾ 55 ಆರೋಪಿಗಳಿಗೂ ಜಾಮೀನು

ಸೋಮವಾರ ಜೈಲಿನಿಂದ ಬಿಡುಗಡೆ ಸಾಧ್ಯತೆ



ಸೆ.11 ರಂದು ಗುಂಪು ಘರ್ಷಣೆಯಿಂದ ಹೊತ್ತಿ ಉರಿದಿದ್ದ ನಾಗಮಂಗಲದ ದೃಶ್ಯ.

ಮಂಡ್ಯ, ಸೆ27– ನಾಗಮಂಗಲ ಕೋಮು ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿದ್ದ ಎಲ್ಲಾ 55 ಮಂದಿ ಆರೋಪಿಗಳಿಗೂ ಜಾಮೀನು ಮಂಜೂರಾಗಿದೆ.

ಮಂಡ್ಯದ ಒಂದನೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜಾಮೀನು ಮಂಜೂರು ಮಾಡಿದ್ದು, ಸೆ.11ರಂದು ಬಂಧನವಾಗಿದ್ದ 55 ಮಂದಿ ಆರೋಪಿಗಳನ್ನು ಸೆ.12ರಿಂದ ಮಂಡ್ಯ ನಗರದ ಕೇಂದ್ರ ಉಪ ಕಾರಾಗೃಹದಲ್ಲಿ ಇರಿಸಲಾಗಿತ್ತು.

ಶುಕ್ರವಾರ ನ್ಯಾಯಾಲಯ ಎಲ್ಲಾ ಆರೋಪಿಗಳಿಗೂ ಜಾಮೀನು ಮಂಜೂರು ಮಾಡಿದ್ದು, ನಾಳೆ ಶನಿವಾರ, ನಾಡಿದ್ದು ಭಾನುವಾರ ರಜೆ ಇರುವ ಕಾರಣ ಸೋಮವಾರ ಎಲ್ಲಾ ಆರೋಪಿಗಳು ಜೈಲಿನಿಂದ ಬಿಡುಗಡೆಯಾಗುವ ಸಾಧ್ಯತೆ ಇದೆ.

ಕಳೆದ ಸೆ.11ರಂದು ನಾಗಮಂಗಲದ ಬದರಿಕೊಪ್ಪಲು ಗ್ರಾಮದಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶಮೂರ್ತಿ ವಿಸರ್ಜನೆ ವೇಳೆ ಮೆರವಣಿಗೆ ಸಂದರ್ಭದಲ್ಲಿ ಎರಡು ಕೋಮುಗಳ ನಡುವೆ ಘರ್ಷಣೆ, ಹಿಂಸಾಚಾರ ಸಂಭವಿಸಿ, ಗಲಭೆಯುಂಟಾಗಿತ್ತು. ಗಲಭೆಯಲ್ಲಿ ನಾಗಮಂಗಲ ಪಟ್ಟಣದ ಮಂಡ್ಯ ರಸ್ತೆ ಹಾಗೂ ಮೈಸೂರು ರಸ್ತೆಯ ಹಲವು ಅಂಗಡಿ, ಮುಂಗಟ್ಟುಗಳಿಗೆ ಕಲ್ಲು ಎಸೆದು, ಬೆಂಕಿ ಹಚ್ಚಲಾಗಿತ್ತು. ಕೆಲ ದುಷ್ಕರ್ಮಿಗಳು ಮಾರಕಾಸ್ತ್ರಗಳನ್ನು ಹಿಡಿದು ಓಡಾಡಿದ್ದರು.

ಘಟನೆಯಿಂದ ಮೂರು ಕೋಟಿಯಷ್ಟು ನಷ್ಟ ಸಂಭವಿಸಿ, ಪ್ರಕರಣ ರಾಜಕೀಯ ತಿರುವು ಪಡೆದುಕೊಂಡು ಹಲವು ರಾಜಕೀಯ ನಾಯಕರು ಪಟ್ಟಣಕ್ಕೆ ಭೇಟಿ ಕೊಟ್ಟಿದ್ದರು. ಜೊತೆಗೆ ಪೊಲೀಸರು ಪರಿಸ್ಥಿತಿಯನ್ನು ಹತೋಟಿಗೆ ತರಲು 144 ಸೆಕ್ಷನ್ ಜಾರಿ ಮಾಡಿ, 150ಕ್ಕೂ ಹೆಚ್ಚು ಮಂದಿ ವಿರುದ್ಧ ಎಫ್‌ಐಆರ್ ದಾಖಲು ಮಾಡಿದ್ದರು. ಜೊತೆಗೆ 55 ಮಂದಿಯನ್ನು ಪ್ರಕರಣದ ಸಂಬಂಧ ಬಂಧಿಸಿದ್ದರು. ಇದೀಗ ಬಂಧಿತ ಎಲ್ಲಾ ಆರೋಪಿಗಳಿಗೂ ಜಾಮೀನು ಮಂಜೂರಾಗಿದೆ.

ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಉತ್ತಮ ಸ್ಪಂದನೆ

ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಹರ್ಷ



ಬಿಜೆಪಿ ಕಚೇರಿಯಲ್ಲಿ ಮಾತನಾಡುತ್ತಿರುವ ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ.

ಮಂಡ್ಯ,ಸೆ.27– ಭಾರತೀಯ ಜನತಾ ಪಾರ್ಟಿಯು ಈಗಾಗಲೇ ದೇಶ ವ್ಯಾಪಿ ಸದಸ್ಯ ಅಭಿಯಾನಕ್ಕೆ ಚಾಲನೆ ನೀಡಿದ್ದೇವೆ, ಇದಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಹರ್ಷ ವ್ಯಕ್ತಪಡಿಸಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸದಸ್ಯತ್ವವು ಜಿಲ್ಲೆಯಲ್ಲಿ 25,000ಕ್ಕೂ ಹೆಚ್ಚು ನೋಂದಾವಣೆಯಾಗಿದೆ. ಈ ಜಿಲ್ಲೆಯಲ್ಲಿ 4 ಲಕ್ಷ ನೋಂದಾವಣಿ ಗುರಿ ಹೊಂದಿದ್ದೇವೆ ಕಾಂಗ್ರೆಸ್‌ನವರು ಸಂವಿಧಾನ ರಕ್ಷಣೆ ಮಾಡುತ್ತೇವೆ ಎಂದು ರಾಹುಲ್ ಗಾಂಧಿ ಪ್ರಚಾರ ಮಾಡಿದ್ದರು, ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರೋಧ ಪಕ್ಷದಲ್ಲಿ ನಾಯಕರಾಗಿದ್ದಾಗಲೂ ಕೂಡ ರಾಜ್ಯದ ಸಂಪತ್ತನ್ನು ಲೂಟಿ ಮಾಡಿದ ನಾಯಕರು ಎಂಬುದು ಎಲ್ಲರಿಗೂ ತಿಳಿದಿದ್ದು, ಕೂಡಲೇ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ತಮ್ಮ 40 ವರ್ಷದ ಸುದೀರ್ಘ ರಾಜಕೀಯದಲ್ಲಿ ಒಂದೇ ಒಂದು ಕಪ್ಪು ಚುಕ್ಕೆ ಇಲ್ಲ ಎಂದಿರುವ ಮುಖ್ಯಮಂತ್ರಿ ಅವರು, ಇಂದು ಬರೀ ರಾಜ್ಯವಲ್ಲ ಇಡೀ ದೇಶವೇ ಮೈಸೂರು ಮುಡಾ ಹಗರಣವನ್ನು ನೋಡುವಂತೆ ಮಾಡಿದೆ. ಮುಖ್ಯಮಂತ್ರಿ ಅವರ ಪ್ರಭಾವ ಬಳಸಿ ಅವರ ಕುಟುಂಬ ಲಾಭ ಪಡೆದು ಕೊಂಡಿದೆ ಎಂದು ಆರೋಪಿಸಿದರು.

ರಾಜ್ಯಪಾಲರು ಸಂವಿಧಾನ ಬದ್ಧವಾದ ಜವಾಬ್ದಾರಿ ಹೊಂದಿ ಮುಡಾ ಹಗರಣ ಕೂಲಂಕಷ ಪರಿಶೀಲಿಸಿ ಮೇಲ್ನೋಟಕ್ಕೆ ಭ್ರಷ್ಟಾಚಾರ ಕಂಡು ಬಂದಿದ್ದು ವಿಚಾರಣೆಗೆ ಅನುಮತಿ ನೀಡಿದ್ದಕ್ಕೆ ಕಾಂಗ್ರೆಸ್‌ನಲ್ಲಿ ಅನಾವಶ್ಯಕವಾಗಿ ರಾಜ್ಯಪಾಲರನ್ನು ಹಿಯ್ಯಾಳಿಸಿರುವುದು ನಾಚಿಕೆ ಸಂಗತಿ ಎಂದು ಗುಡುಗಿದರು.

ಉಚ್ಚ ನ್ಯಾಯಾಲಯವು ಕೂಡ ವಿಚಾರಣೆ ಸರಿ ಇದೆ ಎಂದ ಮೇಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಂಡತನ ತೋರುತ್ತಿದ್ದಾರೆ, ಸಂವಿಧಾನ ಉಳಿಸಿ ಮತ್ತು ಗೌರವಿಸಿ ಎನ್ನುವ ಕಾಂಗ್ರೆಸ್ ಕಟ್ಟಾಳುಗಳು ಎಲ್ಲಿಹೋದರು, ಜೊತೆಗೆ ಬೀದಿಯಲ್ಲಿ ಸಂವಿಧಾನ ಉಳಿಸಿ ಎನ್ನುವವರಿಗೆ ಅಗೌರವ ತೋರುತ್ತಿರುವ ಸಿದ್ದರಾಮಯ್ಯ ಅವರ ನಡೆ ಕಾಣುತ್ತಿಲ್ಲವೇಕೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಜಿಲ್ಲಾಧ್ಯಕ್ಷ ಇಂದ್ರೇಶ್, ಸಿಟಿಮಂಜುನಾಥ್, ಸಾದೊಳಲು ಸ್ವಾಮಿ, ವಿವೇಕ್, ವಸಂತ್ ಕುಮಾರ್, ಕೃಷ್ಣ ಭಾಗವಹಿಸಿದ್ದರು.

ಹಸಿರು ಪಟಾಕಿ ಬಿಟ್ಟು ಬೇರೆ ಪಟಾಕಿ ಮಾರುವಂತಿಲ್ಲ

ಮಂಡ್ಯ,ಸೆ.27– ದೀಪಾವಳಿ ಹಬ್ಬದ ಪ್ರಯುಕ್ತ ಜಿಲ್ಲೆಯ ಪಟಾಕಿ ಮಾರಾಟಗಾರರಿಗೆ ಹಸಿರು ಪಟಾಕಿಗಳನ್ನು ಮಾತ್ರ ಮಾರಾಟ ಮಾಡಲು ಅವಕಾಶವಿದ್ದು, ಅಂತಹ ಮಾರಾಟಗಾರರಿಗೆ ಮಾತ್ರ ತಾತ್ಕಾಲಿಕ ಪಟಾಕಿ ಪರವಾನಗಿಯನ್ನು ನೀಡಲಾಗುವುದು. ಹಸಿರು ಪಟಾಕಿಯನ್ನು ಹೊರತು ಪಡಿಸಿ ಬೇರೆ ಪಟಾಕಿಗಳನ್ನು ಮಾರಾಟ ಮಾಡಿದರೆ ನಿಯಮಾನುಸಾರ ಕ್ರಮ ಜರುಗಿಸಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ 2024ನೇ ಸಾಲಿನ ದೀಪಾವಳಿ ಹಬ್ಬದ ಪ್ರಯುಕ್ತ ತಾತ್ಕಾಲಿಕ ಪಟಾಕಿ ಪರವಾನಗಿ ನೀಡುವ ಹಾಗೂ ಮುಂಜಾಗ್ರತಾ ಕ್ರಮದ ಬಗ್ಗೆ ಸಭೆ ನಡೆಸಿ ಮಾತನಾಡಿದ ಅವರು, ಅ.29ರಿಂದ ನ.2ರವರೆಗೆ ಹಸಿರು ಪಟಾಕಿ ಮಾರಾಟಗಾರರಿಗೆ ಪರವಾನಿಗೆ ನೀಡಲಾಗುವುದು. ಶಾಲೆ, ಆಸ್ಪತ್ರೆ ಹಾಗೂ ಜನ ಸಂದಣಿ ಇರುವ ಪ್ರದೇಶಗಳಲ್ಲಿ ಕಡ್ಡಾಯವಾಗಿ ಪಟಾಕಿ ಮಾರಾಟ ನಿಷೇಧಿಸಲಾಗುವುದು. ಸಾರ್ವಜನಿಕರಿಗೆ ರಾತ್ರಿ 10 ಗಂಟೆಯವರೆಗೆ ಮಾತ್ರ ಪಟಾಕಿ ಹೊಡೆಯಲು ಮಾತ್ರ ಸುಪ್ರೀಂಕೋರ್ಟ್ ಆದೇಶದಂತೆ ಅವಕಾಶವಿದೆ. ಈ ಆದೇಶವನ್ನು ಜಿಲ್ಲೆಯ ಪ್ರತಿಯೊಬ್ಬರೂ ಪಾಲಿಸಬೇಕು ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಪಟಾಕಿ ಮಾರಾಟಗಾರರು ಪಟಾಕಿ ಗೋಡೌನ್ ಇಡಲು ಯಾವುದೇ ಅವಕಾಶವಿಲ್ಲ. ಪಟಾಕಿ ಮಾರಾಟಗಾರರು ಕಡಿಮೆ ಬೆಲೆಗೆ ಸಿಗುವಂತಹ ಪಟಾಕಿ, ಸಿಡಿಮದ್ದುಗಳನ್ನು ಖರೀದಿ ಮಾಡುತ್ತಾರೆ. ಕೇವಲ ಹಸಿರು ಪಟಾಕಿಗಳನ್ನು ಮಾತ್ರ ಮಾರಾಟಮಾಡಬೇಕು. ಹಸಿರು ಪಟಾಕಿಗೆ ಸಂಬಂಧಿಸಿದಂತೆ ಪಟಾಕಿ ಬಾಕ್ಸ್ ಮೇಲೆ ಇರುವ ಕ್ಯೂ ಆರ್ ಕೋಡ್ ಅನ್ನು ಮೊಬೈಲ್‌ನಲ್ಲಿ ಸ್ಕ್ಯಾನ್ ಮಾಡಿದಾಗ ಹಸಿರು ಪಟಾಕಿ ಎಂದು ತಿಳಿಯಬಹುದಾಗಿದೆ. ಪಟಾಕಿ ಮಾರಾಟ ಮಾಡಲು ಬೆಳಿಗ್ಗೆ 6 ರಿಂದ ಸಂಜೆ 6ರವರೆಗೆ ಅವಕಾಶ. ಸಂಜೆ 6 ಗಂಟೆಯ ನಂತರ ಪಟಾಕಿ ಅಂಗಡಿ ತೆರೆದಿದ್ದರೆ ಅಲ್ಲಿಗೆ ಪೊಲೀಸ್ ತಂಡವು ಭೇಟಿ ನೀಡಿ ಅಂಗಡಿ ಮುಚ್ಚಿಸಲಾಗುತ್ತದೆ. ಅಂಥವರ ಪರವಾನಿಗೆ ರದ್ದಾಗುತ್ತದೆ ಎಂದರು.

ಅಪರ ಜಿಲ್ಲಾಧಿಕಾರಿ ಡಾ.ನಾಗರಾಜು ಮಾತನಾಡಿ, ಕೆಲವರು ರಾತ್ರಿ 10 ಗಂಟೆಯ ನಂತರ ಪಟಾಕಿ ಹೊಡೆಯುವುದು ಕಂಡು ಬರುತ್ತದೆ. ಇದು ಶಬ್ದ ಮಾಲಿನ್ಯಕ್ಕೆ ಕಾರಣವಾಗುವುದಲ್ಲದೇ ಅನಾರೋಗ್ಯ ವ್ಯಕ್ತಿಗಳಿಗೆ ತೊಂದರೆ ಉಂಟಾಗುತ್ತದೆ. ರಾತ್ರಿ 10 ಗಂಟೆಯ ನಂತರ ಪಟಾಕಿ ಸಿಡಿಸುವವರಿಗೆ ಪೊಲೀಸ್ ತಂಡವು ನಿರ್ದಿಷ್ಟ ದಂಡ ವಿಧಿಸಿ ಶಿಕ್ಷೆ ವಿಧಿಸಬೇಕು. ಆಗ ಮಾತ್ರ ಇಂತಹ ಘಟನೆಗಳ ಬಗ್ಗೆ ಸಾರ್ವಜನಿಕರು ಎಚ್ಚೆತ್ತುಕೊಳ್ಳುತ್ತಾರೆ. ಜೊತೆಗೆ ಪಟಾಕಿ ಪರವಾನಿಗೆ ತೆಗೆದುಕೊಂಡಿರುವ ಪಟಾಕಿ ಮಾರಾಟಗಾರರ ಮನೆಯನ್ನು ಪರಿಶೀಲನೆ ನಡೆಸಬೇಕು. ಮಾರಾಟಗಾರರು ಯಾವುದೇ ಕಾರಣಕ್ಕೂ ಮನೆಯಲ್ಲಿ ಪಟಾಕಿಗಳನ್ನು ಇಟ್ಟುಕೊಳ್ಳುವಂತಿಲ್ಲ ಎಂದರು.

ಕೆ.ಆರ್.ಪೇಟೆ ಬಳಿ ಚಿರತೆ ದಾಳಿಗೆ ಹಸು ಬಲಿ



ಕೆ.ಆರ್.ಪೇಟೆ: ಚಿರತೆಯೊಂದು ದಾಳಿ ನಡೆಸಿ ಸೀಮೆ ಹಸುವನ್ನು ಕೊಂದು ಹಾಕಿರುವ ಘಟನೆ ತಾಲೂಕಿನ ಶೀಳನೆರೆ ಹೋಬಳಿ ಹಿರಳಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.

ಹಿರಳಹಳ್ಳಿ ಗ್ರಾಮದ ರೈತ ಹೆಚ್.ಟಿ.ಪಾಂಡುರಂಗಸ್ವಾಮಿಗೆ ಸೇರಿದ ಹಸು ಇದಾಗಿದೆ. ರೈತ ಪಾಂಡುರಂಗಸ್ವಾಮಿ ಗ್ರಾಮದ ಹೊರವಲಯದ ತಮ್ಮ ಜಮೀನಿನ ಬಳಿ ಹಸುವನ್ನು ಮೇಯಲು ಕಟ್ಟಿ ಹಾಕಿದ್ದರು. ಈ ಸಂದರ್ಭದಲ್ಲಿ ಹಾಡಹಗಲೇ ಗುರುವಾರ ಮಧ್ಯಾಹ್ನ 3.30ರ ವೇಳೆಗೆ ಹಸುವಿನ ಮೇಲೆ ದಾಳಿ ಮಾಡಿರುವ ಚಿರತೆ ಹಸುವನ್ನು ಬಲಿ ಪಡೆದಿದೆ.

ತಾಲೂಕಿನಾದ್ಯಂತ ಚಿರತೆ ಹಾವಳಿ ಮಿತಿ ಮೀರಿದೆ. ಸಾಮಾನ್ಯವಾಗಿ ರಾತ್ರಿ ವೇಳೆ ಸಾಕು ನಾಯಿಗಳು ಮತ್ತು ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿದ್ದ ಚಿರತೆಗಳು ಇದೀಗ ಹಾಡು ಹಗಲೇ ರೈತರ ಹೊಲ ಗದ್ದೆಗಳಲ್ಲಿ ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿದ್ದು ಜನ ಭಯಬೀತಗೊಂಡಿದ್ದಾರೆ. ತಕ್ಷಣವೇ ಅರಣ್ಯ ಇಲಾಖೆ ಬೋನಿಟ್ಟು ಚಿರತೆ ಸೆರೆ ಹಿಡಿಯುವಂತೆ ಆಗ್ರಹಿಸಿರುವ ಗ್ರಾಮಸ್ಥರು ಚಿರತೆ ದಾಳಿಯಿಂದ ಬೆಲೆ ಬಾಳುವ ಹಸು ಕಳೆದುಕೊಂಡಿರುವ ರೈತ ಪಾಂಡುರಂಗೇ ಗೌಡರಿಗೆ ಅರಣ್ಯ ಇಲಾಖೆಯ ವತಿಯಿಂದ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿದ್ದಾರೆ.

ಕಾರ್ಮಿಕರ ಕಲ್ಯಾಣ ಹಕ್ಕುಗಳ ಜಾಗೃತಿ ಅಗತ್ಯ

ಜಿಲ್ಲಾ ಮಟ್ಟದ ಕಾರ್ಯಾಗಾರದಲ್ಲಿ ಜಿಲ್ಲಾ ನ್ಯಾಯಾಧೀಶೆ ಬಿ.ಎಸ್.ಭಾರತಿ ಅಭಿಮತ



ಚಾಮರಾಜನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾ ಮಟ್ಟದ ಕಾರ್ಯಾಗಾರವನ್ನು ನ್ಯಾಯಾಧೀಶೆ ಬಿ.ಎಸ್.ಭಾರತಿ ಉದ್ಘಾಟಿಸಿದರು.

> ಕಾರ್ಮಿಕರ ಹಕ್ಕುಗಳ ಜಾಗೃತಿ ಮೂಡಿಸಲು ಕಾರ್ಯಾಗಾರ ಅತ್ಯುತ್ತಮ ಕಾರ್ಯಕ್ರಮವಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ ಹೇಳಿದಂತೆ ಕಾರ್ಮಿಕರು ಸುಶಿಕ್ಷಿತರಾಗಬೇಕು. ಹಾಗೆಯೇ ಸಂಘಟಿತರಾಗಬೇಕು. ಸರ್ಕಾರ ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯ, ವಿದ್ಯಾರ್ಥಿವೇತನ, ಭವಿಷ್ಯ ನಿಧಿ, ಇತರೆ ಸವಲತ್ತುಗಳನ್ನು ಜಾರಿಗೊಳಿಸಿದೆ.
> –ಗೀತಾ ಹುಡೇದ, ಅಪರ ಜಿಲ್ಲಾಧಿಕಾರಿ

ಚಾಮರಾಜನಗರ, ಸೆ.27–ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಕಲ್ಯಾಣ ಕಾರ್ಯಕ್ರಮ, ಹಕ್ಕು ಹಾಗೂ ಕಾಯ್ದೆಗಳ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯ ಎಂದು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷೆ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕಾರ್ಮಿಕ ಇಲಾಖೆ, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ, ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ ಸಹಯೋಗದಲ್ಲಿ ಕಾರ್ಮಿಕ ಕಾಯ್ದೆ, ಯೋಜನೆ ಅನುಷ್ಠಾನ ಕುರಿತು ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಮಿಕರು ಕಷ್ಟ ಹಾಗೂ ಶ್ರಮಜೀವಿಗಳಾಗಿದ್ದಾರೆ. ಇದನ್ನು ಅರಿತಿರುವ ಸರ್ಕಾರಗಳು ಕಾರ್ಮಿಕರು ಸಮಾಜದಲ್ಲಿ ಎಲ್ಲರಂತೆ ಸರಿಸಮಾನವಾಗಿ ಬದುಕಲು ಕನಿಷ್ಠ ವೇತನ, ದಿನಗೂಲಿ, ಮಹಿಳಾ ಕಾರ್ಮಿಕರಿಗೆ ಹೆರಿಗೆ ರಜೆ ಸೇರಿದಂತೆ ಇತರೆ ಸೌಲಭ್ಯ ಜಾರಿಗೆ ತಂದಿವೆ. ಈ ನಿಟ್ಟಿನಲ್ಲಿ ಅಸಂಘಟಿತ ಕಾರ್ಮಿಕರಿಗೆ ಅವರ ಹಕ್ಕು, ಕಾಯ್ದೆಗಳ ಬಗ್ಗೆ ಜಾಗೃತಿ ಅವಶ್ಯವಾಗಿದೆ ಎಂದು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ್ ಮಾತನಾಡಿ, ಕಾರ್ಮಿಕರು–ಮಾಲೀಕರ ನಡುವೆ ಉತ್ತಮ ಒಡನಾಟ, ಬಾಂಧವ್ಯವಿರಬೇಕು. ತಂತ್ರಜ್ಞಾನ ಮುಂದುವರೆದಿದ್ದರೂ ಕಾರ್ಮಿಕರನ್ನು ಎಂದಿಗೂ ಕಡೆಗಣಿಸಬಾರದು. ಕಟ್ಟಡ ಕಾರ್ಮಿಕರು ಗುರುತಿನ ಚೀಟಿಯನ್ನು ಪ್ರತಿ ವರ್ಷ ನವೀಕರಿಸಬೇಕು. ವ್ಯಕ್ತಿ ಯಾವುದೇ ನಿವೇಶನ ಖರೀದಿಸಿದರೂ ಶೇ.1ರಷ್ಟು ವಂತಿಕೆಯನ್ನು ಕಾರ್ಮಿಕ ಕಲ್ಯಾಣ ನಿಧಿಗೆ ನೀಡಬೇಕಾಗಿದೆ. ಕೆಲಸದ ಅವಧಿಯಲ್ಲಿ ಅಚಾನಕ್ ಆಗಿ ಪ್ರಾಣಹಾನಿಯಾದರೂ ನ್ಯಾಯಾಲಯಕ್ಕೆ ದೂರು ಸಲ್ಲಿಸಿ ಪರಿಹಾರ ಪಡೆಯಬಹುದು ಎಂದು ಮಾಹಿತಿ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ನಿವೃತ್ತ ಕಾರ್ಮಿಕಾಧಿಕಾರಿ ರಾಜಗೋಪಾಲ್ ಮಾತನಾಡಿದರು. ಮೈಸೂರು ಉಪವಿಭಾಗದ ಸಹಾಯಕ ಕಾರ್ಮಿಕ ಆಯುಕ್ತೆ ಎಸ್.ಆರ್.ವೀಣಾ, ಜಿಲ್ಲಾ ಕಾರ್ಮಿಕಾಧಿಕಾರಿ ಡಾ.ಎಂ.ಸವಿತಾ, ಜಿಪಂ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿ ಯೋಜನಾ ನಿರ್ದೇಶಕ ಎಂ.ಮಹೇಶ್, ಮೈಸೂರಿನ ಎಲ್‌ಐಸಿ ಶಾಖಾ ಹಿರಿಯ ವ್ಯವಸ್ಥಾಪಕ ಹೆಚ್.ಆರ್.ಸತೀಶ್, ಡಿಸಿಬಿಓಇಎಸ್‌ಐ ಕಾರ್ಪೋರೇಷನ್ ಶಾಖಾ ವ್ಯವಸ್ಥಾಪಕ ವಿನಯ್ ಕುಮಾರ್, ಮಂಡ್ಯದ ಭವಿಷ್ಯನಿಧಿ ಕಚೇರಿ ಎನ್‌ಫೋರ್ಸ್‌ಮೆಂಟ್ ಅಧಿಕಾರಿ ಎಂ.ಅಶೋಕ್ ಕುಮಾರ್, ಹಿರಿಯ ಕಾರ್ಮಿಕ ನಿರೀಕ್ಷಕ ವಿ.ಎಲ್.ಪ್ರಸಾದ್ ಉಪಸ್ಥಿತರಿದ್ದರು.

ಡಯಾಲಿಸಿಸ್ ಕೇಂದ್ರಕ್ಕೆ ಹೆಚ್ಚುವರಿ ಯಂತ್ರ



ಚಾಮರಾಜನಗರ ರೋಟರಿ ಭವನದಲ್ಲಿ ಡಯಾಲಿಸಿಸ್ ಕೇಂದ್ರ ಉದ್ಘಾಟಿಸಲಾಯಿತು.

ಚಾಮರಾಜನಗರ, ಸೆ.27–ಆರೋಗ್ಯಕರ ಸಮಾಜ ನಿರ್ಮಿಸುವಲ್ಲಿ ರೋಟರಿ ಸೇವೆ ಅನನ್ಯವಾಗಿದ್ದು, ನಗರದ ರೋಟರಿ ಭವನದಲ್ಲಿ ನೂತನವಾಗಿ ತೆರೆದಿರುವ ಡಯಾಲಿಸಿಸ್ ಕೇಂದ್ರಕ್ಕೆ ಎಂಎಸ್‌ಐಎಲ್‌ನಿಂದ ಹೆಚ್ಚುವರಿ ಡಯಾಲಿಸಿಸ್ ಯಂತ್ರ, ವೈಯುಕ್ತಿಕವಾಗಿ ಧನಸಹಾಯ ನೀಡುವುದಾಗಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಘೋಷಿಸಿದರು.

ನಗರದ ರೋಟರಿ ಭವನ ಆವರಣದಲ್ಲಿ ರೋಟರಿ ಸಂಸ್ಥೆ, ಮೈಸೂರಿನ ರೋಟರಿ ಐವರಿ ಸಿಟಿ ಹಾಗೂ ಬೆಂಗಳೂರಿನ ಕಿಡ್ನಿ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ನಡೆದ ರೋಟರಿ ಬಿಎಸ್‌ವಿ ನಾಗಪ್ಪಶೆಟ್ಟಿ ಡಯಾಲಿಸಿಸ್ ಸೆಂಟರ್ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ರೋಟರಿ ಸಂಸ್ಥೆ ಚಾಮರಾಜನಗರದಲ್ಲಿ ಡಯಾಲಿಸಿಸ್ ಸೆಂಟರ್ ತೆರೆದು ಬಡರೋಗಿಗಳಿಗೆ ಕಡಿಮೆ ಶುಲ್ಕದಲ್ಲಿ ಸೇವೆಗೆ ಮುಂದಾಗಿರುವುದು ಪುಣ್ಯದ ಕೆಲಸ. ಚಾಮರಾಜನಗರದಲ್ಲಿ ಹೆಚ್ಚು ಕಿಡ್ನಿ ತೊಂದರೆಗೊಳಗಾಗಿರುವವರು ಇದ್ದಾರೆ. ರೋಟರಿ ಡಯಾಲಿಸಿಸ್ ಕೇಂದ್ರದಿಂದ ಉಪಯೋಗವಾಗಲಿದೆ ಎಂದರು.

ಯಂತ್ರಗಳ ಕೊರತೆಯಿಂದ ಜಿಲ್ಲೆಯ ರೋಗಿಗಳು ಮೈಸೂರಿಗೆ ತೆರಳಿ ಡಯಾಲಿಸಿಸ್ ಮಾಡಿಸಿಕೊಳ್ಳಬೇಕಾದ ಅನಿವಾರ್ಯತೆ ಇತ್ತು. ಹನೂರಿನಲ್ಲಿ ಎರಡು ಯಂತ್ರ ಹಾಗೂ ಕೊಳ್ಳೇಗಾಲದಲ್ಲಿ ಹೆಚ್ಚುವರಿ ಯಂತ್ರಗಳ ಅಳವಡಿಕೆಯಿಂದ ಸಮಸ್ಯೆ ಸ್ವಲ್ಪ ಕಡಿಮೆಯಾಗಿದೆ. ಚಾಮರಾಜನಗರದಲ್ಲಿ ರೋಟರಿ 10 ಡಯಾಲಿಸಿಸ್ ಯಂತ್ರಗಳನ್ನು ಅಳವಡಿಸಿರುವುದು ಜಿಲ್ಲೆಯ ರೋಗಿಗಳಿಗೆ ಅನುಕೂಲವಾಗಲಿದೆ ಎಂದು ಹೇಳಿದರು.

ಇದೇ ವೇಳೆ ದಾನಿಗಳಾದ ವೆಂಕಟನಾಗಪ್ಪಶೆಟ್ಟಿ ಹಾಗೂ ಕುಟುಂಬದವರನ್ನು ಸನ್ಮಾನಿಸಲಾಯಿತು. ಜಿಲ್ಲಾಧಿಕಾರಿ ಶಿಲ್ಪನಾಗ್, ಎನ್‌ಆರ್ ಗ್ರೂಪ್ ಆಫ್ ಕಂಪನಿ ಅಧ್ಯಕ್ಷ ಪಿಡಿಜಿ ಆರ್.ಗುರು, ಡಯಾಲಿಸಿಸ್ ಸೆಂಟರ್ ಕಟ್ಟಡ ನವೀಕರಣ ದಾನಿ ವೆಂಕಟನಾಗಪ್ಪಶೆಟ್ಟಿ, ಪಿಡಿಜಿ ಡಾ.ನಾಗಾರ್ಜುನ್, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನ, ರೋಟರಿ ಜಿಲ್ಲಾ ಗವರ್ನರ್ ವಿಕ್ರಮ್ ದತ್ತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಚಿದಂಬರ್, ಡಾ.ಅನಿಕೇತ್ ಪ್ರಭಾಕರ್, ಹೆಚ್.ಆರ್.ಕೇಶವ್, ನಾಗೇಂದ್ರ ಪ್ರಸಾದ್, ಎಂ.ರಂಗನಾಥ್ ಭಟ್, ಪಿ.ಕೆ.ರಾಮಕೃಷ್ಣ ಮತ್ತಿತರರು ಹಾಜರಿದ್ದರು.

ಶಾಲಾ ವಿದ್ಯಾರ್ಥಿಗಳಿಗೆ ಕಾಯ್ದೆ ಜಾಗೃತಿ...



ಯಳಂದೂರು ಪೊಲೀಸ್ ಠಾಣೆಗಳಲ್ಲಿ ತೆರದ ಮನೆ ಕಾರ್ಯಕ್ರಮ ಆಯೋಜನೆಯಡಿ ಪಿಎಸ್‌ಐ ಹನುಮಂತ ಉಪ್ಪಾರ ಶಾಲಾ ವಿದ್ಯಾರ್ಥಿಗಳಿಗೆ ಪೋಕ್ಸೊ, ಬಾಲ್ಯವಿವಾಹ ನಿಷೇಧ ಕಾಯ್ದೆ, ಸಂಚಾರ ನಿಯಮ ಪಾಲನೆ ಹಾಗೂ ಮಾದಕ ದ್ರವ್ಯ ನಿಯಂತ್ರಣ ಕಾಯ್ದೆ ಕುರಿತು ಜಾಗೃತಿ ಮೂಡಿಸಿದರು.

ಬಿಜೆಪಿ ಪಕ್ಷಾಂತರಿ ಐವರು ಸದಸ್ಯರಿಗೆ ನೋಟಿಸ್



ಗುಂಡ್ಲುಪೇಟೆ: ಇಲ್ಲಿನ ಪುರಸಭೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ ಚುನಾವಣೆಯಲ್ಲಿ ಪಕ್ಷಾಂತರ ಮಾಡಿದ ಬಿಜೆಪಿ ಐವರು ಸದಸ್ಯರಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ಕಾರಣ ಕೇಳಿ ನೋಟಿಸ್ ನೀಡಿದ್ದಾರೆ.

ಸೆ.4ರಂದು ಪುರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಚುನಾವಣೆಯಲ್ಲಿ ಬಿಜೆಪಿಯ 3ನೇ ವಾರ್ಡ್‌ನ ಸದಸ್ಯೆ ಹೀನಾಕೌಸರ್, 4ನೇ ವಾರ್ಡ್‌ನ ಜಿ.ಎಸ್.ಕಿರಣ್, 14ನೇ ವಾರ್ಡ್‌ನ ರಾಣಿ ಲಕ್ಷ್ಮಿದೇವಿ 22ನೇ ವಾರ್ಡ್‌ನ ರಮೇಶ್ ಹಾಗೂ 23ನೇ ವಾರ್ಡ್‌ನ ವೀಣಾ ಅವರು ಪಕ್ಷದ ವಿಪ್ ಉಲ್ಲಂಘಿಸಿ ಕಾಂಗ್ರೆಸ್ ಬೆಂಬಲಿಸಿದ್ದರು.

ಈ ಕುರಿತು ಸದಸ್ಯತ್ವ ರದ್ದುಗೊಳಿಸುವಂತೆ ಪುರಸಭೆ ಬಿಜೆಪಿ ಸದಸ್ಯ ಪಿ.ಗಿರೀಶ್ ನೇತೃತ್ವದಲ್ಲಿ ಜಿಲ್ಲಾಧಿಕಾರಿಗೆ ದೂರು ನೀಡಲಾಗಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ನೋಟಿಸ್ ಜಾರಿಗೊಳಿಸಿ, 7 ದಿನಗಳೊಳಗೆ ನೋಟಿಸ್‌ಗೆ ಉತ್ತರಿಸುವಂತೆ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ತನಿಖಾ ಸಂಸ್ಥೆ ದುರುಪಯೋಗದ ಕಾರಣ ಸಿಬಿಐಗೆ ಅಂಕುಶ ಹಾಕಿದ್ದೇವೆ

ಸಚಿವ ಡಾ.ಮಹದೇವಪ್ಪ ಸ್ಪಷ್ಟನೆ



ಡಾ.ಮಹದೇವಪ್ಪ

ಮೈಸೂರು, ಸೆ.27(ಪಿಎಲ್ ಯು)- ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಿಬಿಐಗೆ ರಾಜ್ಯದಲ್ಲಿ ಅಂಕುಶ ಹಾಕಿದ್ದೇವೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸ್ಪಷ್ಟಪಡಿಸಿದರು.

ಮೈಸೂರು ವಿಮಾನ ನಿಲ್ದಾಣದಲ್ಲಿ ಇಂದು ಪತ್ರಕರ್ತರೊಡನೆ ಮಾತನಾಡಿದ ಅವರು, ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಯಲಿ, ತನಿಖಾ ವರದಿ ಬರುವ ಮುಂಚೆ ಮಾತನಾಡಲು ಇವರೇನು ಜಡ್ಜ್‌ಗಳಾ ಎಂದು ಬಿಜೆಪಿ ಹಾಗೂ ಜೆಡಿಎಸ್ ನಾಯಕರನ್ನು ತರಾಟೆಗೆ ತೆಗೆದುಕೊಂಡರು.

ಚುನಾಯಿತ ಸರ್ಕಾರ ಬೀಳಿಸುವುದು ಬಿಜೆಪಿ ಗುರಿ. ಆದರೆ ಸಿದ್ದರಾಮಯ್ಯಗೆ ಜನರ ಹಾಗೂ ಹೈಕಮಾಂಡ್ ಬೆಂಬಲ ಇರುವ ಕಾರಣ ಅವರನ್ನು ಯಾರೂ ಅಲ್ಲಾಡಿಸಲು ಸಾಧ್ಯವಿಲ್ಲ. ಸಿದ್ದರಾಮಯ್ಯ ಪ್ರಾಮಾಣಿಕರಾದ ಕಾರಣ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು. ಆರ್‌ಟಿಐ ಕಾಯ್ದೆಗಳನ್ನು ಕ್ರಿಮಿನಲ್ ಹಿನ್ನೆಲೆ ಇರುವವರು ಬಳಸಿಕೊಳ್ಳುತ್ತಿದ್ದಾರೆ. ಈ ಮೂಲಕ ಆರ್‌ಟಿಐ ಕಾಯ್ದೆ ದುರುಪಯೋಗ ಆಗುತ್ತಿದೆ ಎಂದು ಡಾ.ಮಹದೇವಪ್ಪ ಆರೋಪಿಸಿದರು.

ಇಂದು ಸ್ವಚ್ಛತಾ ಕಾರ್ಯಕ್ರಮ

ಮೈಸೂರು, ಸೆ.27- ಮೈಸೂರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ವತಿಯಿಂದ ಮೈಸೂರು ಜಿಲ್ಲಾ ನ್ಯಾಯಾಲಯ ಆವರಣ ಮತ್ತು ಮಳವಳ್ಳಿವಾಡಿಯ ನ್ಯಾಯಾಲಯ ಆವರಣದಲ್ಲಿ ಶನಿವಾರ(ಸೆ.28) ಬೆಳಗ್ಗೆ 7.30ಕ್ಕೆ ಸ್ವಚ್ಛತಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಎಲ್ಲಾ ನ್ಯಾಯಾಧೀಶರು ಹಾಗೂ ನ್ಯಾಯಾಲಯದ ಸಿಬ್ಬಂದಿಗಳು ಭಾಗವಹಿಸಲಿದ್ದಾರೆ. ಪ್ರಧಾನ ಜಿಲ್ಲಾ ನ್ಯಾಯಾಧೀಶರು ಮನವಿ ಮೇರೆಗೆ ಮೈಸೂರು ವಕೀಲರ ಸಂಘದ ಎಲ್ಲಾ ಸದಸ್ಯರು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ಸಂಘದ ಕಾರ್ಯಕಾರಿ ಮಂಡಳಿ ಪ್ರಕಟಣೆಯಲ್ಲಿ ಕೋರಿದೆ.

ಪ್ರೊ.ಎನ್.ವಿ.ರಾಘವೇಂದ್ರ ನಿಧನ



ಮೈಸೂರು, ಸೆ.27- ಮೈಸೂರಿನ ಎನ್‌ಐಇ ಕಾಲೇಜು ವಿಶ್ರಾಂತ ಪ್ರಾಂಶುಪಾಲ ಪ್ರೊ.ಎನ್.ವಿ.ರಾಘವೇಂದ್ರ(62) ಅವರು ಗುರುವಾರ ನಿಧನರಾದರು. ಶನಿವಾರ ಬೆಳಗ್ಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸಿಪಾಯಿ ಪ್ರಾಪರ್ಟೀಸ್
1. ಕುಬೇರಾನಂದ ಸಾಗರ ಲೇಔಟ್, East Face 30x40 ಅಳತೆಯ ಸೈಟ್ ಮಾರಾಟಕ್ಕಿದೆ ಬೆಲೆ 25 ಲಕ್ಷ ನೆಗೋಷಿಯೇಬಲ್
2. ಇಲವಾಲ ಬಸ್ ನಿಲ್ದಾಣ ಹಿಂಭಾಗದಲ್ಲಿರುವ ಬಸವಸಾಗರ ಫೇಸ್ 2ನೇ ಹಂತದಲ್ಲಿ 30x40 ಅಳತೆಯ ನಾರ್ತ್ ಫೇಸ್ ಸೈಟ್ ಮಾರಾಟಕ್ಕಿದೆ ಬೆಲೆ 30 ಲಕ್ಷ ನೆಗೋಷಿಬಲ್ ಮತ್ತು 60 ಅಡಿ ರಸ್ತೆಯಲ್ಲಿ 40x60ಅಳತೆಯ ಸೈಟ್‌ಗಳು ಮಾರಾಟಕ್ಕಿವೆ ಬೆಲೆ 60 ಲಕ್ಷ ನೆಗೋಷಿಬಲ್
ನಂಜುಂಡಸ್ವಾಮಿ ಹೆಚ್.ಎಸ್, ಮಾಜಿ ಸೈನಿಕರು ಮೊ: 9483862050
ಶರತ್‌ಕುಮಾರ್ ಮೊ. 7829779070

MUDA APPROVED SITES FOR SALE
ಗದ್ದಿಗೆ ರಸ್ತೆಯಲ್ಲಿರುವ ಸೆಂಟ್ ಫ್ರಾನ್ಸಿಸ್ ಸ್ಕೂಲ್ ಹಿಂಭಾಗದಲ್ಲಿರುವಂತಹ "ಸುವರ್ಣನಗರ" ಬಡಾವಣೆಯ ಪಕ್ಕದಲ್ಲಿರುವಂತಹ ಸಾನ್ವಿ ಬಡಾವಣೆಯಲ್ಲಿ 30x40, 30x43 ಅಳತೆಯ ಸೈಟುಗಳು ಮಾರಾಟಕ್ಕಿದೆ. ಬೆಲೆ 23 ಲಕ್ಷ ನೆಗೋ.
Mob: 9483862050, 7829779070 / 7892846068

MUDA SITE FOR SALE
ವಿಜಯನಗರ 4ನೇ ಹಂತ "ಯುರೇಖ ಎನ್‌ಕ್ಲೇವ್" ನಲ್ಲಿ 30'×40' North Facing ಸೈಟ್.
9886048471

MUDA SITE FOR SALE
@ Infosys KBL SILICON CITY
30×40 - East Face
40×60 - South Face
9886048471

ಮಾರಾಟಕ್ಕಿದೆ
1. 30x20 N/F ಸೈಟು, ಮುನಿಸ್ವಾಮಿ ನಗರ, ಜೆ.ಪಿ.ನಗರ ಲಾಸ್ಟ್ ಬಸ್ ಸ್ಟಾಪ್ ಹತ್ತಿರ.
2. 20 ಗುಂಟೆ ಜಮೀನು ಸಕಲೇಶಪುರ ಬೈಪಾಸ್ ರಸ್ತೆ
8971261355

ವಧು-ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ/ ನಾಯಕ/SC & ಎಲ್ಲಾ ಜಾತಿಯ ವಧು-ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)
9343175000

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಬೇಕಾಗಿದ್ದಾರೆ
ಆಶೀರ್ವಾದ್ ಫಾರ್ಮಾಸ್ಯೂಟಿಕಲ್ ಮಂಡಿಮೊಹಲ್ಲಾ, ಮೈಸೂರು
ಹುಡುಗರು : Office Boy / Order Boy ಕೆಲಸಕ್ಕೆ ಬೇಕಾಗಿದ್ದಾರೆ.
ಹುಡುಗಿಯರು : Billing / Accounting/ Store ಕೆಲಸಕ್ಕೆ ಬೇಕಾಗಿದ್ದಾರೆ.
9341816171 / 0821-4242888

Sales Girls ಬೇಕಾಗಿದ್ದಾರೆ
(3 ತಿಂಗಳ ಅವಧಿಗೆ ಕೆಲಸ)
(DASARA EXHIBITION STALL)
ಕೆಲಸದ ಸಮಯ : ಮಧ್ಯಾಹ್ನ 2.30 ರಿಂದ ರಾತ್ರಿ 9.30 ರವರೆಗೆ
ಸಂಪರ್ಕಿಸಿ:
8884007100 / 9738754823

3 ಬಿಎಚ್‌ಕೆ ಮನೆ ಬಾಡಿಗೆಗೆ ಇದೆ
ನಂ. 89/B, KHB 2ನೇ ಹಂತ, ಕುವೆಂಪುನಗರ ಎಂ ಬ್ಲಾಕ್ ಬಸ್ ಸ್ಟಾಪ್, ಉಡುಪಿ ಹೋಟೆಲ್ ಹಿಂಭಾಗ, ಪೂರ್ವ ಬಾಗಿಲು. ದೂರವಾಣಿ:
6362429022

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9606838940

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ ಸೆಕ್ಯೂರಿಟಿ Field Officer ಮೈಸೂರಿಗೆ ಬೇಕಾಗಿದ್ದಾರೆ
9035269781
9108100117

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ಕಂಪ್ಯೂಟರ್ ಬಿಲ್ಲಿಂಗ್, ಕ್ಯಾಶಿಯರ್ಸ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ
1) ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು
2) ಶಿಷ್ಕರಣಿ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ಬೇಕಾಗಿದ್ದಾರೆ
ಟೈಲ್ ಮಾರ್ಕೆಟಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ. SSLC ಮೇಲ್ಪಟ್ಟು, ಉತ್ತಮ ಅನುಭವವುಳ್ಳವರು.
ನೇತಾಜಿ ಸರ್ಕಲ್, ದಟ್ಟಗಳ್ಳಿ, ಮೈಸೂರು
9353756586

40X60 SITE FOR SALE
East Facing, 40' Road, Pragathi Nagar, Adjacent to M.S. Ramaiah Layout, Vijayanagar 6th Stage
8884133677

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಶೋರೂಮ್‌ಗಳಿಗೆ ಮತ್ತು ಕಂಪನಿ ಕೆಲಸಕ್ಕೆ, ಆಫೀಸ್ ಕೆಲಸಕ್ಕೆ ತಕ್ಷಣ ಯುವಕ, ಯುವತಿಯರು, ಬೇಕಾಗಿದ್ದಾರೆ, ಮೊದಲು ಬಂದವರಿಗೆ ಮೊದಲ ಆದ್ಯತೆ. ಯಾವುದೇ ಎಜುಕೇಶನ್ ಇರಬಹುದು, AGE ಲಿಮಿಟ್ 18 TO 55, SALARY 18000 TO 38000 ಇರುತ್ತದೆ, ಹೆಚ್ಚಿನ ಮಾಹಿತಿಗೆ ಇಂದೇ ಸಂಪರ್ಕಿಸಿ.
HR MADAM
+91 9632831680, +91 7899491102

ಮನೆ ಮಾರಾಟಕ್ಕಿದೆ
ಮೈಸೂರು ನಗರದಲ್ಲಿನ ಅಶೋಕಪುರಂ 4ನೇ ಕ್ರಾಸ್‌ನಲ್ಲಿ 17x55ರಲ್ಲಿ 1 ವರ್ಷದ ಹಿಂದೆ ಕಟ್ಟಿರುವ 2BHK ಹೊಂದಿರುವ 2 ಇಂಡಿಪೆಂಡೆಂಟ್ ಮನೆ ಎಲ್ಲಾ ರೀತಿಯ ದಾಖಲಾತಿಗಳನ್ನು ಹಾಗೂ ಕಾರ್ಪೋರೇಷನ್ ಖಾತೆ ಹೊಂದಿರುವ ಮನೆ ಮಾರಾಟಕ್ಕಿದೆ
9739780095
9113523954

100% TEAK WOOD
FACTORY FINISH DOORS & FRAMES @ FACTORY DEPOT RATES



10 YEARS WARRANTY*
9901291267
9731591267

ಬೇಕಾಗಿದ್ದಾರೆ
ಸುವಿಧಾ ಫುಡ್ ಪ್ರಾಡಕ್ಟ್ಸ್‌ಗೆ Driver cum Sales person ಬೇಕಾಗಿದ್ದಾರೆ
ವಿಳಾಸ: ಸೋಮನಾಥ ನಗರ, ದಟ್ಟಗಳ್ಳಿ, ಮೈಸೂರು
ಆಸಕ್ತರು ಕೂಡಲೇ ಸಂಪರ್ಕಿಸಿ:
6360380694

Wanted for Rent
Approx.1500 sqft of godown in and around Jayanagar / K.M. Puram.
Mob: 9901291267

ಬೇಕಾಗಿದ್ದಾರೆ
ವಯಸ್ಸಾದವರನ್ನು, ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಪುರುಷರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಬೆಳಿಗ್ಗೆ ಅಥವಾ ರಾತ್ರಿ ಅಥವಾ 24 ಗಂಟೆ ಸೇವೆ ಮಾಡುವವರು
ಸಂಪರ್ಕಿಸಿ: 8123630683

ಇಂದೇ ಸಂಪರ್ಕಿಸಿ
ಮೈಸೂರಿನ ಪ್ರತಿಷ್ಠಿತ ಕಂಪನಿಗೆ, ಶೋರೂಂಗಳಿಗೆ ಮತ್ತು ಆಫೀಸ್‌ಗಳಿಗೆ ಕೆಲಸ ಮಾಡಲು ಯುವಕ/ಯುವತಿಯರು ಬೇಕಾಗಿದ್ದಾರೆ.
Any Qualification: 7th, 10th, PUC, Any Degree Pass/Fail
ಆದವರಿಗೆ ಅರ್ಹತೆಗೆ ತಕ್ಕಂತೆ ಕೆಲಸ
ಸಂಬಳ: 15000 – 45000 (ESI+PF/OT)
ಸಂಪರ್ಕಿಸಿ: 9164052361 9740468212

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೆ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ರಿಂದ 20,000 ಸಂಪಾದಿಸಿ
9731891409

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಮನೆ ಭೋಗ್ಯಕ್ಕೆ ಇದೆ
30x40 ಪೂರ್ವ ಬಾಗಿಲು 2 ಬೆಡ್ ರೂಂ ರಿಂಗ್ ರೋಡ್ ಪಕ್ಕದಲ್ಲಿ ವಿಜಯನಗರ 4ನೇ ಹಂತ, 1ನೇ ಫೇಸ್, ಮೈಸೂರು.
9480347407

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

CORNER SITE FOR SALE
30x40, N/E Corner Site, Semi Commercial at Narasipura Highway Road, 200 mts from Ring Road. Contact:
9448369421

30X40 SITE FOR SALE
at KHB Kaveri Nagar, Near to Roopa Nagar, Badagala Hundi.
For Details
7975093270

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋಚರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ಎಟಿಎಂ ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್) (ಕೆ.ಎಸ್.ಆರ್.ಟಿ.ಸಿ) ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು-1

SITES FOR SALE
40x60 and 50x80 Site at Vijayanagara 4th Stage on 60 ft. Road
Contact:- 95914 08910

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಪ್ರಸಿದ್ಧ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ॥ ಕುಮಾರ್ ಪ್ರಸಾದ್ ಗುರೂಜಿ
Mob: 9731839596
ಸ್ತ್ರೀ-ಪುರುಷಪ್ರೇಮ, ಸಂತಾನ, ದಾಂಪತ್ಯ, ಸಮಸ್ಯೆ, ನಿಮ್ಮ ಯಾವುದೇ ಗುಪ್ತ, ಸಮಸ್ಯೆಗಳಿಗೆ, ಅಷ್ಟಮಂಗಳ, ಪ್ರಶ್ನೆಯಿಂದ, ನೇರ ಉತ್ತರ ಹಾಗೂ ಶಾಶ್ವತ, ಪರಿಹಾರಕ್ಕಾಗಿ, ಚೋಟನೀಕರ, ಭಗವತಿ ತಾಯಿ, ರಾಜರಾಜೇಶ್ವರಿ, ಕುಟ್ಟಿಚೇತನ್, ಕೇರಳದ, ಮಾಂತ್ರಿಕ ಶಕ್ತಿಯಿಂದ, 2 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ಮನೆ ವಿಳಾಸ: ಲಕ್ಕಿ ನಿವಾಸ ನಂ.19/D2, ಬುದ್ಧ ಮಾರ್ಗ, ಹೋಟೆಲ್ ದೋಸೆ ಕಾರ್ನರ್ ಪಕ್ಕ, ಹೊಸ DC ಆಫೀಸ್ ಎದುರು, ಸಿದ್ದಾರ್ಥ ಲೇಔಟ್, ಮೈಸೂರು

MUDA Approved Layout
30x40 S/E Corner Site @ Rs. 25 Lac
40x40 S/E Corner Site @ Rs.42 Lac
Next to LBS Nagara Behind Chamundi Hill
Call 9538583377

ಹೊಸ ಮನೆ ಕ್ರಯಕ್ಕೆ ಬೇಕಾಗಿದೆ
30x40, 2 BHK, 3 BHK
ಮೈಸೂರು ಸುತ್ತಮುತ್ತ MUDA/MUDA ಅನುಮೋದಿತ. 1 Cr
ಮಾರುವವರು/ಕೊಳ್ಳುವವರು ಸಂಪರ್ಕಿಸಿ:
9353533188 / 9844511289
8105893483

ತಕ್ಷಣ ಬೇಕಾಗಿದ್ದಾರೆ
ಮೈಸೂರು ಕೊಲಂಬಿಯಾ ಆಸ್ಪತ್ರೆಯಿಂದ ಶ್ರೀರಂಗಪಟ್ಟಣ ನಗುವಿನಹಳ್ಳಿ ಗೇಟ್ ಹತ್ತಿರ ಭದ್ರತಾ ಸಿಬ್ಬಂದಿಯಾಗಿ ಕೆಲಸ ನಿರ್ವಹಿಸಲು ರೂ. 15000 ಸಂಬಳ ESI & PF ವಾಸದ ಮನೆ ಇರುತ್ತದೆ. ಮೇಲ್ಕಂಡ ಸಿಬ್ಬಂದಿಯು ಇಂಗ್ಲೀಷ್ ಬರಹ ಗೊತ್ತಿರಬೇಕು. ಭದ್ರತಾ ಸಿಬ್ಬಂದಿಯ ಫ್ಯಾಮಿಲಿಗೂ ಕಾರ್ಖಾನೆಯ ಒಳಗೆ ಕೆಲಸವಿರುತ್ತದೆ. ಸಂಪರ್ಕಿಸಿ:
Mob: 8861871926

ತಕ್ಷಣ ಬೇಕಾಗಿದ್ದಾರೆ
ನೇರ ಆಯ್ಕೆ ಕಂಪನಿ ಮತ್ತು ಆಫೀಸ್‌ಗಳಿಗೆ ಆಫೀಸ್ ಕೆಲಸಗಳಿಗೆ 7ನೇ, 10ನೇ, ಪಿಯುಸಿ, ಐಟಿಐ ಡಿಗ್ರಿ ಪಾಸ್/ ಫೇಲ್ ಆದಂತಹ ನಗರ ಗ್ರಾಮೀಣ ಹಳ್ಳಿಯ ಯುವಕ ಯುವತಿಯರಿಗೆ ಊಟ ವಸತಿ ಯೊಂದಿಗೆ ಸಂಬಳ 18,000/- 35000/-. ಸಂಪರ್ಕಿಸಿ:
8884075899
8884076664



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಸೈಟುಗಳು ಮಾರಾಟಕ್ಕಿವೆ
ಮ್ಯಾಂಗೋ ಟ್ರೀ ಬಡಾವಣೆ ಪೂರ್ಣ ಅಭಿವೃದ್ಧಿ ಹೊಂದಿದ ಬಡಾವಣೆ, ಇಲವಾಲ ನಂತರ.
Mob: 9880774395

SITE FOR SALE
N/E Corner 60x70 Suvarna Nagara, Bogadi Road.
Mob: 8050821108

SITE FOR SALE
40x60 (South Face) No.99 Income Tax Layout Near K C Layout, Chamundi Hill Road,
Contact:
9980797972

ಸೈಟು ಮಾರಾಟಕ್ಕಿದೆ
30x40, S/F Good Location
ಸುವರ್ಣನಗರ (ದೀಪಾ ಸೊಸೈಟಿ) ಬೋಗಾದಿ, ಮೈಸೂರು
9742421313
9945779947

ಸುವರ್ಣಾವಕಾಶ
ಕಾಲೇಜು ವಿದ್ಯಾರ್ಥಿಗಳು, ನಿರುದ್ಯೋಗಿಗಳು, ಗೃಹಿಣಿಯರು, ನಿವೃತ್ತರು, ಉದ್ಯೋಗಿಗಳು, ವ್ಯಾಪಾರಿಗಳು, ಇನ್ನಿತರೇ ವೃತ್ತಿಯಲ್ಲಿ ಇರುವವರು ತಮ್ಮ ಬಿಡುವಿನ ವೇಳೆಯಲ್ಲಿ ತಿಂಗಳಿಗೆ 10ರಿಂದ 50 ಸಾವಿರ ಸಂಪಾದಿಸುವ ಸುವರ್ಣಾವಕಾಶ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
7353430309
9844915554

URGENTLY REQUIRED
Experienced CASHIER, SALES GIRL and DATA ENTRY STAFF for a prestigious super market in Mysore. Preference for Rajiv Nagar residents.
Contract immediately:
9880721849

ಕಳೆದಿದೆ
ಮೈಸೂರು ತಾಲ್ಲೂಕು, ವರುಣ ಹೋಬಳಿ, ಹಡಜನ ಗ್ರಾಮಕ್ಕೆ ಸೇರಿದ ಸರ್ವೆ ನಂ. 152/3ರ ಜಮೀನಿಗೆ ಸಂಬಂಧಪಟ್ಟಂತೆ ದಿನಾಂಕ: 05–03–2016ರ ಮೂಲ ಕ್ರಯಪತ್ರವು ಕಳೆದಿದ್ದು, ಯಾರಿಗಾದರೂ ಸಿಕ್ಕಲ್ಲಿ ಸಂಪರ್ಕಿಸಿ. ಶ್ರೀನಾಗರಾಜು
9482742439

HOUSE FOR RENT
2 BHK Independent E/F House for rent in KHB, Hootagalli. Contact:
9901085342
9986845909

ಸಂಪರ್ಕಿಸಿ
ನಾವು ಕೈಗೆಟಕುವ ದರದಲ್ಲಿ ನಿಮ್ಮ ಮನೆ, ಕಟ್ಟಡ ನಿರ್ಮಾಣ ಕೆಲಸವನ್ನು ಕ್ಲಪ್ತ ಸಮಯದಲ್ಲಿ ಮಾಡಿ ಕೊಡುತ್ತೇವೆ.
76760 94203

ಕಂಕಣಭಾಗ್ಯ ವಧುವರರ ಮಾಹಿತಿ ಕೇಂದ್ರ
ಮಡಿವಾಳ, ಕುರುಬ, ನಾಯಕ, ಉಪಾರ ಹಾಗೂ ವಿಧುರ, ವಿಧವೆಯರು, ವಿಚ್ಛೇದಿತರು ಸಂಪರ್ಕಿಸಬಹುದು
8951092977

ನಿವೇಶನ ಮಾರಾಟಕ್ಕಿದೆ
30x40, E/F
ಭೀಮ ಮೃಗಶಿರ ಬಡಾವಣೆ, ಮುಡಾ ಖಾತೆ, ವಿಮಾನ ನಿಲ್ದಾಣದ ಹತ್ತಿರ 28 ಲಕ್ಷ (Nego)
9945562267

20X30 HOUSE FOR SALE
North Facing, 2 Floors, G Block, Near Vivekananda Circle, 65 Lakhs. Contact:
7899214181

ಫರ್ನಿಚರ್ ಸರ್ವಿಸ್
ನಿಮ್ಮ ಮನೆಯಲ್ಲಿ ಗಲೀಜು ಆಗಿರುವ ಸೋಫಾವನ್ನು ನಾವು ವಾಷಿಂಗ್ ಮಾಡಿ ಕೊಡುತ್ತೇವೆ.
ಅತಿ ಕಡಿಮೆ ದರದಲ್ಲಿ ಸಂಪರ್ಕಿಸಿ:
8431841552

ಬೇಕಾಗಿದ್ದಾರೆ
ಸೇಲ್ಸ್ ಎಕ್ಸಿಕ್ಯೂಟಿವ್, ಅಕೌಂಟೆಂಟ್ (2ರಿಂದ 3 ವರ್ಷಗಳ ಅನುಭವವಿರಬೇಕು) ಪಾರ್ಟ್ಸ್ ಎಕ್ಸಿಕ್ಯೂಟಿವ್. ಸಂಪರ್ಕಿಸಿ
ನವೀನ್ ಮೋಟರ್ಸ್ ಹುಣಸೂರ್
9448425368
ಸ್ಥಳೀಯರಿಗೆ ಮೊದಲ ಆದ್ಯತೆ

FUNCTION HALL FOR RENT Rs. 28000/-
Birthday / Engagement Any Events 200 Members
SHOP FOR RENT
14x24 Ft., 3rd Cross, R P Road, inside Nanjangud
Mobile:9886723461

WANTED
MARKETING - Male
Marg Billing Software
Salary + Incentive
Age below 30. 2 Wheeler must
The SYS Technologies
#350, Near Avila Convent, Mysore
Mobile:9886723461

ಸೈಟುಗಳು ಮಾರಾಟಕ್ಕಿವೆ
ಡಿಟಿಸಿಪಿ ಮತ್ತು ಮುಡಾ ಸೈಟುಗಳು ಲಭ್ಯವಿದೆ. ಇಲವಾಲ, ಬೆಳವಾಡಿ, ಬೋಗಾದಿ ಗದ್ದಿಗೆ ರಸ್ತೆ ಮತ್ತು ತಳೂರು TVS ರೋಡ್ ಬ್ಯಾಂಕ್ ಲೋನ್ ದೊರೆಯುತ್ತದೆ.
ಸಂಪರ್ಕಿಸಿ:
9900240031/8884252555

ಬ್ಯೂಟಿಷಿಯನ್ ಬೇಕಾಗಿದ್ದಾರೆ
ಸ್ಥಳ: ಸಂಪೂರ್ಣ ಬಾಡಿ ಕೇರ್ & ಪಾರ್ಲರ್ ಕುವೆಂಪುನಗರ, ಮೈಸೂರು.
9606896189
ಬ್ಯೂಟಿಷಿಯನ್ ತರಬೇತಿಯನ್ನು ಸಹ ನೀಡಲಾಗುವುದು.

New House for Sale
ಹೊಸ ಮನೆ ಮಾರಾಟಕ್ಕಿದೆ
20x30 E/F, G+1 Floor, Sathagalli 'B' Zone, just 100 meters from Ring Road, Opp. VTU Engineering College.
9945252782

S K Constructions
ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ ನಿಮ್ಮ ಕೈಗೆಟುಕುವ ಬೆಲೆಯಲ್ಲಿ ಅತಿ ಉತ್ತಮ ಗುಣಮಟ್ಟದಲ್ಲಿ Engineer Plan, 3D Elevation ಸಹಿತ ನಾವೆ ಲೋನ್ ಮಾಡಿ ನಿಮ್ಮ ಕನಸಿನ ಮನೆ ಕಟ್ಟಿಕೊಡುತ್ತೇವೆ. ಸಂಪರ್ಕಿಸಿ:
Mob: 9620528490

ಮನೆ ಬಾಡಿಗೆಗೆ ಇದೆ
20x30, 2 BHK, G/F # 10392, ವಿಜಯನಗರ 4th Stage, 2nd Phase,ಮೈಸೂರು.
Ph: 9900795423 9591068676

ಬೇಕಾಗಿದ್ದಾರೆ
ಮೈಸೂರಿನ ಹೊಸ ಹೋಟೆಲ್ ಒಂದಕ್ಕೆ
ನಾನ್ ವೆಜ್ ಭಟ್ಟರು– 2
ಸೌತ್ ಅಡುಗೆ ಭಟ್ಟರು– 1
ದೋಸೆ ಭಟ್ಟರು– 2, ಕ್ಯಾಪ್ಟನ್–4, ಸರ್ವಿಸ್–6, ಕ್ಯಾಷಿಯರ್–2, ಕೌಂಟರ್ ಬಾಯ್ಸ್–4
Mob: 9880740061

ತಕ್ಷಣ ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡ್ಸ್ : (ಕೆಆರ್‌ಎಸ್, ಹೂಟಗಳ್ಳಿ, ದಂಡಿಕೆರೆ, ವರುಣ)
2) ಹೋಟೆಲ್‌ನಲ್ಲಿ ಕೆಲಸ ಮಾಡಲು ಮಹಿಳೆಯರು / ಪುರುಷರು (ಜಯಲಕ್ಷ್ಮೀಪುರಂ, ಒಂಟಿಕೊಪ್ಪಲ್, ಕೆ.ಡಿ. ರೋಡ್)ESI, PF ನೊಂದಿಗೆ ಉತ್ತಮ ಸಂಬಳ. ಸಂಪರ್ಕಿಸಿ:
9739166772 / 9880419847

28x40 ಕಾರ್ನರ್ ಸೈಟು ಮಾರಾಟಕ್ಕಿದೆ
15 ಲಕ್ಷಗಳು GSS ಲೇಔಟ್, ಅಮೃತ್ ಕೊಕೊ, ತಳೂರು TVS ಫ್ಯಾಕ್ಟರಿ ಹತ್ತಿರ, ಮೈಸೂರು
9972557534

New House for Sale
40x60 Duplex, Vijayanagar 1st Stage, 1st Main, East facing, 60 ft. Road, granite flooring, including interior, Italian kitchen, T.V. Cabinet, 4 bedrooms & 20x30 big hall (all attached), teak doors & windows, covered car parking. Price: 3.60 Cr. (Slightly negotiable)
7411210991

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ, ತ್ರಿವೇಣಿ ಸುತ್ತಮುತ್ತ ಮತ್ತು ಹೆಬ್ಬಾಳು ಏರಿಯಾಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC ಮತ್ತು ಮೇಲ್ಪಟ್ಟು. ಸಂಬಳ: 18,000 + W/O (8 hrs.). ಊಟ, ತಿಂಡಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ:
9880727819 | 9620667819

SITES for SALE
JP Nagar Ring Road
30x40
33 Lakhs
Near Gurur Bus Stop, Ramabainagar,Mysore.
DTCP approved (Corporation limits)
1.5 Kms from JP Nagar Ring Road
8660105902

HOUSE SALE
Kuvempunagar
MUDA,2+1 BHK, Residential Old Demolish House, 35x55, N/F,Park Opposite,
Price -2.10 Cr,
Near Vijaya Bank Circle, Contact Owner.Brokers Excuse
9035412545

SITE FOR SALE
Dimension: 30 feet x 40 feet, Facing: East. Location: BSNL Telecom Layout, Nityananda Sagar Layout, Mysuru.
9448877601

SITE FOR SALE
@ SOBHA DEVELOPERS "Sobha Retreat" Layout, Bogadi.
30'×40' - East Face
30×70' - North Face
9886048471

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಕಿರಗಸೂರು ಗ್ರಾಪಂಗೆ ನಿಂಗರಾಜು ಅಧ್ಯಕ್ಷ



ಕಿರಗಸೂರು ಗ್ರಾಪಂ ಅಧ್ಯಕ್ಷರಾಗಿ ಸಿ.ನಿಂಗರಾಜು ಆಯ್ಕೆಯಾಗಿದ್ದಾರೆ.

ತಿ.ನರಸೀಪುರ, ಸೆ.27– ತಾಲೂಕಿನ ಕಿರಗಸೂರು ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಸಿ.ನಿಂಗರಾಜು ಆಯ್ಕೆಯಾಗಿದ್ದಾರೆ.

ಆಂತರಿಕ ಒಪ್ಪಂದದಂತೆ 12 ತಿಂಗಳ ಅಧಿಕಾರವಧಿ ಪೂರೈಸಿ ಅಧ್ಯಕ್ಷ ಸ್ಥಾನಕ್ಕೆ ಚಂದ್ರಮ್ಮ ರಾಜೀನಾಮೆ ನೀಡಿದ ಹಿನ್ನೆಲೆಯಲ್ಲಿ ತೆರವಾದ ಸ್ಥಾನಕ್ಕೆ ಗ್ರಾಮ ಪಂಚಾಯಿತಿ ಆವರಣದಲ್ಲಿ ಸಭಾಂಗಣದಲ್ಲಿ ನಡೆದ ಚುನಾವಣೆಯಲ್ಲಿ ಸಿ.ನಿಂಗರಾಜು ಹಾಗೂ ಮಂಗಳಮ್ಮ ನಾಮಪತ್ರ ಸಲ್ಲಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಒಟ್ಟು 17 ಸದಸ್ಯರ ಪೈಕಿ 9 ಮತಗಳನ್ನು ಪಡೆದು ಸಿ.ನಿಂಗರಾಜು ಅಧ್ಯಕ್ಷರಾಗಿ ಆಯ್ಕೆಯಾದರೇ, ಮಂಗಳಮ್ಮ 8 ಮತಗಳನ್ನು ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿ ಬನ್ನೂರು ನೀರಾವರಿ ಇಲಾಖೆ ಎಇಇ ಎಸ್.ಮಂಜುನಾಥ್ ನೂತನ ಅಧ್ಯಕ್ಷರ ಆಯ್ಕೆ ಘೋಷಿಸಿದರು.

ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆಯೇ ಗ್ರಾಪಂ ಆವರಣದಲ್ಲಿ ನೆರೆದಿದ್ದ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ನಿಕಟ ಪೂರ್ವ ಅಧ್ಯಕ್ಷೆ ಚಂದ್ರಮ್ಮ, ಉಪಾಧ್ಯಕ್ಷೆ ಚಿನ್ನತಾಯಮ್ಮ, ಸದಸ್ಯರಾದ ಜ್ಯೋತಿ, ನಾಗರಾಜು, ಭಾಗ್ಯ, ಶಿವರಾಜು, ಗಿರಿಜಮ್ಮ, ಎಂ.ಮಹೇಶ್, ರಾಜೇಶ್ವರಿ, ಪಿ.ನಾಗರಾಜು, ಸರೋಜಮ್ಮ, ಬಿ.ಮಹದೇವಸ್ವಾಮಿ, ಆರ್.ಗಿರೀಶ್, ಕಾಮಿನಿ, ನಾಗರತ್ನಮ್ಮ ಚುನಾವಣೆಯಲ್ಲಿ ತಮ್ಮ ಹಕ್ಕು ಚಲಾಯಿಸಿದರು.

ನೂತನ ಅಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಕಸಬಾ ಪಿಎಸಿಎಸ್ ಡಣಾಯಕನಪುರ ಮಲ್ಲಣ್ಣ, ನೂತನ ಅಧ್ಯಕ್ಷ ನಿಂಗರಾಜು ಅವರಿಗೆ ಸದಸ್ಯರು, ಮುಖಂಡರು 'ಸಹಕಾರ ನೀಡಬೇಕು. ಅಧ್ಯಕ್ಷರು ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಸರ್ವತೋಮುಖ ಅಭಿವೃದ್ಧಿ ಗಮನದಲ್ಲಿಟ್ಟುಕೊಂಡು ಕಾರ್ಯ ನಿರ್ವಹಿಸಬೇಕು ಎಂದು ಸಲಹೆ ನೀಡಿದರು.

ನೂತನ ಅಧ್ಯಕ್ಷ ಸಿ.ನಿಂಗರಾಜು ಮಾತನಾಡಿ, ಮುಂಬರುವ ದಿನಗಳಲ್ಲಿ ಗ್ರಾಪಂ ಅಭಿವೃದ್ಧಿಗೆ ಬೇಕಾದ ಸಲಹೆ ಸೂಚನೆಗಳನ್ನು ಸದಸ್ಯರು, ಮುಖಂಡರಿಂದ ಪಡೆಯಲಾಗುವುದು. ಗ್ರಾಪಂಗೆ ಸರ್ಕಾರದಿಂದ ಬರುವ ಅನುದಾನವನ್ನು ಗ್ರಾಪಂ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ಸಮಾನವಾಗಿ ಹಂಚಿಕೆ ಮಾಡಿ ಅಭಿವೃದ್ಧಿಗೆ ಒತ್ತು ನೀಡಲಾಗುವುದು. ಪಂಚಾಯಿತಿ ವ್ಯಾಪ್ತಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಶಾಸಕರಾಗಿರುವುದರಿಂದ ಅವರೊಂದಿಗೆ ನಿರಂತರ ಸಂಪರ್ಕ ಹೊಂದಿ ಹೆಚ್ಚುವರಿ ಅನುದಾನ ತರಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಸದಸ್ಯರ ಸಲಹೆ, ಸಹಕಾರ ಪಡೆದು ಗ್ರಾಮಗಳಿಗೆ ಬೇಕಾದ ಅಗತ್ಯ ಮೂಲ ಸೌಕರ್ಯಗಳ ಪಟ್ಟಿ ಮಾಡಿ ಆದ್ಯತೆ ಮೇರೆಗೆ ಅಭಿವೃದ್ಧಿ ಮಾಡಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಕಾಂಗ್ರೆಸ್ ಮುಖಂಡ ಕಾಂತರಾಜು, ಡೈರಿ ಅಧ್ಯಕ್ಷ ಡಿ.ಎಲ್.ಮಹದೇವಪ್ಪ, ಮಾಜಿ ಅಧ್ಯಕ್ಷ ಬಿ.ಮಂಟೇಲಿಂಗಪ್ಪ, ಹುಣಸೂರು ರಾಜಪ್ಪ, ರಾಚಪ್ಪ, ತರಕಾರಿ ಮಂಡಿ ಪ್ರಕಾಶ್, ಹುಣಸೂರು ರವಿ, ಪರಶಿವ, ಶಿವಣ್ಣ, ನಿರಂಜನ್, ಮುಖಂಡರಾದ ವಸಂತ, ಕೆಇಬಿ ಮುದ್ದಪ್ಪ, ಬಿಲಿಗೆರೆಹುಂಡಿ ಬಸವರಾಜು, ಮಹೇಶ್, ರಾಜಾಬುದ್ಧಿ, ಸ್ಟಾರ್ ಮಲ್ಲೇಶ್, ಕೂಡ್ಲೂರು ಸೀನಪ್ಪ, ಡಾ.ಬಾಬು ಜಗಜೀವನರಾಂ ಜನಸೇವಾ ಸಂಘದ ಅಧ್ಯಕ್ಷ ಮಲಿಯೂರು ಶಂಕರ್, ಬನ್ನೂರು ಪುರಸಭೆ ಸದಸ್ಯ ಶಿವಣ್ಣ, ಏಳುಮಲೆ ಮಂಜು ಮತ್ತಿತರರಿದ್ದರು.

ನಂ.ಗೂಡು ವಕೀಲರ ಸಂಘಕ್ಕೆ ಮಹದೇವಸ್ವಾಮಿ ಅಧ್ಯಕ್ಷ



ನಂಜನಗೂಡು ತಾಲೂಕು ವಕೀಲರ ಸಂಘದ ಅಧ್ಯಕ್ಷರಾಗಿ ಮಹದೇವ ಸ್ವಾಮಿ ಆಯ್ಕೆ ಯಾದರು.

ನಂಜನಗೂಡು, ಸೆ.27–ತಾಲೂಕಿನ ವಕೀಲರ ಸಂಘದ ನೂತನ ಅಧ್ಯಕ್ಷರಾಗಿ ಮಹದೇವಸ್ವಾಮಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಗರದ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಸಂಘದಲ್ಲಿ ಚುನಾವಣಾಧಿಕಾರಿ ಬಿ.ಶ್ರೀಕಂಠಸ್ವಾಮಿ ನೇತೃತ್ವದಲ್ಲಿ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ವಕೀಲ ಮಹದೇವಸ್ವಾಮಿ ಅವರನ್ನು ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆ ಘೋಷಿಸಲಾಯಿತು.

ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ವಕೀಲ ಎಂ.ಕೆ.ಬಸವಣ್ಣ 93 ಮತಗಳನ್ನು ಪಡೆಯುವ ಮೂಲಕ 71 ಮತಗಳನ್ನು ಪಡೆದ ಪ್ರತಿಸ್ಪರ್ಧಿ ವಕೀಲ ಕೆ.ಎಸ್.ಕರಿಯಪ್ಪ ಅವರನ್ನು ಮಣಿಸಿ ಆಯ್ಕೆಯಾದರು. ವಕೀಲ ಕೆಂಪರಾಜು 85 ಮತಗಳನ್ನು ಪಡೆದು 77 ಮತ ಪಡೆದ ಎದುರಾಳಿ ವಕೀಲ ಜಿ.ರಮೇಶ್ ಅವರನ್ನು ಪರಾಭವಗೊಳಿಸಿ ಉಪಾಧ್ಯಕ್ಷರಾಗಿ ಆಯ್ಕೆಯಾದರು. ಜಂಟಿ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿದ್ದ ವಕೀಲರಾದ ನವೀನ್‌ಕುಮಾರ್ ಹಾಗೂ ಶೇಖರ್ ತಲಾ 80 ಮತಗಳನ್ನು ಪಡೆದಿದ್ದರಿಂದ ಲಾಟರಿ ಮೂಲಕ ವಿಜೇತರನ್ನು ಆಯ್ಕೆ ಮಾಡಲಾಯಿತು.

ಈ ವೇಳೆ ಶೇಖರ್ ಜಂಟಿ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಉಳಿದಂತೆ ಖಜಾಂಚಿಯಾಗಿ ರಾಜೇಶ್ ಅವಿರೋಧವಾಗಿ ಆಯ್ಕೆಯಾದರು.

ಚುನಾವಣೆಯಲ್ಲಿ ಒಟ್ಟು 168 ವಕೀಲರ ಪೈಕಿ 163 ಮಂದಿ ಭಾಗವಹಿಸಿದ್ದರು. ಚುನಾವಣಾಧಿಕಾರಿಯಾಗಿ ಬಿ.ಶ್ರೀಕಂಠಸ್ವಾಮಿ, ಸಹಾಯಕ ಚುನಾವಣಾಧಿಕಾರಿಯಾಗಿ ಸಿದ್ದರಾಜು ಹಾಗೂ ನಾಗೇಂದ್ರ ಕಾರ್ಯನಿರ್ವಹಿಸಿದರು.

ಇದೇ ವೇಳೆ ನೂತನ ಅಧ್ಯಕ್ಷ ಮಹದೇವಸ್ವಾಮಿ ಮಾತನಾಡಿ, 100 ವರ್ಷಗಳಿಗೂ ಹೆಚ್ಚು ಇತಿಹಾಸ ಹೊಂದಿರುವ ನಂಜನಗೂಡು ವಕೀಲರ ಸಂಘದ ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. ಎಲ್ಲರ ನಿರೀಕ್ಷೆಯಂತೆ ಕೆಲಸ ಮಾಡುವ ಜೊತೆಗೆ ವಕೀಲರ ಸಂಘದ ಹಿತರಕ್ಷಣೆ ಮಾಡುವುದಾಗಿ ತಿಳಿಸಿದರು.

ಮಹಿಷ ಮಂಡಲ ಉತ್ಸವದಲ್ಲಿ 5 ಸಾವಿರ ಮಂದಿ ಭಾಗಿ



ಸುದ್ದಿಗೋಷ್ಠಿಯಲ್ಲಿ ನರಸಿಂಹಮೂರ್ತಿ ಮಾತನಾಡಿದರು.

ಹೆಚ್.ಡಿ.ಕೋಟೆ, ಸೆ.27– ಮೈಸೂರಿನಲ್ಲಿ ಸೆ.29ರಂದು ನಡೆಯುವ 12ನೇ ಮಹಿಷ ಮಂಡಲ ಉತ್ಸವದಲ್ಲಿ ಕೋಟೆ, ಸರಗೂರು ತಾಲೂಕಿನಿಂದ 5 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸುತ್ತೇವೆ ಎಂದು ಆದಿಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಹೆಚ್.ಸಿ.ನರಸಿಂಹಮೂರ್ತಿ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ಆದಿ ಕರ್ನಾಟಕ ಸಮುದಾಯದವರು ಪ್ರತಿಯೊಂದು ಗ್ರಾಮಗಳಿಂದ ಸ್ವಯಂ ಪ್ರೇರಣೆಯಿಂದ ಸ್ವಂತ ಖರ್ಚಿನಲ್ಲಿ ತೆರಳಲು ಸಿದ್ಧತೆ ಕೈಗೊಂಡಿದ್ದು, 200ಕ್ಕೂ ಹೆಚ್ಚು ಬೈಕ್ ಹಾಗೂ 30ಕ್ಕೂ ಹೆಚ್ಚು ವಾಹನಗಳಲ್ಲಿ ಮೈಸೂರಿಗೆ ತೆರಳಲಿದ್ದೇವೆ ಎಂದರು.

ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲೂ ಸಭೆ ನಡೆಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಉತ್ಸವದಲ್ಲಿ ಭಾಗವಹಿಸಲಿದ್ದೇವೆ. ಸಂಸದ ಯದುವೀರ್ ಮಹಿಷ ದಸರ ಆಚರಿಸಲು ಯಾವುದೇ ಅಡ್ಡಿ ಇಲ್ಲ ಎಂದು ತಿಳಿಸಿರುವುದಕ್ಕೆ ನಾವು ಅವರನ್ನು ಸ್ವಾಗತಿಸುತ್ತೇವೆ ಎಂದರು. ಗೋಷ್ಠಿಯಲ್ಲಿ ಮಹಾಸಭಾ ಮಾಜಿ ಅಧ್ಯಕ್ಷ ಮುದ್ದುಮಲ್ಲಯ್ಯ, ಸರಗೂರು ಅಧ್ಯಕ್ಷ ಶಿವಣ್ಣ, ಸೋಗಳ್ಳಿ ಶಿವಣ್ಣ, ಪ್ರಧಾನ ಕಾರ್ಯದರ್ಶಿಗಳಾದ ರಮೇಶ್, ಮಲ್ಲೇಶ್, ಕುಮಾರ್, ನಾಗಯ್ಯ ಇದ್ದರು.

ಸಹಕಾರ ಸಂಘಗಳು ರೈತರಿಗೆ ಆಸರೆಯಾಗಲಿ

ಮೈಮುಲ್ ಮಾಜಿ ಅಧ್ಯಕ್ಷ ಪಿ.ಎಂ.ಪ್ರಸನ್ನ ಅಭಿಪ್ರಾಯ

ಕಂಪಲಾಪುರ, ಸೆ.27– ಸಹಕಾರ ಸಂಘಗಳು ರೈತರಿಗೆ ಆಸರೆಯಾಗಬೇಕು ಎಂದು ಮೈಮುಲ್ ಮಾಜಿ ಅಧ್ಯಕ್ಷ ಪಿ.ಎಂ.ಪ್ರಸನ್ನ ಅಭಿಪ್ರಾಯಪಟ್ಟರು.

ಕಂಪಲಾಪುರಕೊಪ್ಪಲು ಡೇರಿ ವಾರ್ಷಿಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಹಾಲು ಉತ್ಪಾದನೆಯಲ್ಲಿ ಗುಜರಾತ್ ಮೊದಲ ಸ್ಥಾನದಲ್ಲಿದ್ದು, ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ನಿತ್ಯ ರಾಜ್ಯದಲ್ಲಿ 1 ಕೋಟಿ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ನಾನು ಮೈಮುಲ್ ಅಧ್ಯಕ್ಷನಾಗಿದ್ದ ವೇಳೆ ರೈತರ ಶ್ರೇಯೋಭಿವೃದ್ಧಿಗೆ ಶ್ರಮಿಸಿದ್ದೇನೆ. ಡೇರಿಗಳು, ಬಿಎಂಸಿ ಕೇಂದ್ರಗಳ ಸ್ಥಾಪನೆ, ಸರ್ಕಾರಿ ಸವಲತ್ತುಗಳ ವಿತರಣೆ ಹೀಗೆ ಹಲವು ಜನಪರ ಕೆಲಸಗಳನ್ನು ಮಾಡಿದ್ದೇನೆ. ಅದನ್ನು ಮನಗಂಡು ರೈತರು ಹೈನುಗಾರಿಕೆಗೆ ಹೆಚ್ಚು ಒತ್ತು ನೀಡಿ ಗುಣಮಟ್ಟದ ಹಾಲು ಸರಬರಾಜು ಮಾಡಿ ಲಾಭಗಳಿಸಿ ಎಂದರು.




ಸಭೆಯನ್ನು ಮೈಮುಲ್ ಮಾಜಿ ಅಧ್ಯಕ್ಷ ಪಿ.ಎಂ.ಪ್ರಸನ್ನ ಉದ್ಘಾಟಿಸಿದರು.

ಸಿಇಓ ಹೆಚ್.ಲೋಕೇಶ್ ಮಾತನಾಡಿ, ಸಂಘದಲ್ಲಿ ಒಟ್ಟು 130 ಷೇರುದಾರರಿದ್ದು, 2023–24ನೇ ಸಾಲಿನಲ್ಲಿ ಸಂಘ 3.85 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದರು.

ಮಾಜಿ ಅಧ್ಯಕ್ಷ ಕೆ.ಎಂ.ಲಕ್ಷ್ಮಣ್ ಮಾತನಾಡಿ, ನಮ್ಮ ಸಂಘ ಹಲವು ವರ್ಷಗಳಿಂದ ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಮುಂದೆ ಯಾರದರೂ ನಿವೇಶನ ನೀಡಿದರೆ ಖರೀದಿಸಿ ಸ್ವಂತ ಕಟ್ಟಡ ಕಟ್ಟಲಾಗುವುದು ಎಂದರು. ಮೈಮುಲ್ ವಿಸ್ತರಣಾಧಿಕಾರಿ ನಂದಿನಿ ಆಡಿಟ್ ವರದಿ ಓದಿದರು. ಇದೇ ವೇಳೆ ಅಧ್ಯಕ್ಷ ಚಂದ್ರು, ಉಪಾಧ್ಯಕ್ಷೆ ಶೀಲಾ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಎಂ.ರಮೇಶ್, ಮಹದೇವ್, ನಿರ್ದೇಶಕರಾದ ಗೋಪಾಲ್, ಲಕ್ಷ್ಮಣ್, ಗಿರೀಶ್, ಶಿವಕುಮಾರ್, ಸಿದ್ದಪ್ಪ ಚನ್ನೇಗೌಡ, ಸದಾನಂದ, ಗೀತಾ, ಪುಟ್ಟಮ್ಮ, ಹಾಲು ಪರೀಕ್ಷಕ ದೊಡ್ಡಣ್ಣ ಇತರರಿದ್ದರು.

ಹಾಡಹಗಲೇ ಹುಲಿ ಪ್ರತ್ಯಕ್ಷ: ರೈತರು ಆತಂಕ

ಮಲ್ಕುಂಡಿ, ಸೆ.27– ಹಾಡಹಗಲೇ ಹುಲಿ ಪ್ರತ್ಯಕ್ಷವಾಗಿ ರೈತರು ಆತಂಕಗೊಂಡಿರುವ ಘಟನೆ ನಂಜನಗೂಡು ತಾಲೂಕಿನ ಬಳ್ಳೂರುಹುಂಡಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ಬಳ್ಳೂರುಕಟ್ಟೆ ಬಳಿ ಜಮೀನಿನಲ್ಲಿ ರೈತರು ಕೆಲಸ ಮಾಡುತ್ತಿದ್ದ ವೇಳೆ ಹುಲಿ ಪತ್ಯಕ್ಷವಾಗಿದೆ. ಈ ವೇಳೆ ಆತಂಕಗೊಂಡ ರೈತರು ಗ್ರಾಮದತ್ತ ಓಡಿ ಬಂದಿದ್ದಾರೆ. ಈ ವೇಳೆ ರೈತರನ್ನು ಕಂಡ ಹುಲಿ ಬೆನ್ನಟ್ಟಿ ಬಂದಿತಾದರೂ ರೈತರು ಓಡಿ ಗ್ರಾಮ ಆಗಮಿಸುವ ಮೂಲಕ ಜೀವ ಉಳಿಸಿಕೊಂಡಿದ್ದಾರೆ. ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್ ಮಾತನಾಡಿ, ಇದೇ ಕಟ್ಟೆ ಬಳಿ ಕೆಲ ವರ್ಷಗಳ ಹಿಂದೆ ಗ್ರಾಮದ ನಿವಾಸಿ ಸ್ವಾಮಿ ಅವರ ಮೇಲೆ ಹುಲಿ ದಾಳಿ ನಡೆಸಿ ಬಲಿ ಪಡೆದಿತ್ತು. ಈ ವರ್ಷದ ಆರಂಭದಲ್ಲಿ ರತ್ನಮ್ಮ ಎಂಬ ಮಹಿಳೆ ಮೇಲೆ ದಾಳಿ ನಡೆಸಿ ಬಲಿ ಪಡೆದಿತ್ತು. ಇದೀಗ ಮತ್ತೆ ಹುಲಿ ಕಾಣಿಸಿಕೊಂಡಿರುವುದರಿಂದ ರೈತರು ಭಯಭೀತರಾಗಿದ್ದಾರೆ. ಈ ಸಂಬಂಧ ಅರಣ್ಯ ಇಲಾಖೆಗೆ ವಿಷಯ ಮುಟ್ಟಿಸಿದರೂ ಯಾವೊಬ್ಬ ಅಧಿಕಾರಿಗಳು ಸ್ಥಳಕ್ಕಾಗಮಿಸದೇ ನಿರ್ಲಕ್ಷ್ಯ ತೋರಿದ್ದಾರೆ. ಇನ್ನಾದರೂ ಅರಣ್ಯ ಇಲಾಖೆ ಅಧಿಕಾರಿಗಳು ಗ್ರಾಮಕ್ಕೆ ಆಗಮಿಸಿ ಹುಲಿ ಸೆರೆಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ಗರ್ಗೇಶ್ವರಿ ಪಿಎಸಿಎಸ್ ಸದಸ್ಯರ ವಾರ್ಷಿಕ ಮಹಾಸಭೆ ನಡೆಯಿತು.

ರೈತರಿಗೆ 4 ಕೋಟಿ ರೂ. ಅಲ್ಪಾವಧಿ ಸಾಲ ವಿತರಣೆ

ತಿ.ನರಸೀಪುರ, ಸೆ.27– ರೈತರಿಗೆ ಅಲ್ಪಾವಧಿ ಸಾಲವಾಗಿ 4 ಕೋಟಿ ರೂ. ವಿತರಿಸಲಾಗಿದೆ ಎಂದು ತಾಲೂಕಿನ ಗರ್ಗೇಶ್ವರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಂಜುಂಡೇಗೌಡ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮುಂದಿನ ಆರ್ಥಿಕ ವರ್ಷದಲ್ಲಿ ಸಂಘದಲ್ಲಿ ಹೊಸದಾಗಿ ಸದಸ್ಯತ್ವ ಪಡೆದ ರೈತರಿಗೆ ಸಾಲ ಕೊಡಲು ಆದ್ಯತೆ ನೀಡಲಾಗುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ಹೈನುಗಾರಿಕೆ ಸಾಲ ಕೊಡಲು ನಿರ್ಧರಿಸಲಾಗಿದೆ ಎಂದರು.

ಸಂಘವು ಸರ್ವ ಸದಸ್ಯರ ಸಹಕಾರದಿಂದ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಸರ್ಕಾರದಿಂದ ಬರುವ ಸವಲತ್ತುಗಳನ್ನು ರೈತರಿಗೆ ಸಮರ್ಪಕವಾಗಿ ವಿತರಣೆ ಮಾಡಲಾಗುತ್ತದೆ. ಸಾಲ ಪಡೆದ ರೈತರು ಸಕಾಲಕ್ಕೆ ಮರುಪಾವತಿ ಮಾಡಿ ಮತ್ತಷ್ಟು ಹೆಚ್ಚಿನ ಸಾಲ ಪಡೆದು ಆರ್ಥಿಕ ಅಭಿವೃದ್ಧಿ ಹೊಂದುವಂತೆ ತಿಳಿಸಿದರು.

ಸಂಘದ ಪ್ರಭಾರ ಸಿಇಓ ಮಹಮದ್ ಸಲಾವುದ್ದೀನ್, ಸಂಘದ ವಾರ್ಷಿಕ ವರದಿ ಮಂಡಿಸಿ ಸಂಘವು ಪ್ರಸಕ್ತ ಸಾಲಿನಲ್ಲಿ 4.75 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದರು. ಸಭೆಯಲ್ಲಿ ಉಪಾಧ್ಯಕ್ಷ ಸ್ವಾಮಿ, ನಿರ್ದೇಶಕರಾದ ಮಸ್ರೂರ್ ಅಹ್ಮದ್, ಕೆ.ಮುದ್ದೇಗೌಡ, ಆರ್.ಸಗೀರ್ ಅಹ್ಮದ್, ಎಂ.ಅಣ್ಣೇಗೌಡ, ಮಹದೇವ, ಜಾಕೀರ್ ಹುಸೇನ್, ಕೆ.ಪಿ.ರಾಜಣ್ಣ, ಜಮಾಲ್ ಆರಾ, ರಾಜಮ್ಮ, ಶಾಜಿಯ ಸಮ್ರೀನ್ ಸೇರಿದಂತೆ ಗ್ರಾಮಸ್ಥರಿದ್ದರು.

ಮೂಗೂರು ಡೇರಿಗೆ 3.46 ಲಕ್ಷ ನಿವ್ವಳ ಲಾಭ



ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷ ಬಸವಣ್ಣ ಉದ್ಘಾಟಿಸಿದರು.

ಮೂಗೂರು, ಸೆ.27– ಸಂಘದ ಸದಸ್ಯರು ಡೇರಿಗೆ ಗುಣಮಟ್ಟದ ಹಾಲು ಪೂರೈಸುವ ಮೂಲಕ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮೂಗೂರು ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಎಂ.ಎಂ.ಬಸವಣ್ಣ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಹೈನುಗಾರಿಕೆ ಉತ್ತೇಜಿಸಲು ಒಕ್ಕೂಟದಿಂದ ಸಾಲ ಸೌಲಭ್ಯವನ್ನು ಸಂಘದ ಸದಸ್ಯರಿಗೆ ನೀಡುವುದಾಗಿ ತಿಳಿಸಿದರು.

1985ರಲ್ಲಿ ಸ್ಥಾಪನೆಗೊಂಡ ಸಹಕಾರ ಸಂಘ ಸ್ಥಳೀಯರ ಸಹಕಾರದಿಂದ ಹಂತ ಹಂತವಾಗಿ ಪ್ರಗತಿ ಹೊಂದಿ ಬಿಎಂಸಿ ಕೇಂದ್ರವಾಗಿ ಮಾರ್ಪಟ್ಟಿದೆ ಎಂದ ಅವರು, ಹಾಲು ಉತ್ಪಾದಕರು ಮೈಮುಲ್ ಒಕ್ಕೂಟದ ವಿಸ್ತರಣಾಧಿಕಾರಿಗಳ ಮಾರ್ಗದರ್ಶನ ಪಡೆದು ತಮ್ಮ ಆರ್ಥಿಕ ಮಟ್ಟ ಉತ್ತಮ ಪಡಿಸಿಕೊಳ್ಳುವಂತೆ ಸಲಹೆ ನೀಡಿದರು.

ಡೇರಿ ಸಿಇಓ ಎಂ.ನಾಗೇಂದ್ರ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಸಂಘವು 3.46 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದರು. ಇದೇ ವೇಳೆ ಡೇರಿಗೆ ಹೆಚ್ಚು ಹಾಲು ಸರಬರಾಜು ಮಾಡಿದ 6 ಮಂದಿ ಹಾಲು ಉತ್ಪಾದಕರನ್ನು ಸನ್ಮಾನಿಸಲಾಯಿತು. ಈ ವೇಳೆ ಸಂಘದ ಉಪಾಧ್ಯಕ್ಷ ಮಹಾದೇವಸ್ವಾಮಿ, ನಿರ್ದೇಶಕರಾದ ಮಹದೇವನಾಯ್ಕ, ಮಾದೇಗೌಡ, ಗೋವಿಂದರಾಜು, ಚಿಕ್ಕಮ್ಮ ಮಂಜುಳಾ, ಮಾದೇವಶೆಟ್ಟಿ, ಮಲ್ಲೇಶ್, ಮುಖಂಡರಾದ ನಾಗಣ್ಣ, ನಾಗರಾಜು, ರಂಗಯ್ಯ, ಸಂಘದ ಸದಸ್ಯರು ಹಾಗೂ ಡೇರಿ ಸಿಬ್ಬಂದಿ ವರ್ಗ, ಗ್ರಾಮಸ್ಥರು ಉಪಸ್ಥಿತರಿದ್ದರು.

ನೇರಳೆ ಮಹಾಶಕ್ತಿ ಕೇಂದ್ರದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ

ನಂಜನಗೂಡು, ಸೆ.27– ಪ್ರಧಾನಿ ಮೋದಿ ಅವರ ವಿಕಾಸ ಭಾರತದ ಪರಿಕಲ್ಪನೆ ಸಾಕಾರಗೊಳಿಸುವ ಸಲುವಾಗಿ ಗ್ರಾಮೀಣ ಜನರು ಬಿಜೆಪಿ ಸದಸ್ಯರಾಗುವ ಮೂಲಕ ಸದಸ್ಯತ್ವ ಅಭಿಯಾನ ಯಶಸ್ವಿಗೊಳಿಸಬೇಕು ಎಂದು ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ ತಿಳಿಸಿದರು.



ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ತಾಲೂಕಿನ ನೇರಳೆ ಮಹಾಶಕ್ತಿ ಕೇಂದ್ರದಲ್ಲಿ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪ್ರಧಾನಿ ಮೋದಿ 10 ವರ್ಷಗಳ ಕಾಲ, ಭ್ರಷ್ಟಾಚಾರ ರಹಿತ ಸುಭದ್ರ ಆಡಳಿತ ನೀಡುವ ಮೂಲಕ ದೇಶದ ಆರ್ಥಿಕ ಸ್ಥಿತಿ ಉತ್ತಮಗೊಳಿಸಿ ವಿಶ್ವದಲ್ಲೇ ಭಾರತವನ್ನು ಮುಂದುವರಿದ ರಾಷ್ಟ್ರವನ್ನಾಗಿ ರೂಪಿಸುವ ಮೂಲಕ ವಿಶ್ವಗುರುವನ್ನಾಗಿ ಮಾಡಲು ಸಂಕಲ್ಪ ಮಾಡಿದ್ದಾರೆ. ಅವರ ಕನಸನ್ನು ಸಾಕಾರಗೊಳಿಸುವ ಸಲುವಾಗಿ, ಪ್ರಧಾನಿ ಮೋದಿ ಅವರ ಕೈ ಬಲಪಡಿಸುವ ಸಲುವಾಗಿ ಗ್ರಾಮೀಣ ಜನರು ಬಿಜೆಪಿ ಪಕ್ಷದ ಸದಸ್ಯರಾಗಬೇಕು ಎಂದು ಮನವಿ ಮಾಡಿದರು.

ನಮ್ಮ ಪಕ್ಷದ ಕಾರ್ಯಕರ್ತರು 18ರಿಂದ 20 ವಯಸ್ಸಿನ ಹೊಸ ಮತದಾರರಿಗೆ ಬಿಜೆಪಿ ಪಕ್ಷದ ತತ್ವ ಸಿದ್ಧಾಂತಗಳನ್ನು, ಹಾಗೂ ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಾಧನೆಗಳನ್ನು ತಿಳಿಸುವ ಮೂಲಕ ಅವರನ್ನು ಬಿಜೆಪಿ ಸದಸ್ಯರನ್ನಾಗಿ ಮಾಡುವ ಮೂಲಕ ಪಕ್ಷವನ್ನು ತಳಮಟ್ಟದಲ್ಲಿ ಗಟ್ಟಿಗೊಳಿಸಬೇಕು ಎಂದು ಕರೆ ನೀಡಿದರು.


ಇದೇ ಸಂದರ್ಭದಲ್ಲಿ ಬಿಜೆಪಿ ನೇರಳೆ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಸುರೇಶ್, ಬಸವರಾಜಪ್ಪ, ರಾಜಣ್ಣ, ಪ್ರಕಾಶ್, ದೊಡ್ಡ ಮಾದೇಗೌಡ, ಶಿವನಂಜಯ್ಯ, ಮುರಳಿ, ಸುಗಂಧರಾಜು ಸೇರಿದಂತೆ ಬಿಜೆಪಿ ಕಾರ್ಯಕರ್ತರು ಇದ್ದರು.

ದರಪಟ್ಟಿ ಆಹ್ವಾನ

ಮೈಸೂರು, ಸೆ.27– ಕೇಂದ್ರ ಕಾರಾಗೃಹದ ಮುಖ್ಯ ಅಧೀಕ್ಷಕ ಕಾರ್ಯಾಲಯದ ಸಂಸ್ಥೆಯಲ್ಲಿರುವ ಸಿಸಿಟಿವಿ ದೃಶ್ಯಾವಳಿಗಳ ಬ್ಯಾಕ್ ಅಪ್‌ನ್ನು 45–90 ದಿನಗಳಿಗೆ ಹೆಚ್ಚಿಸಲು ಅವಶ್ಯಕವಾಗಿರುವ ಉಪಕರಣಗಳನ್ನು ಖರೀದಿಸಲು ಸ್ಥಳೀಯ ವರ್ತಕರಿಂದ ಜಿಎಸ್‌ಟಿ ಸಹಿತ ದರಪಟ್ಟಿಗೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಸಂಸ್ಥೆ ಹಾಗೂ ವರ್ತಕರು ಜಿಎಸ್‌ಟಿ ಸಹಿತ ದರಪಟ್ಟಿಯನ್ನು ಅ.3ರೊಳಗೆ ಮೈಸೂರಿನ ಕೇಂದ್ರ ಕಾರಾಗೃಹದ ಮುಖ್ಯ ಅಧಿಕ್ಷಕರ ಕಚೇರಿಗೆ ಸಲ್ಲಿಸಬೇಕು ಎಂದು ಕೇಂದ್ರ ಕಾರಾಗೃಹದ ಮುಖ್ಯ ಅಧಿಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಹಕಾರಿ ತತ್ವದಲ್ಲಿ ಷೇರುದಾರರ ಪಾತ್ರ ಪ್ರಮುಖ

ಕಲ್ಪವೃಕ್ಷ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಅಧ್ಯಕ್ಷ ಪಿ.ಪ್ರಶಾಂತ್‌ಗೌಡ



ಸಮಾರಂಭವನ್ನು ಅಧ್ಯಕ್ಷ ಪಿ.ಪ್ರಶಾಂತಗೌಡ ಉದ್ಘಾಟಿಸಿದರು.

ಪಿರಿಯಪಟ್ಟಣ, ಸೆ.27– ಸಹಕಾರ ಸಂಸ್ಥೆಗಳ ಏಳಿಗೆಯಲ್ಲಿ ಷೇರುದಾರರ ಪಾತ್ರ ಪ್ರಮುಖ ಎಂದು ಕಲ್ಪವೃಕ್ಷ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಪಿ.ಪ್ರಶಾಂತಗೌಡ ತಿಳಿಸಿದರು.

ಪಟ್ಟಣದ ಎನ್.ಎ.ಫಂಕ್ಷನ್ ಹಾಲ್‌ನಲ್ಲಿ ನಡೆದ 2023–24ನೇ ಸಾಲಿನ ವಾರ್ಷಿಕ ಮಹಾಸಭೆ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಸಂಸ್ಥೆ ಪ್ರಾರಂಭವಾಗಿ 13 ವರ್ಷವಾಗಿದ್ದು, ಅಂದಿನಿಂದ ಇಂದಿನವರೆಗೆ ಕೋವಿಡ್ ಸಂದರ್ಭದಲ್ಲೂ ಸಂಸ್ಥೆ ನಷ್ಟ ಅನುಭವಿಸದೇ ಲಾಭದಲ್ಲೇ ಮುಂದುವರೆದಿದೆ. ಇದಕ್ಕೆ ಸಂಸ್ಥೆಯ ಷೇರುದಾರರು ಹಾಗೂ ಸಿಬ್ಬಂದಿ ಪ್ರಾಮಾಣಿಕ ಸೇವೆಯೇ ಕಾರಣ ಎಂದರು.

ಈಗಾಗಲೇ 25 ಲಕ್ಷ ರೂ. ವೆಚ್ಚದಲ್ಲಿ ಸೊಸೈಟಿ ನೂತನ ಕಟ್ಟಡ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಅಂತಿಮವಾಗಿ ಕಟ್ಟಡ ಕಾಮಗಾರಿಗೆ 10 ಲಕ್ಷ ರೂ. ಅಗತ್ಯವಿದ್ದು, ಕಾಮಗಾರಿಗೆ 25 ಸಾವಿರ ರೂ. ದೇಣಿಗೆ ನೀಡುವ ದಾನಿಗಳ ಭಾವಚಿತ್ರವನ್ನು ಕಟ್ಟಡದ ಆವರಣದಲ್ಲಿ ಹಾಕಲಾಗುವುದು ಎಂದರು. ಅಲ್ಲದೇ 2023–24ನೇ ಸಾಲಿನ ವರದಿ ಮಂಡಿಸಿದ ಅವರು ಸಂಸ್ಥೆ ಈ ಬಾರಿ 5,25,905 ರೂ. ನಿವ್ವಳ ಲಾಭ ಗಳಿಸಿದೆ ಎಂದು ತಿಳಿಸಿದರು.

ಇದೇ ಸಂದರ್ಭ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ಷೇರುದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಅಲ್ಲದೇ ಸೊಸೈಟಿಯ ಉತ್ತಮ ಗ್ರಾಹಕರನ್ನು ಸನ್ಮಾನಿಸಲಾಯಿತು.

ಸಭೆಯಲ್ಲಿ ಉಪಾಧ್ಯಕ್ಷ ಕೆ.ಎಸ್.ಕೃಷ್ಣೇಗೌಡ, ನಿರ್ದೇಶಕರಾದ ಬಿ.ಎ.ಪ್ರಕಾಶ್, ಸಿ.ಆರ್.ದೇವರಾಜ್, ಎಸ್.ಆರ್. ದಿನೇಶ್, ಕೆ.ಎಲ್.ಸುರೇಶ್, ಡಿ.ಆರ್. ಶಹಬಾಜ್, ಕೆ.ಎನ್.ನಟೇಶ್, ಶ್ರುತಿ, ಮಹೇಶ್ವರಿ, ಪುಟ್ಟಣ್ಣ, ಹರೀಶ್, ರಾಜೇಶ್, ಕೆಂಪಣ್ಣ, ಸಿಇಓ ಆರ್.ಮಂಜುನಾಥ್, ಸಿಬ್ಬಂದಿಗಳಾದ ಆರ್.ಚಿತ್ರ. ಎಚ್.ಎಂ. ಆಶಾ, ಪಿ.ವಿ.ಮಹದೇವ್, ಮನು, ಪ್ರಿಯದರ್ಶಿನಿ, ಕುಮಾರಿ ಉಪಸ್ಥಿತರಿದ್ದರು.

ಉತ್ಪಾದಕರು ಹಾಲಿನ ಗುಣಮಟ್ಟ ಕಾಯ್ದುಕೊಳ್ಳಿ

ವಾರ್ಷಿಕ ಮಹಾಸಭೆಯಲ್ಲಿ ಮೈಮುಲ್ ಅಧ್ಯಕ್ಷ ಕೆ.ಈರೇಗೌಡ ಸಲಹೆ



ಮಹಾಸಭೆಯಲ್ಲಿ 14 ಸದಸ್ಯರಿಗೆ ಚೆಕ್ ವಿತರಿಸಲಾಯಿತು.

ಸರಗೂರು, ಸೆ.27– ಹಾಲು ಉತ್ಪಾದಕರು ಹಾಲಿನ ಗುಣಮಟ್ಟ ಕಾಯ್ದುಕೊಳ್ಳಬೇಕು ಎಂದು ಮೈಮುಲ್ ನಿರ್ದೇಶಕ ಕೆ.ಈರೇಗೌಡ ತಿಳಿಸಿದರು.

ತಾಲೂಕಿನ ನಂಜೀಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ನಡೆದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲೆ ಸರಗೂರು ಹಾಗೂ ಹೆಚ್.ಡಿ.ಕೋಟೆ ತಾಲೂಕಿನ 86 ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘಗಳು ಮೊದಲ ಸ್ಥಾನದಲ್ಲಿವೆ. ಹೀಗಾಗಿ ಹಾಲು ಉತ್ಪಾದಕರು ಗುಣಮಟ್ಟದ ಹಾಲಿನ ಉತ್ಪಾದನೆಗೆ ಹೆಚ್ಚು ಒತ್ತು ನೀಡಬೇಕು. ಇದರಿಂದ ಸಂಘ ಲಾಭ ಗಳಿಸಲು ಸಾಧ್ಯವಾಗುತ್ತದೆ. ಅಲ್ಲದೇ ಹಾಲಿಗೆ ನೀರು ಬೆರೆಸದೆ ಗುಣಮಟ್ಟ ಕಾಯ್ದುಕೊಳ್ಳಬೇಕು. ಹಾಲು ಉತ್ಪಾದಕರು ಸಂಘದಿಂದ ದೊರೆಯುವ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಮುಂದೆ ಬರಬೇಕು ಎಂದರು.

ಮೈಮುಲ್ ಉಪ ವ್ಯವಸ್ಥಾಪಕಿ ಎನ್.ಸೌಮ್ಯ ಮಾತನಾಡಿ, ಸಂಘದಲ್ಲಿ ನಿತ್ಯ 150 ಲೀಟರ್ ಹಾಲು ಶೇಖರಣೆಯಾಗುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಡೈರಿಯು 23,25,095 ರೂ. ನಿವ್ವಳ ಲಾಭ ಗಳಿಸಿದೆ. ಮಹಿಳೆಯರ ಸಬಲೀಕರಣಕ್ಕಾಗಿ ಕ್ಷೀರ ಸಂಜೀವಿನಿ ಹಂತ 4ರ ಯೋಜನೆಯಡಿ ಖರೀದಿಸಿದ ರಾಸುಗಳಿಗೆ ತಲಾ ಒಂದು ರಾಸಿಗೆ ರಾಸು ವಿಮೆ ಪ್ರೀಮಿಯಂ ಮೊತ್ತ 1000 ರೂ.ಗಳಾಗಿದ್ದು, ಯೋಜನೆಯಿಂದ ಮೇವು ಅಭಿವೃದ್ಧಿ ಶಿಬಿರ, ರಾಸು ಆರೋಗ್ಯ ನಿರ್ವಹಣೆ ಶಿಬಿರ ಮತ್ತು ಕಾನೂನು ಅರಿವು ಶಿಬಿರ, ಮಹಿಳೆಯರ ಆರೋಗ್ಯ ಮತ್ತು ಪೌಷ್ಟಿಕ ಆಹಾರ ಶಿಬಿರ ಹಮ್ಮಿಕೊಳ್ಳಲು 22 ಸಾವಿರ ಅನುದಾನ ಇಡಲಾಗಿದೆ. ಹಾಲು ಉದ್ಪಾದಕರು ಹೆಚ್ಚು ಹಾಲು ಸರಬರಾಜು ಮಾಡಿದರೆ ಮಾತ್ರ ಸಂಘ ಬೆಳೆಯಲಿದೆ ಎಂದರು.

ಮೈಮುಲ್ ವಿಸ್ತರಣಾಧಿಕಾರಿ ಬಿ.ಎಸ್.ರಂಜಿತ ಮಾತನಾಡಿ, ಮಹಿಳೆಯರ ಸಬಲೀಕರಣಕ್ಕಾಗಿ ಕ್ಷೀರ ಸಂಜೀವಿನಿ ಹಂತ 4ರ ಯೋಜನೆ ಜಾರಿಗೆ ತರಲಾಗಿದೆ. ಅದರಂತೆ 2023–24ನೇ ಸಾಲಿಗೆ ಒಟ್ಟು 7,36,000 ಬಿಡುಗಡೆಯಾಗಿದೆ. ಮೈಸೂರು ಜಿಲ್ಲಾ ಹಾಲು ಒಕ್ಕೂಟಕ್ಕೆ 25 ಹಾಲು ಉತ್ಪಾದಕರ ಸಂಘಗಳನ್ನು ನಿಗದಿಪಡಿಸಿದ್ದು, ನಂಜೀಪುರ ಸಂಘವನ್ನು ಯೋಜನೆಗೆ ಒಳಪಡಿಸಿ ಯೋಜನೆಯಿಂದ ರಾಸು ಖರೀದಿಸಲು ಬಡ್ಡಿರಹಿತವಾಗಿ ಓರ್ವ ಸದಸ್ಯರಿಗೆ 46,000 ರೂ.ಗಳಂತೆ 14 ಮಂದಿ ಸದಸ್ಯರಿಗೆ ಒಟ್ಟು 6,44,000ಗಳ ಚೆಕ್ ನೀಡಲಾಗಿದೆ ಎಂದರು.

ಸಭೆಯಲ್ಲಿ ಮೈಮುಲ್ ವಿಸ್ತರಣಾಧಿಕಾರಿ ಪಿ.ಯೋಗೇಶ್, ಕಾರ್ಯದರ್ಶಿ ದೀಪಿಕಾ, ಶಿವಕುಮಾರ್, ಹಾಲು ಪರೀಕ್ಷಕ ಶಿವಕುಮಾರ್, ಸಂಘದ ಅಧ್ಯಕ್ಷೆ ಪುಷ್ಪಲತಾ, ಉಪಾಧ್ಯಕ್ಷೆ ಗೀತಾ, ನಿರ್ದೇಶಕರಾದ ಕೆಂಪಮ್ಮ, ಚಿಕ್ಕೇಣಮ್ಮ, ಪ್ರೇಮ, ಲತಾ, ಮಂಜುಳ, ಜ್ಯೋತಿ, ನೀಲಮ್ಮ, ಪುಟ್ಟ ಮಾದಮ್ಮ, ಶಿವಮರಮ್ಮ, ಗ್ರಾಪಂ ಸದಸ್ಯರಾದ ಮಲ್ಲಿಕಾರ್ಜನಾರಾಧ್ಯ, ಮಂಜುಳ, ಇಂದ್ರಾಣಮ್ಮ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಗುರುಮೂರ್ತಿ, ಅಕ್ರಮ ಸಕ್ರಮ ಸಮಿತಿ ಸದಸ್ಯ ಶಿವಶಂಕರನ್ ಹಾಗೂ ಮಹದೇವಸ್ವಾಮಿ, ಮುಖ್ಯಶಿಕ್ಷಕರಾದ ಬಿ.ಎನ್.ಸತೀಶ್, ಗ್ರಾಮಸ್ಥರು ಇದ್ದರು.

ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿಯಿಂದ ಜಿಪಂ ಕಚೇರಿ ಮುತ್ತಿಗೆ ಯತ್ನ

● ಸಿದ್ದರಾಮಯ್ಯ ಹಗರಣದ ಬಗ್ಗೆ ಹಾಡು ಕಟ್ಟಿ ಹಾಡಿದ ಶಾಸಕ ಶ್ರೀವತ್ಸ ● ಬಿಜೆಪಿ ಕಾರ್ಯಕರ್ತರ ಬಂಧನ, ಬಿಡುಗಡೆ

ಮೈಸೂರು, ಸೆ.27(ಜಿಎ)–ಮುಡಾ ಹಗರಣ ಸಂಬಂಧ ಎಫ್‌ಐಆರ್ ದಾಖಲಿಸುವಂತೆ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ಆದೇಶ ನೀಡಿದ್ದರೂ ಕೇರ್ ಮಾಡದೆ ಮೈಸೂರು ಜಿಲ್ಲಾ ಪ್ರವಾಸ ಕೈಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು, ಮುಖಂಡರು ಪ್ರತಿಭಟನೆ ನಡೆಸಿ ಜಿಲ್ಲಾ ಪಂಚಾಯಿತ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಮುಡಾ ಹಗರಣ ಹಿನ್ನೆಲೆಯಲ್ಲಿ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ಹಿನ್ನಲೆಯಲ್ಲಿ ನ್ಯಾಯಾಲಯವೂ ತನಿಖೆಗೆ ಅನುಮತಿ ನೀಡಿದೆಯಲ್ಲದೆ ಜನಪ್ರತಿನಿಧಿ ನ್ಯಾಯಾಲಯದಲ್ಲಿ ಎಫ್‌ಐಆರ್ ದಾಖಲಿಸುವಂತೆ ಆದೇಶ ನೀಡಿರುವುದರಿಂದ ಸಿದ್ದರಾಮಯ್ಯ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಒತ್ತಾಯಿಸಿ ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಾಯಿಸಿ ಬಿಜೆಪಿ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿ ಜಿಲ್ಲಾ ಪಂಚಾಯಿತಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದ ವೇಳೆ ಅವರುಗಳನ್ನು ಪೊಲೀಸರು ಬಂಧಿಸಿ, ಬಿಡುಗಡೆಗೊಳಿಸಿದರು.

ನಗರದ ಚಾಮರಾಜ ಮೊಹಲ್ಲಾದ ವಿಷ್ಣುವರ್ಧನ ರಸ್ತೆಯಲ್ಲಿರುವ ಬಿಜೆಪಿ ಕಚೇರಿ ಮುಂಭಾಗ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು ಕಪ್ಪುಪಟ್ಟಿ ಧರಿಸಿ 'ಭ್ರಷ್ಟ ಮುಖ್ಯಮಂತ್ರಿಗೆ ಧಿಕ್ಕಾರ', 'ಅಯ್ಯಯ್ಯೋ ಅನ್ಯಾಯ', 'ಎಲ್ಲಿಯ ತನಕ ಹೋರಾಟ ಗೆಲ್ಲುವ ತನಕ ಹೋರಾಟ', '4 ಸಾವಿರ ಕೋಟಿ ಹಗರಣ ನಡೆಸಿದ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ', 'ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಲಿ', 'ತನಿಖೆ ಎದುರಿಸಲು ಸಿದ್ಧರಾಗಿ ಸಿದ್ದಾರಾಮಯ್ಯನವರೇ', 'ಹೈಕೋರ್ಟ್ ತೀರ್ಪನ್ನು ಪೊಲಿಟಿಕಲ್ ಜಡ್ಜ್‌ಮೆಂಟ್ ಎಂದ ಜಮೀರ್ ಅಹಮದ್‌ಗೆ ಧಿಕ್ಕಾರ', 'ಬಂಧಿಸಿ, ಬಂಧಿಸಿ ಸಿದ್ದರಾಮಯ್ಯರನ್ನು ಬಂಧಿಸಿ' ಎಂಬ ಪ್ಲೇಕಾರ್ಡ್ ಪ್ರದರ್ಶಿಸಿ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡುವಂತೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು, ಮುಖಂಡರು ಪ್ರತಿಭಟನೆ ನಡೆಸಿ ಜಿಲ್ಲಾ ಪಂಚಾಯಿತ್ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಈ ವೇಳೆ ಪೊಲೀಸರು ಬಂಧಿಸಿದರು.

ಈ ವೇಳೆ ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಮಾತನಾಡಿ, ಜನಪ್ರತಿನಿಧಿ ನ್ಯಾಯಾಲಯವು ರಾಜ್ಯಪಾಲರ ಆದೇಶವನ್ನು ಎತ್ತಿ ಹಿಡಿದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿಷ್ಪಕ್ಷಪಾತ ತನಿಖೆಗಾಗಿ ರಾಜೀನಾಮೆ ನೀಡಬೇಕಿತ್ತು. ಆದರೆ ಅವರು ಅಧಿಕಾರಕ್ಕೆ ಅಂಟಿಕೊಂಡಿದ್ದಾರೆ' ಎಂದು ಆರೋಪಿಸಿದರು.

ನ್ಯಾಯಾಲಯದ ಸೂಚನೆಯನ್ನೂ ಧಿಕ್ಕರಿಸಿ ಮುಖ್ಯಮಂತ್ರಿಗಳ ರಕ್ಷಣೆಗೆ ನಿಲ್ಲುವ ಮೂಲಕ ಕಾಂಗ್ರೆಸ್ ಸರ್ಕಾರ ರಾಜ್ಯಕ್ಕೆ ಕೆಟ್ಟ ಸಂದೇಶ ರವಾನಿಸುತ್ತಿದೆ. ಅವರ ಲಜ್ಜೆಗೆಟ್ಟ ನಡೆಯನ್ನು ದೇಶ ನೋಡುತ್ತಿದೆ. ಎಂದು ಕಿಡಿಕಾರಿದರು.

ಸಿದ್ದರಾಮಯ್ಯ ವಿರುದ್ಧ ಹಾಡು ಕಟ್ಟಿದ ಶಾಸಕ ಶ್ರೀವತ್ಸ : ಮುಖ್ಯಮಂತ್ರಿ ಸಿದ್ದ ರಾಮಯ್ಯ ವಿರುದ್ಧ ಕೇಳಿ ಬಂದಿರುವ ಪ್ರಕರಣ ಗಳನ್ನು ಹೆಸರಿಸಿ ಶಾಸಕ ಟಿ.ಎಸ್.ಶ್ರೀವತ್ಸ ಪ್ರತಿಭಟನೆಯಲ್ಲಿ ಹಾಡು ಹಾಡಿದರು. 'ಕರ್ನಾಟಕದ ರಾಜ್ಯದಲ್ಲಿ, ಮೈಸೂರು ಮುಡಾದಲ್ಲಿ, 14 ಸೈಟುಗಳನ್ನು ದಲಿತರ ಹೆಸರಿನಲ್ಲಿ ನುಂಗಿದರಣ್ಣ ನುಂಗಿದರಣ್ಣ, ಸಿದ್ರಾಮಣ್ಣ ನುಂಗಿದರಣ್ಣ, ವಾಲ್ಮೀಕಿ ನಿಗಮದಲ್ಲಿ 180 ಕೋಟಿಗಳನ್ನು ನುಂಗಿದರಣ್ಣ ನುಂಗಿದರಣ್ಣ ಸಿದ್ರಾಮಣ್ಣ ಸಿದ್ರಾಮಣ್ಣ. ರಾಜೀನಾಮೆ ನೀಡೋದಿಲ್ಲ, ಭ್ರಷ್ಟಾಚಾರ ಬಿಡುವುದಿಲ್ಲ' ಎಂದು ಹಾಡಿದರು. ಅದಕ್ಕೆ ಕಾರ್ಯಕರ್ತರು ದನಿಗೂಡಿಸಿದರು.

ಮುಂಜಾಗ್ರತೆ ಕ್ರಮವಾಗಿ ಪೊಲೀಸರು ಬಿಜೆಪಿ ಕಚೇರಿಯಿಂದ ಜಿಲ್ಲಾ ಪಂಚಾಯಿತ್ ಕಚೇರಿಗೆ ತಲುಪುವ ಎಲ್ಲಾ ರಸ್ತೆಗಳಲ್ಲಿ ಬ್ಯಾರಿಕೇಡ್ ಅಳವಡಿಸಿ, ಬಿಗಿ ಭದ್ರತೆ ಮಾಡಿದ್ದರು. ಡಿಸಿಪಿ ಮುತ್ತುರಾಜ್ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಗಿರಿಧರ್, ಕೇಬಲ್ ಮಹೇಶ್, ವಕ್ಕಾರ ಮಹೇಶ್, ಜೋಗಿ ಮಂಜು, ಹೇಮಂತ್ ಕುಮಾರ್ ಗೌಡ, ಮಾಜಿ ಮೇಯರ್ ಶಿವಕುಮಾರ್, ಕೆ.ವಸಂತ ಕುಮಾರ್, ರಾಕೇಶ್ ಮತ್ತಿತರರು ಪಾಲ್ಗೊಂಡಿದರು.

ಬಿಜೆಪಿ ಮುತ್ತಿಗೆ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಸಿಎಂ ಸಿದ್ದರಾಮಯ್ಯರಿಗೆ ಮುತ್ತಿಗೆ ಯತ್ನ; ಬಿಜೆಪಿ ಹೇಡಿತನ

ಮೈಸೂರು, ಸೆ.27(ಜಿಎ)–ಬಡವರ ಕಲ್ಯಾಣ ಮತ್ತು ಅಭಿವೃದ್ಧಿಗಾಗಿ ಸಭೆ ಮಾಡಲು ಬಂದ ಸಿದ್ದರಾಮಯ್ಯನವರಿಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದ್ದು ಬಿಜೆಪಿಯವರ ಹೇಡಿತನ ಎಂದು ಎಂ.ಕೆ.ಸೋಮಶೇಖರ್ ಎಂದು ಕಿಡಿಕಾರಿದರು.

ಮೈಸೂರಿನಲ್ಲಿ ಕೆಡಿಪಿ ಸಭೆ ನಡೆಸಲು ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ದ ಪ್ರತಿಭಟನೆ ನಡೆಸುತ್ತಿರುವುದನ್ನು ಖಂಡಿಸಿ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ರಾಮಸ್ವಾಮಿ ವೃತ್ತದಲ್ಲಿ ಪ್ರತಿಭಟನೆ ನಡೆಸಲಾಯಿತು.

ಈ ವೇಳೆ ಮಾತನಾಡಿದ ಅವರು, ನಾಡು ಕಂಡ ಧೀಮಂತ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಇಂದು ತವರು ಜಿಲ್ಲೆಗೆ ಮೈಸೂರು ಜಿಲ್ಲಾ ನಗರ ಸರ್ವತೋಮುಖ ಅಭಿವೃದ್ಧಿ ವಿಷಯವಾಗಿ ಕೆಡಿಪಿ ಸಭೆ ಕರೆದಿದ್ದು ಆಗಮಿಸುವ ವಿಷಯ ತಿಳಿದು ಬಿಜೆಪಿಯ ಮುಖಂಡರು,ಕಾರ್ಯಕರ್ತರು ಜಿಪಂ ಗೆ ಮುತ್ತಿಗೆ ಹಾಕಲು ಯತ್ನಿಸುತ್ತಿರುವುದು ಘೋರ ಅಪರಾಧ ಎಂದು ಬೇಸರ ವ್ಯಕ್ತಡಿಸಿದರು.

ಮುಖ್ಯಮಂತ್ರಿಯವರು ತವರು ಜಿಲ್ಲೆಯವರೇ ಆಗಿದ್ದು ಮೈಸೂರು ಜಿಲ್ಲೆಯಲ್ಲಿ ಯಾರು ಮಾಡಲಾಗದಂತಹ ಐತಿಹಾಸಿಕ ಅಭಿವೃದ್ಧಿಗಳನ್ನು ಮಾಡಿದ್ದಾರೆ.



ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು

ಅಂತಹವರ ಜೊತೆಗೆ ಸಹಕಾರ ನೀಡಿ ಅಭಿವೃದ್ಧಿಗೆ ಸಹಕಾರ ನೀಡದೆ ಅವರ ಮೇಲೆ ಪ್ರತಿಭಟಿಸುತ್ತಿರುವುದು ಬಿಜೆಪಿಯವರಿಗೆ ನಾಚಿಕೆಯಾಗಬೇಕು. ತಮ್ಮ ಊಟದ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದ್ದು ಸಿದ್ದರಾಮಯ್ಯನವರಿಗೆ ಪಾಠ ಹೇಳಲು ಬರುತ್ತಿರುವುದು ನಾಚಿಕೆಗೇಡು. ಹಿಂದೆ ಬಿಜೆಪಿಯಲ್ಲಿ ಮಂತ್ರಿಗಳಾಗಿದ್ದವರು, ಶಾಸಕರಾಗಿದ್ದವರ ಮೇಲೆ ತನಿಖೆ ನಡೆಯಲಿ ಅವರ ಆಸ್ತಿಗಳು ಎಷ್ಟು ಪಟ್ಟು ಹೆಚ್ಚಾಗಿದೆ ಗೊತ್ತಾಗುತ್ತದೆ. ನಿಜವಾಗಿ ತನಿಖೆ ಆದರೆ ಬಿಜೆಪಿಯ ಪ್ರತಿಯೊಬ್ಬ ಮಂತ್ರಿ ಶಾಸಕರು ಜೈಲಿಗೆ ಹೋಗಬೇಕಾಗುತ್ತದೆ ಎಂದರು.

ಎರಡನೇ ಭಾರಿ ಮುಖ್ಯಮಂತ್ರಿಗಳಾಗಿ ಹಲವಾರು ಭಾಗ್ಯಗಳನ್ನು ನೀಡಿ ಮಹಿಳೆಯರು, ಕಾರ್ಮಿಕರು, ಶ್ರಮಿಕರ ಕಣ್ಣೀರೊರೆಸಿದ್ದಾರೆ. ಅಂತಹ ಒಬ್ಬ ನಾಯಕನನ್ನು ಹಣಿಯಲು ಬಿಜೆಪಿ ಜೆಡಿಎಸ್ ಪಕ್ಷಗಳು ನಿರಂತರವಾಗಿ ಗುರಿ ಮಾಡುತ್ತಿರುವುದು ಅವರಿಗಿರುವ ಹೊಟ್ಟೆ ಕಿಚ್ಚನ್ನು ತಿಳಿಸುತ್ತದೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್,ಶ್ರೀಧರ್,ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ,ಮಾಜಿ ಮೇಯರ್ ಟಿ.ಬಿ.ಚಿಕ್ಕಣ್ಣ,ಬ್ಲಾಕ್ ಅಧ್ಯಕ್ಷೆ ಭವ್ಯ, ಆಶ್ರಯ ಸಮಿತಿ ಸದಸ್ಯ ಮಹ್ಮದ್ ಫಾರೂಕ್, ಲೀಲಾ ಪಂಪಾಪತಿ, ಮಹಿಳಾ ಮುಖಂಡರಾದ ವೀಣಾ, ಚಂದ್ರಕಲಾ, ಕಾಂಗ್ರೆಸ್ ಮುಖಂಡರುಗಳಾದ ಜೋಗಿ ಮಹೇಶ್, ವಿಶ್ವನಾಥ್(ವಿಶ್ವ), ಜೈರಾಜ್, ಹರೀಶ್, ರವಿಶಂಕರ್, ಮಾಜಿ ಪಾಲಿಕೆ ಸದಸ್ಯರಾದ ಎಂ.ಸುನೀಲ್, ನಿರಾಲ್ ಶಾ, ಆರ್.ಹೆಚ್.ಕುಮಾರ್, ವಿಜಯ್ ಕುಮಾರ್, ವಿನಯ್ ಕುಮಾರ್, ರಮೇಶ್ ರಾಮಪ್ಪ ಡೈರಿ ವೆಂಕಟೇಶ್,ರೂಪೇಶ್, ರಾಕೇಶ್, ಗಣೇಶ್, ಕೃಷ್ಣರಾಜ ಬ್ಲಾಕ್ ಮೈನಾರಿಟಿ ಅಧ್ಯಕ್ಷ ಕಲೀಮ್ ಷರೀಫ್, ಶಾದಿಖ್ ಉಲ್ಲಾ ರೆಹಮಾನ್, ನಾಸೀರ್, ಲಾಲು, ಮಂಜು, ಶಂಕರ್, ಪುಟ್ಟಣ್ಣ ನವೀನ್ ಎಂ.ಕೆಂಪಿ, ಸುನೀಲ್ ನಾರಾಯಣ್ ಪಾಲ್ಗೊಂಡಿದರು.

ತುಮಕೂರು ಮರ್ಚೆಂಟ್ಸ್ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್‌ನಲ್ಲಿ ಗೋಲ್ಡ್ ಕಾಯಿನ್ ಎಟಿಎಂ ಸೇವೆ

ಮೈಸೂರು, ಸೆ.27– ತುಮಕೂರು ಮರ್ಚೆಂಟ್ಸ್ ಕ್ರೆಡಿಟ್ ಕೋ-ಆಪರೇಟಿವ್ ಲಿಮಿಟೆಡ್ ಭಾರತದ ಬ್ಯಾಂಕಿಂಗ್ ಕ್ಷೇತ್ರದ ಇತಿಹಾಸದಲ್ಲೇ ಮೊಟ್ಟಮೊದಲನೇ ಬಾರಿಗೆ ಗೋಲ್ಡ್ ಕಾಯಿನ್ ಎಟಿಎಂ ಸೇವೆಯನ್ನು ಸೆ.29ರಂದು ಬೆಳಿಗ್ಗೆ 10 ಗಂಟೆಗೆ ತುಮಕೂರಿನ ಎಂ.ಜಿ.ರಸ್ತೆಯಲ್ಲಿರುವ (ಕೃಷ್ಣ ಟಾಕೀಸ್ ಪಕ್ಕ) ಎಟಿಎಂ. ಕಟ್ಟಡದಲ್ಲಿ ಗೋಲ್ಡ್ ಕಾಯಿನ್ ಎಟಿಎಂ ಉದ್ಘಾಟಿಸಲಿದೆ.

TMCC ISO 9001-2015 Certified

ಸಿದ್ಧಗಂಗಾ ಮಠದ ಶ್ರೀಗಳಾದ ಸಿದ್ದಲಿಂಗ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಹಕಾರ ಸಚಿವ ಕೆ.ಎನ್. ರಾಜಣ್ಣ, ತುಮಕೂರು ನಗರದ ಶಾಸಕ ಜಿ.ಬಿ.ಜ್ಯೋತಿ ಗಣೇಶ್, ಮಾಜಿ ಸಚಿವ ಎಸ್.ಶಿವಣ್ಣರವರು ಪಾಲ್ಗೊಳ್ಳಲಿದ್ದಾರೆ. ಸಂಸ್ಥೆಯ ಅಧ್ಯಕ್ಷರಾದ ಎನ್.ಎಸ್. ಜಯಕುಮಾರ್, ಸಂಸ್ಥೆಯ ಸದಸ್ಯರು ಗ್ರಾಹಕರ ಅನುಕೂಲಕ್ಕಾಗಿ ಈ ನೂತನ ಸೇವೆಯನ್ನು ಪ್ರಾರಂಭಿಸಲಿದ್ದಾರೆ.

ಸಿಎಂ ಸಿದ್ದರಾಮಯ್ಯರೊಂದಿಗೆ ನಾವಿದ್ದೇವೆ...!

ಘೋಷಣೆ ಕೂಗಿ ಅಹಿಂದ ಮುಖಂಡರ ಬೆಂಬಲ



ಬಿಜೆಪಿ ಪ್ರತಿಭಟನೆ ವಿರೋಧಿಸಿ, ಸಿಎಂ ಪರವಾಗಿ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ವತಿಯಿಂದ ಜಿಲ್ಲಾ ಪಂಚಾಯಿತಿ ಮುಂಭಾಗ ಪ್ರತಿಭಟನೆ ನಡೆಸಿದರು.

ಮೈಸೂರು, ಸೆ.27(ಜಿಎ)– ಬಿಜೆಪಿ ನಡೆಸುತ್ತಿರುವ ಪ್ರತಿಭಟನೆ ಖಂಡಿಸಿ, ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಆಶ್ರಯದಲ್ಲಿ ಜಿಲ್ಲಾ ಪಂಚಾಯಿತಿ ಮುಂಭಾಗ ಜಮಾಯಿಸಿದ ಅಹಿಂದ ಮುಖಂಡರು 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ನಾವಿದ್ದೇವೆ' ಎಂಬ ಫಲಕಗಳನ್ನು ಹಿಡಿದು ಘೋಷಣೆ ಕೂಗಿದರು.

ಈ ವೇಳೆ ವೇದಿಕೆ ಅಧ್ಯಕ್ಷ ಕೆ.ಎಸ್. ಶಿವರಾಮು ಮಾತನಾಡಿ, ಈ ಹಿಂದೆ ಎರಡು ಬಾರಿ ಕೆಡಿಪಿ ಸಭೆ ರದ್ದಾಗಿತ್ತು, ಈ ಬಾರಿ ಮುಖ್ಯಮಂತ್ರಿ ಆ ಸಭೆಯಲ್ಲಿ ಭಾಗವಹಿಸುವಾಗ ಪ್ರತಿಭಟನೆ ನಡೆಸುತ್ತಿರುವುದು ಖಂಡನೀಯ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ತಂಡದ ಎಲ್.ಆರ್.ಮಹದೇವಸ್ವಾಮಿ ನಂದೀಶ್ ಹಂಚೆ ಹೆಸರಿನಲ್ಲಿ ಅಕ್ರಮ ಆಸ್ತಿ ಮಾಡಿದ್ದು, ಅವರಿಗೆ ಸಿದ್ದರಾಮಯ್ಯ ಅವರ ರಾಜೀನಾಮೆ ಕೇಳುವ ನೈತಿಕತೆಯಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಂತರ ಮುಖ್ಯಮಂತ್ರಿ ಸಿದ್ದ ರಾಮಯ್ಯ ಜಿಲ್ಲಾ ಪಂಚಾಯಿತ್ ಸಂಭಾಗಣಕ್ಕೆ ಆಗಮಿಸುತ್ತಿದಂತೆ, 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ನಾವಿದ್ದೇವೆ' ಎಂದು ಘೋಷಣೆ ಕೂಗಿ ಕಾರಿನ ಮುಂದೆ ಬಂದ ತಕ್ಷಣ ಕಾರಿನಿಂದ ಕೆಳಗೆ ಇಳಿದು ಎಲ್ಲರತ್ತ ಕೈ ಬೀಸಿದರು. ಮಾಜಿ ಮೇಯರ್ ನಾರಾಯಣ್, ರವಿನಂದನ್, ಲೋಕೇಶ್ ಮಾದಾಪುರ ಮತ್ತಿತರರು ಉಪಸ್ಥಿತರಿದ್ದರು.

ಮುಖ್ಯ ಕಾರ್ಯದರ್ಶಿ, ಡಿಜಿಪಿ ಮೇಲೂ ಸಿಎಂಗೆ ನಂಬಿಕೆ ಇಲ್ಲ

ಮಾಜಿ ಡಿಸಿಎಂ ಡಾ. ಅಶ್ವತ್ಥನಾರಾಯಣ್ ವ್ಯಂಗ್ಯ

ಬೆಂಗಳೂರು, ಸೆ. 27(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸಂಪುಟಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಮೇಲೆ ಅನುಮಾನ, ಡಿಜಿಪಿ ಮೇಲೂ ನಂಬಿಕೆ ಇಲ್ಲ ಎಂದು ಮಾಜಿ ಉಪಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವಥನಾರಾಯಣ್ ಇಂದಿಲ್ಲಿ ಟೀಕಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಪಾಲರಿಗೆ ಚೀಫ್ ಸೆಕ್ರೆಟರಿಯೂ ಉತ್ತರ ಕೊಡುವಂತಿಲ್ಲ, ಕ್ಯಾಬಿನೆಟ್ ಮೂಲಕ ಹೋಗಬೇಕು ಎಂದು ನಿರ್ಧರಿಸಿದ್ದಾರೆ. ರಾಜ್ಯಪಾಲರಿಗೇ ಮಾಹಿತಿ ಕೊಡುವುದಿಲ್ಲವೆಂದರೆ, ಕಾಂಗ್ರೆಸ್ ಪ್ರಜಾಪ್ರಭುತ್ವ ಇದೇನಾ ಎಂದು ಪ್ರಶ್ನಿಸಿದರು.

ಏಕೆ ಭಯ, ಆತಂಕ, ಏಕೆ ತಡೆಗೋಡೆ ಮಾಡುತ್ತಿದ್ದೀರಿ. ಸಿದ್ದರಾಮಯ್ಯ ತಮ್ಮ ಹಿರಿತನ, ಅನುಭವಕ್ಕೆ ಅವರೇ ಮಸಿ ಬಳಿದುಕೊಂಡಿದ್ದಾರೆ. ಮಸಿ ಬಳಿದುಕೊಂಡು ಮಸಿ ಇಲ್ಲ ಎನ್ನುತ್ತಿದ್ದಾರೆ.

ಕೇಂದ್ರ ಸರ್ಕಾರದ ಅಧಿಕಾರಿಗಳ, ನೌಕರರ ವಿರುದ್ಧ ತನಿಖೆ ಮಾಡಲು ಸಿಬಿಐಗೆ ಮುಕ್ತ ಅವಕಾಶವಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ರಾಜ್ಯ ಸರ್ಕಾರ ಅನುಮತಿ ಹಿಂಪಡೆಯುವುದಾಗಿ ಹೇಳಿದೆ. ಏನೇನು ಗೋಲ್‌ಮಾಲ್ ಮಾಡಿದ್ದೀರಿ. ಇಷ್ಟು ಆತಂಕ, ಭಯವೇಕೆ. ಮಹರ್ಷಿ ವಾಲ್ಮೀಕಿ ನಿಗಮದ ಹಗರಣ ಕುತ್ತಿಗೆಗೆ ಬರುವ ಭಯದಲ್ಲಿ ಹೀಗೆ ಮಾಡುತ್ತಿದ್ದಾರೆ. ಮುಡಾದಲ್ಲಿ ಸಿಬಿಐ ತನಿಖೆ ಆದರೆ ತಮಗೆ ಕಷ್ಟವೆಂದು ಇದನ್ನು ತಡೆಯಲು ಮುಂದಾದಂತಿದೆ.



ಮಹರ್ಷಿ ವಾಲ್ಮೀಕಿ ನಿಗಮದ ಹಗರಣದಲ್ಲಿ ಶೇ.100ರಷ್ಟು ಭ್ರಷ್ಟಾಚಾರ ಆಗಿದೆ. ಇದನ್ನು ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ಮುಡಾ ವಿಚಾರದಲ್ಲಿ ತಾವು ಸತ್ಯ ಹರಿಶ್ಚಂದ್ರ ಎನ್ನುತ್ತಿದ್ದರು.

ಭೂಮಿ ಕಬಳಿಕೆ, ದಲಿತರ ಜಮೀನು ಅಕ್ರಮ ಬಳಸಿಕೊಂಡದ್ದನ್ನು ಇಲ್ಲ ಎನ್ನುತ್ತಿದ್ದಾರೆ. ಮುಡಾ ಅಕ್ರಮದಲ್ಲಿ ಸಿದ್ದರಾಮಯ್ಯ ಕುಟುಂಬ ಭಾಗಿಯಾಗಿರುವ ವಿಷಯ ಬಯಲಾಗಿದೆ.

ನ್ಯಾಯಾಲಯವೂ ತೀರ್ಪು ಕೊಟ್ಟಿದೆ, ಲೋಪದ ಬಗ್ಗೆ ತಿಳಿಸಿದೆ. ಇಷ್ಟಬಂದಂತೆ ಕಾನೂನು ತಿದ್ದಿ ಶೇ.50:50 ರ ಅನುಪಾತ ಮಾಡಿದ್ದಾರೆ. ಲೆಕ್ಕ ಕೇಳಿದರೆ ಕೊಡುವುದಿಲ್ಲ, ರಾಜ್ಯಪಾಲರನ್ನು ದೂರುತ್ತಾರೆ. ಅವರ ವಿರುದ್ಧ ಇಲ್ಲಸಲ್ಲದ ಆಪಾದನೆ ಮಾಡುತ್ತಿದ್ದಾರೆ.

ಕಾಂಗ್ರೆಸ್ಸಿಗರು ಸಂವಿಧಾನದ ವಿರೋಧಿಗಳು, ಸರ್ಕಾರಿ ವ್ಯವಸ್ಥೆ ಕಾಂಗ್ರೆಸ್‌ಮಯ ಮಾಡಿದ್ದಾರೆ. ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ನಿರಂತರವಾಗಿ ಅಧಿಕಾರ ದುರ್ಬಳಕೆ, ಭ್ರಷ್ಟಾಚಾರ ನಡೆಸಿದೆ. ಅಭಿವೃದ್ಧಿ ಶೂನ್ಯವಾಗಿದೆ. ರಾಜ್ಯದ ಉದ್ದಗಲಕ್ಕೂ ನಾಗರಿಕರು, ರೈತರು ಮತ್ತು ಅಧಿಕಾರಿಗಳ ಆತ್ಮಹತ್ಯೆಗಳು ಹೆಚ್ಚಾಗಿವೆ ಎಂದರು.

ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಈಗಿನ ನಡವಳಿಕೆ ಸಂವಿಧಾನ, ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾಡಿದ ಅಪಚಾರ. 40 ವರ್ಷಗಳ ರಾಜಕೀಯ ಜೀವನದಲ್ಲಿ ದಾಖಲೆ ಸಮೇತ ಸಿಕ್ಕಿ ಬಿದ್ದಿರುವುದು ಇದೇ ಪ್ರಥಮ. ಹಿಂದಿನ ಅವಧಿಯಲ್ಲಿ ಅವರ ವಿರುದ್ಧ ಸುಮಾರು 40ಕ್ಕೂ ಹೆಚ್ಚು ಆರೋಪಗಳಿದ್ದವು. ಆಗ ಎಸಿಬಿ ಮಾಡಿ ಎಲ್ಲ ಪ್ರಕರಣಗಳನ್ನು ಮುಚ್ಚಿದ್ದರು. ಹಗರಣಗಳೆಲ್ಲವನ್ನೂ ಮುಚ್ಚಿ ಹಾಕಲು ಲೋಕಾಯುಕ್ತವನ್ನೇ ಮುಚ್ಚಿದ್ದರು ಎಂದರು.

ಸಮಸ್ಯೆ ಆಲಿಸುವಂತೆ ಆಗ್ರಹಿಸಿ ರೈತರ ಪ್ರತಿಭಟನೆ

ಮೈಸೂರು, ಸೆ.27(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ರೈತರ ಸಮಸ್ಯೆ ಆಲಿಸಬೇಕು ಎಂದು ಒತ್ತಾಯಿಸಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ವತಿಯಿಂದ ಜಿಲ್ಲಾ ಪಂಚಾಯಿತ್ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ಸಂಘದ ರಾಜ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್ ಮಾತನಾಡಿ, ರೈತರು ಅನೇಕ ಸಮಸ್ಯೆ ಎದುರಿಸುತ್ತಿದ್ದು, ಈ ಬಗ್ಗೆ ಅನೇಕ ಪ್ರತಿಭಟನೆ, ಮುಷ್ಕರ ನಡೆಸಿದ್ದೇವೆ. ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಸಭೆ ನಡೆಸಿ ಸಮಸ್ಯೆ ಹೇಳಿಕೊಂಡರೂ ಅವು ಬಗೆಹರಿದಿಲ್ಲ. ಹೀಗಾಗಿ ಮುಖ್ಯಮಂತ್ರಿಗಳೊಂದಿಗೆ ಮಾತುಕತೆಗೆ ಅವಕಾಶ ನೀಡದಿದ್ದರೆ ಶನಿವಾರದಿಂದ ಅವರ ಮನೆ ಮುಂದೆ ಧರಣಿ ಕೂರುತ್ತೇವೆ ಎಂದು ಎಚ್ಚರಿಕೆ ನೀಡಿದರು.



ಸಮಸ್ಯೆ ಆಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ರೈತರು ಮನವಿ ಸಲ್ಲಿಸಿದರು.

ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು. ಈ ವೇಳೆ ರಾಜ್ಯ ಉಪಾಧ್ಯಕ್ಷ ಕೆರೆಹುಂಡಿ ರಾಜಣ್ಣ, ಅಂಕನಹಳ್ಳಿ ತಿಮ್ಮಪ್ಪ, ಅರಸೀಕೆರೆ ಪ್ರಸನ್ನ, ಮೀಸೆ ಮಂಜಣ್ಣ, ಮೈಸೂರು ಜಿಲ್ಲಾಧ್ಯಕ್ಷ ಹಾಡ್ಯ ರವಿ, ದೇವೇಂದ್ರ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಪೆಟ್ಟಾರಾಪ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕೃಷ್ಣಂ ಪ್ರಣಯ ಸಖಿ (ಕ) ದೇವರ (ಕ)	2+2 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ದೇವರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ನೈಟ್ ರೋಡ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ದೇವರ (ತೆ)	4 ಪ್ರದರ್ಶನಗಳು
ರಾಜಕಮಲ್	
ಹಿಟ್ಲರ್ (ತ)	4 ಪ್ರದರ್ಶನಗಳು
ಸಂಗಂ	
ಮೆಯ್ಯಳಗನ್ (ತ)	4 ಪ್ರದರ್ಶನಗಳು
ಲಿಡೋ	
ಹಗ್ಗ (ಕ)	2 ಪ್ರದರ್ಶನಗಳು
ಉಪೇಂದ್ರ (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
ಪೆಟ್ಟಾರಾಪ್ (ತ)	4 ಪ್ರದರ್ಶನಗಳು
ಪ್ರಭಾ	
ಸಂಜು (ಕ)	2 ಪ್ರದರ್ಶನಗಳು
ನೈಟ್ ರೋಡ್ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಲುಕ್ ಬ್ಯಾಕ್ ಬಿಯಾಂಡ್ ದಿ ಬ್ಲೇಡ್ಸ್ (ಇಂ): ಬೆ.10.20ಕ್ಕೆ, ಮೆಯ್ಯಳಗನ್ (ತ): ಮ.12.45ಕ್ಕೆ, ಸಂ.4.15ಕ್ಕೆ, ದೇವರ 1 (ತೆ): ರಾ.7.45ಕ್ಕೆ.
ಸ್ಕ್ರೀನ್ 2	ಸ್ತ್ರೀ 2 (ಹಿಂ): ಬೆ.10.10ಕ್ಕೆ, ಪೆಟ್ಟಾರಾಪ್ (ತ): ಮ.1.15ಕ್ಕೆ, ಹಿಟ್ಲರ್ (ತ): ಸಂ.4.15ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7ಕ್ಕೆ, ಮೆಯ್ಯಳಗನ್ (ತ): ರಾ.10.05ಕ್ಕೆ.
ಸ್ಕ್ರೀನ್ 3	ಕೇದಾರ್‌ನಾಥ್ ಕುರಿ ಫಾರಂ (ಕ): ಬೆ.10.40ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.10ಕ್ಕೆ, ಸಂಜು (ಕ): ಸಂ.4.25ಕ್ಕೆ, ಅನ್ನ (ಕ): ರಾ.7ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ರಾ.9.40ಕ್ಕೆ
ಸ್ಕ್ರೀನ್ 4	ದೇವರ 1 (ತೆ): ಬೆ.8ಕ್ಕೆ, ಬೆ.11.45ಕ್ಕೆ, ಮ.3.15ಕ್ಕೆ, ಸಂ.6.45ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕೃಷ್ಣಂ ಪ್ರಣಯ ಸಖಿ (ಕ): ಮ.1.15ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.25ಕ್ಕೆ, ಹಿಟ್ಲರ್ (ತ): ರಾ.9.45ಕ್ಕೆ.
ಸ್ಕ್ರೀನ್ 2	ದೇವರ 1 (ತೆ): ಬೆ.8ಕ್ಕೆ, ಬೆ.11.20ಕ್ಕೆ, ಮ.2.40ಕ್ಕೆ, ಸಂ.6.05ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ದೇವರ 1 (ಕ): ಬೆ.10ಕ್ಕೆ, ಮ.1.20ಕ್ಕೆ, ಸಂ.4.40ಕ್ಕೆ, ದೇವರ 1 (ತೆ): ರಾ.8ಕ್ಕೆ.
ಸ್ಕ್ರೀನ್ 4	ಇಬ್ಬನಿ ತಬ್ಬಿದ ಇಳೆಯಲಿ (ಕ): ಬೆ.10.30ಕ್ಕೆ, ಮ.1.30ಕ್ಕೆ, ಹಿಟ್ಲರ್ (ತ): ಸಂ.4.35ಕ್ಕೆ, ದೇವರ 1 (ತೆ): ರಾ.7.15ಕ್ಕೆ

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ದ್ವೇಷ ರಾಜಕಾರಣಕ್ಕೆ ದಾರಿ ಆಗಬಾರದೆಂಬ ಕಾರಣಕ್ಕೆ ಸಿಬಿಐಗೆ ಮುಕ್ತ ಅನುಮತಿ ಹಿಂಪಡೆಯಲಾಗಿದೆ

● ಡಿಸಿಎಂ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯೆ ● ಸಿಬಿಐ ಬಗ್ಗೆ ಬಿಜೆಪಿಯವರು, ದೇವೇಗೌಡರು, ಕುಮಾರಸ್ವಾಮಿ ಏನಂದಿದ್ದರೂ ನೆನಪಿಸಿಕೊಳ್ಳಲಿ

ಬೆಂಗಳೂರು, ಸೆ. 27(ಕೆಎಂಶಿ)– ದ್ವೇಷ ರಾಜಕಾರಣಕ್ಕೆ ದಾರಿ ಆಗಬಾರದು ಎನ್ನುವ ಕಾರಣಕ್ಕೆ ಸಿಬಿಐಗೆ ನೀಡಿದ್ದ ಮುಕ್ತ ಅನುಮತಿ ಅಧಿಕಾರ ಹಿಂದಕ್ಕೆ ಪಡೆಯಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗಂಭೀರ ಪ್ರಕರಣಗಳು ಎದುರಾದಾಗ ರಾಜ್ಯ ಸರ್ಕಾರದ ಅಧಿಕಾರಿಗಳು ತನಿಖೆಗೆ ಸೂಕ್ತರಲ್ಲ ಎನ್ನುವ ಅಭಿಪ್ರಾಯಕ್ಕೆ ಬಂದರೆ, ಅಂತಹ ಸಂದರ್ಭದಲ್ಲಿ ಸಿಬಿಐಗೆ ನೀಡುವ ಬಗ್ಗೆ ಚಿಂತನೆ ಮಾಡಲಾಗುವುದು ಎಂದರು.

ಸಿಬಿಐ ಬಗ್ಗೆ ಜನತಾದಳದ ಹಿರಿಯ ನಾಯಕ ಎಚ್.ಡಿ.ದೇವೇಗೌಡರು ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಿಂದೆ ಏನು ಹೇಳಿದ್ದರು ಎಂಬುದು ಎಲ್ಲರಿಗೂ ತಿಳಿದಿದೆ ಬಿಜೆಪಿಯವರು ಸಿಬಿಐ ಅನ್ನು ಕಾಂಗ್ರೆಸ್ ಬ್ಯೂರೋ ಆಫ್ ಏಜೆನ್ಸಿ ಎಂದು ಕರೆದಿದ್ದರು.

ಸಿಬಿಐಗೆ ಯಾವ, ಯಾವ ಪ್ರಕರಣಗಳನ್ನು ನೀಡಲಾಗಿತ್ತು, ಅವುಗಳು ಏನಾಗಿವೆ, ಐಎಂಎ ಪ್ರಕರಣ ಏನಾಗಿದೆ ಎಂಬುದರ ಬಗ್ಗೆ ಈಗ ಚರ್ಚಿಸುವುದಿಲ್ಲ.

ಸಿದ್ದರಾಮಯ್ಯ ಅವರ ರಕ್ಷಣೆಗೆ ಸಿಬಿಐ ತನಿಖೆ ತಪ್ಪಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂಬ ಆರೋಪ ವಿರೋಧ ಪಕ್ಷದವರದು. ಅವರು ಏನನ್ನೇ ಮಾತನಾಡಿಕೊಳ್ಳಲಿ. ಇದರ ಬಗ್ಗೆ ಬೇರೆ ಸಮಯದಲ್ಲಿ ಮಾತನಾಡೋಣ ಎಂದರು.

ಅನೇಕ ವಿಚಾರಗಳನ್ನು ಮುಖ್ಯಮಂತ್ರಿಗಳು ಹಾಗೂ ಕ್ಯಾಬಿನೆಟ್ ಗಮನಕ್ಕೆ ತರದೇ ತೀರ್ಮಾನ ಮಾಡಲು ಆಗುವುದಿಲ್ಲ, ಆದ್ದರಿಂದಲೇ ರಾಜ್ಯಪಾಲರ ಪತ್ರಕ್ಕೆ ಸಂಪುಟದಲ್ಲಿ ಒಪ್ಪಿಗೆ ಪಡೆದು ಉತ್ತರ ನೀಡಬೇಕು ಎನ್ನುವ ತೀರ್ಮಾನ ತೆಗೆದುಕೊಂಡಿರುವುದು.

ನನಗೂ ನೀತಿ, ನಿಯಮಗಳ ಬಗ್ಗೆ ಸ್ವಲ್ಪ ತಿಳುವಳಿಕೆ ಇದೆ. ನಾನು ವಿದ್ಯಾವಂತ, ಬುದ್ಧಿವಂತ ಅಲ್ಲದಿದ್ದರೂ ಪ್ರಜ್ಞಾವಂತಿಕೆ ಹೊಂದಿದ್ದೇನೆ. ಪ್ರತಿಯೊಂದಕ್ಕೂ ನಿಯಮವಿರುತ್ತದೆ. ರಾಜ್ಯಪಾಲರ ಕಚೇರಿಗೆ ಸರ್ಕಾರದ ಮುಖ್ಯಕಾರ್ಯದರ್ಶಿಗಳ ಮೂಲಕ ಉತ್ತರ ಹೋಗಬೇಕು.

ನನ್ನ ಕಚೇರಿಗೆ ಕೆಲವು ದಿನಗಳ ಹಿಂದೆ ಡಿನೋಟಿಫಿಕೇಷನ್ ಅಥವಾ ರೀ–ಡೂ ಸಂಬಂಧಪಟ್ಟ ಕಡತ ಬಂದಿತ್ತು ನನ್ನ ಕಾರ್ಯದರ್ಶಿ ನನಗೆ ಕಳುಹಿಸಿದ್ದರು. ಇದಕ್ಕೆ ನಾನು, ಬೇರೆಯವರಿಗೆ ಉತ್ತರ ಕೊಡಲು ಆಗುವುದಿಲ್ಲ ಕ್ಯಾಬಿನೆಟ್‌ನಲ್ಲಿ ಈ ಹಿಂದೆ ತೀರ್ಮಾನವಾದಂತೆ, ಸಂಪುಟ ಉಪ ಸಮಿತಿ ರಚನೆಯಾಗಿದೆ ಅಲ್ಲಿಗೆ ಕಳುಹಿಸಿ ಎಂದು ಸೂಚಿಸಿದೆ.

ರಾಜಭವನದಿಂದ ಮಾಹಿತಿ ಸೋರಿಕೆ ಆಂತರಿಕ ವಿಚಾರ, ಇದರ ಬಗ್ಗೆ ನನಗೆ ಮಾಹಿತಿಯಿಲ್ಲ. ಲೋಕಾಯುಕ್ತ ಕಚೇರಿಯಲ್ಲಿ ಏನು ನಡೆಯುತ್ತಿದೆ ಎನ್ನುವ ಬಗ್ಗೆಯೂ ಮಾಹಿತಿಯಿಲ್ಲ. ಮುಖ್ಯಮಂತ್ರಿ ವಿರುದ್ಧ ಎಫ್‌ಐಆರ್ ದಾಖಲಾದರೆ ಪಕ್ಷಕ್ಕೆ ಯಾವ ಮುಜುಗರವೂ ಆಗುವುದಿಲ್ಲ ಎಂದರು.


ಮೈಸೂರು ನಗರ, ಯುವ ಜನತಾದಳ ಅಧ್ಯಕ್ಷರು
ಕೆಎಸ್‌ಟಿಡಿಸಿ, ಮಾಜಿ ನಿರ್ದೇಶಕರಾದ
ಲೋಕೇಶ್ ಸೋಮಣ್ಣ
ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಹೆಚ್.ಎಸ್.ಸಂತೋಷ್
ಜೆಡಿಎಸ್ ಯುವ ಮುಖಂಡರು, ಮಾಜಿ ನಿರ್ದೇಶಕರು
ಜಂಗಲ್ ಲಾಡ್ಜ್ & ರೆಸಾರ್ಟ್ ಕರ್ನಾಟಕ ಸರ್ಕಾರ
ರವಿ ನಾಗೇಂದ್ರ
ಜೆಪಿಎನ್ ಪ್ರಾಪರ್ಟೀಸ್
VISMAYA
ADVERTISERS
8050302424